# ಅನುದಿನದ ಆಹಾರ

**ANUDHINADA AHARA - September 2014**

ಸೆಪ್ಟೆಂಬರ್ - 2014

ಮರ 15 ಹಣ್ಣು 9 Tree 15 Fruit 9

## ನನಗಾಗಿ ಪರಿತಪಿಸುವವನು ಇರುವನಾ!

"ನಿಂದೆಯಿಂದ ಖಿನ್ನನಾಗಿ ಕುಂದಿಹೋಗಿದ್ದೇನೆ. ಕರುಣಾಳುಗಳನ್ನು ನಿರೀಕ್ಷಿಸಿದೆ ದೊರೆಯಲಿಲ್ಲ, ಸಂತೈಸುವವರನ್ನು ಹಾರೈಸಿದೆ ಸಿಕ್ಕಲಿಲ್ಲ" (ಕೀರ್ತನೆ 69.20).

ಈ ಕೀರ್ತನೆಯಲ್ಲಿ ದಾವೀದನು ತನ್ನ ಕುರಿತಾಗಿಯೂ, ದಾವೀದನ ಕುಮಾರನಾದ ಯೇಸುಕ್ರಿಸ್ತನ ಕುರಿತಾಗಿಯೂ ಬರೆಯುತ್ತಾನೆ. 21ನೇ ವಚನದಲ್ಲಿ "ನನಗೆ ಉಣ್ಣುವದಕ್ಕೆ ಕಹಿಯ ವಸ್ತುವನ್ನೂ, ಬಾಯಾರಿದಾಗ ಹುಳಿತ ದ್ರಾಕ್ಷಾರಸವನ್ನೂ ಕೊಟ್ಟರು" ಎಂದು ಶಿಲುಬೆಯ ದೃಶ್ಯ ಬರೆಯಲ್ಪಟ್ಟಿರುವದು.

ಶಿಲುಬೆಯಲ್ಲಿನ ಶ್ರಮೆಯ ಸಮಯದಲ್ಲಿ ಯೇಸುಕ್ರಿಸ್ತನು, ತನಗಾಗಿ ಪರಿತಪಿಸುವವರು ಇರುವರಾ? ಸಂತೈಸುವವರು ಇರುವರಾ? ತನ್ನ ಭಾರವನ್ನು ಹೊರುವ ಸ್ನೇಹಿತರು ಇರುವರಾ? ಎಂದು ಕಾತರದಿಂದ ನಿರೀಕ್ಷಿಸಿದನು. ಪೌಳಿಯ ಒಡಕಿನಲ್ಲಿ ನಿಲ್ಲುವದಕ್ಕೂ ಗೋಡೆಯನ್ನು ಗಟ್ಟಿಮಾಡುವದಕ್ಕೂ ತಕ್ಕವನನ್ನು ಹುಡುಕಲು ಯಾರೂ ಸಿಕ್ಕಲಿಲ್ಲ ಎಂದು ಪ್ರವಾದಿಯಾದ ಯೆಹೆಜ್ಕೇಲನು ತನ್ನ ಪ್ರವಾದನೆಯಲ್ಲಿ ಬರೆಯುತ್ತಾನೆ. (ಯೆಹೆ. 22:30). ಅದರಂತೆಯೇ, "ನಾನು, ನೋಡಲು ಸಹಾಯಕರು ಯಾರೂ ಇರಲಿಲ್ಲ. ಯಾವ ಬೆಂಬಲವೂ ಇಲ್ಲದ್ದನ್ನು ಕಂಡು ಸ್ತಬ್ಧನಾದೆನು" (ಯೆಶಾ. 63:5) ಎಂದು ಯೆಶಾಯನು ಕ್ರಿಸ್ತನ ಶ್ರಮೆಯ ಕುರಿತಾಗಿ ಪ್ರವಾದಿಸಿರುವನು.

### ಗೆತ್ಸೇಮನೆ ತೋಟ!

ಯೇಸುಕ್ರಿಸ್ತನು ಶಿಲುಬೆಗೆ ಹಾಕಲ್ಪಡುವ ಹಿಂದಿನ ದಿನ. ತನ್ನ ಶಿಷ್ಯರೊಂದಿಗೆ ಯೆರೂಸಲೇಮಿನಿಂದ ಕಿದ್ರೋನ್ ಹಳ್ಳದ ಮಾರ್ಗವಾಗಿ ಎಣ್ಣೇಮರಗಳ ಗುಡ್ಡದಲ್ಲಿರುವ ಗೆತ್ಸೇಮನೆ ತೋಟಕ್ಕೆ ಬಂದನು. "ಇನ್ನು ಹಿಂತಿರುಗಿ ಬಾರದ ಸ್ಥಳಕ್ಕೆ ಹೋಗುತ್ತೇನೆ" ಎಂದು ಆತನು ಅರಿತಿದ್ದನು.

ಮಾರನೆಯ ದಿನ ಆತನು ಶಿಲುಬೆಯಲ್ಲಿ ಕಠೋರವಾಗಿ ಜಜ್ಜಲ್ಪಟ್ಟು, ಬೆತ್ತಲೆಯಾಗಿ ತೂಗುಹಾಕಲ್ಪಡಲಿಕ್ಕಿರುವನು. ನಿಂದೆ ಅವಮಾನಗಳನ್ನು ಸಹಿಸಿಕೊಳ್ಳಬೇಕು. ಪ್ರಪಂಚದ ಪಾಪ, ಶಾಪ, ವ್ಯಾಧಿ ಎಲ್ಲವನ್ನೂ ಒಂಟಿಯಾಗಿ ಹೊರಬೇಕು. ಕ್ರಿಸ್ತನ ಆಂತರ್ಯವೋ, ತನಗಾಗಿ

ಪರಿತಪಿಸುವವನು ಇದ್ದನೋ? ಎಂದು ಹುಡುಕಿತು. ಆತನ ಆಂತರ್ಯದ ನೋವನ್ನು, ಭಾರವನ್ನೂ ಆತನ ಶಿಷ್ಯರು ಅರಿತುಕೊಳ್ಳಲಿಲ್ಲ. ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳಂತಿತ್ತು" (ಲೂಕ. 22:44) ಎಂದು ಸತ್ಯವೇದ ಹೇಳುತ್ತದೆ. ಮರಣಕ್ಕೆ ತಪ್ಪಿಸಲು ಶಕ್ತನಾಗಿರುವ ತಂದೆ ದೇವರಿಗೆ ಬಲವಾಗಿ ಮೊರೆಯಿಟ್ಟನು (ಇಬ್ರಿ. 5:7).

ಶರೀರದ ವೇದನೆಗಿಂತಲೂ, ಆತ್ಮದಲ್ಲಿನ ವ್ಯಾಕುಲತೆ, ಬಹಳ ವೇದನೆ ಕೊಡುವಂಥದ್ದು. ಮರಣದಂಡನೆಗಿಂತಲೂ, ಮರಣ ದಂಡನೆಗಾಗಿ ಕಾದಿರುವದು ದೊಡ್ಡ ದಂಡನೆ. ಆತನು ಆ ಸಮಯದಲ್ಲಿ ಆತ್ಮಹತ್ಯೆಯನ್ನು ಬಯಸಲಿಲ್ಲ. ತನ್ನೊಂದಿಗೆ ಪ್ರಾರ್ಥಿಸಲು ಯಾರಾದರೂ ಇರುವರಾ? ಎಂದು ಹಂಬಲಿಸಿದನು. ಆದ್ದರಿಂದಲೇ ನಿದ್ರೆ ಮಾಡುತ್ತಿದ್ದ ಶಿಷ್ಯರನ್ನು ನೋಡಿ ನನ್ನೊಡನೆ ಸ್ವಲ್ಪ ಸಮಯವಾದರೂ ಎಚ್ಚರವಿದ್ದು ಪ್ರಾರ್ಥಿಸಲಾರಿರಾ? (ಮತ್ತಾ. 26:41) ಎಂದು ಹೇಳುತ್ತಾನೆ. ಇನ್ನೊಂದೆಡೆ ತಂದೆಯ ಬಳಿ "ನನ್ನ ತಂದೆಯೇ ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ; ಹೇಗೂ ನನ್ನ ಚಿತ್ತದಂತಲ್ಲ, ನಿನ್ನ ಚಿತ್ತದಂತೆಯೇ ಆಗಲಿ" ಎಂದು ದೇವರನ್ನು ಪ್ರಾರ್ಥಿಸಿದನು (ಮತ್ತಾ.26:39).

ಇಂದು ಕರ್ತನು ನಿಮ್ಮನ್ನು "ಒಂದು ಗಂಟೆಯಾದರೂ ನನ್ನೊಂದಿಗೆ ನೀವು ಎಚ್ಚರವಾಗಿದ್ದು ಪ್ರಾರ್ಥಿಸಬಾರದಾ? ಬನ್ನಿ, ನನ್ನ ಕೈಗಳನ್ನು ಹಿಡಿದುಕೊಳ್ಳಿರಿ. ನನ್ನ ಹೃದಯದ ತುಡಿತವನ್ನೂ, ಭಾರವನ್ನೂ ನಾನು ನಿಮಗೆ ಪ್ರಕಟಿಸಿ ನಿಮ್ಮೊಂದಿಗೆ ಪ್ರಾರ್ಥಿಸುವೆನು" ಎಂದು ಪ್ರೀತಿಯಿಂದ ಕೇಳುವನು.

## ಪ್ರಾರ್ಥನಾ ಸ್ನೇಹಿತರು ಅಗತ್ಯ!

ದೇವಮಕ್ಕಳೇ, ನಿಮಗಾಗಿ ಯಾರಾದರೂ ಯಥಾರ್ಥವಾಗಿ ಭಾರದಿಂದ ಪ್ರಾರ್ಥಿಸುವವರು ಇದ್ದಾರೆ ಎನ್ನುವದಾದರೆ, ನೀವು ಭಾಗ್ಯವಂತರಾಗಿರುವಿರಿ. ಆದ್ದರಿಂದ ಪ್ರಾರ್ಥನಾ ಸ್ನೇಹಿತರನ್ನು ಆರಿಸಿಕೊಳ್ಳಿರಿ. ಯೋಬನು ತನ್ನ ಸ್ನೇಹಿತರಿಗಾಗಿ ಭಾರದಿಂದ ಪ್ರಾರ್ಥಿಸಿದಾಗ, ಕರ್ತನು ಅವನಿಗಿದ್ದ ಶೋಧನೆಯ ಕಟ್ಟುಗಳಿಂದ ಬಿಡುಗಡೆಗೊಳಿಸಿದನಲ್ಲವೇ? (ಯೋಬ. 42:10). ಕೆಲವು ಸಮಯಗಳಲ್ಲಿ ನಿಮ್ಮಿಂದ ಪ್ರಾರ್ಥಿಸಲಾಗದಂಥ ಸಂದರ್ಭಗಳು ಬರಬಹುದು. ನನಗಾಗಿಯಾದರೂ ಪ್ರಾರ್ಥಿಸುವವರಿರುವರಾ? ಎಂದು ಹಲುಬುವ ವೇಳೆ ಬರುವದು. ಆಗ ನಿಮ್ಮ ಪ್ರಾರ್ಥನಾ ಸ್ನೇಹಿತರೊಂದಿಗೆ ಸೇರಿ ಪ್ರಾರ್ಥಿಸಿರಿ. ಒಮ್ಮನಸ್ಸಿನ ಪ್ರಾರ್ಥನೆ ಬಹಳ ಬಲವುಳ್ಳದ್ದು.

## ಕ್ರಿಸ್ತನೆಂಬ ಪ್ರಾರ್ಥನಾ ಸ್ನೇಹಿತನು!

ಯೇಸುಕ್ರಿಸ್ತನು ಈ ಭೂಮಿಯಲ್ಲಿ ಇದ್ದಾಗ ಆತನು ಪ್ರತಿದಿನವೂ ರಾತ್ರಿ ವೇಳೆಗಳಲ್ಲಿ ಏಕಾಂಗಿಯಾಗಿ ಎಣ್ಣೇ ಮರಗಳ ಗುಡ್ಡಕ್ಕೆ ಹೋಗಿ ಪ್ರಾರ್ಥಿಸುತ್ತಿದ್ದನೆಂದು ಸತ್ಯವೇದ ತಿಳಿಸುತ್ತದೆ. ಆತನು ಪ್ರಾರ್ಥನೆಯ ಮೂಲಕ ತಂದೆ ದೇವರ ಅನ್ಯೋನ್ಯತೆಯಲ್ಲಿದ್ದದ್ದರಿಂದಲೇ ಆತನು ಎಲ್ಲಾ



ಶೋಧನೆಗಳನ್ನು ಜಯಿಸಲು ಶಕ್ತನಾದನು ಮಾತ್ರವಲ್ಲ, ಮರಣಪರಿಯಂತ ತನ್ನ ತಂದೆಗೆ ವಿಧೇಯನಾಗಿರಲು ಸಾಧ್ಯವಾಯಿತು. ಆತನು ತನಗಾಗಿ ಮಾತ್ರವಲ್ಲ, ಇಡೀ ಮಾನವಕೋಟಿಯ ಒಳಿತಿಗಾಗಿ ಪ್ರಾರ್ಥಿಸಿದನು. ಪ್ರಾರ್ಥಿಸಿದ್ದು ಮಾತ್ರವಲ್ಲ, ತನ್ನ ರಕ್ತವನ್ನು ಕ್ರೂಜೆಯ ಮೇಲೆ ಸುರಿಸಿ ಇಡೀ ಮಾನವ ಕುಲದ ಪಾಪ, ಶಾಪ, ವ್ಯಾಧಿಗಳ ವಿಮೋಚನೆಗಾಗಿ ತನ್ನ ಪ್ರಾಣವನ್ನೇ ಕೊಟ್ಟನು. ಆತನು ಶರೀರಧಾರಿಯಾಗಿ ಈ ಭೂಮಿಯಲ್ಲಿ ಜನಿಸಿದ್ದರಿಂದ ಆತನು ನರಮನುಷ್ಯರಾದ ನಿಮ್ಮ ಭಾವನೆಗಳನ್ನು ಬಲಹೀನತೆಗಳನ್ನು ಅರಿತಿರುವನು. ಆದ್ದರಿಂದಲೇ ಇಂದಿಗೂ ತಂದೆಯ ಬಲಗಡೆಯಲ್ಲಿ ಕುಳಿತು ನಿಮಗಾಗಿ ಬಿನ್ನಹಗಳನ್ನೂ, ಮನವಿಗಳನ್ನೂ ದೇವರ ಬಳಿ ಮಾಡುತ್ತಿರುವನು.

ಕ್ರಿಸ್ತನನ್ನೇ ನಿಮ್ಮ ಪ್ರಾರ್ಥನಾ ಸ್ನೇಹಿತನನ್ನಾಗಿ ಮಾಡಿಕೊಂಡು ಕರ್ತನ ಸನ್ನಿಧಾನಕ್ಕೆ ಬರುವಾಗಲೆಲ್ಲಾ ಆತನ ಕೈಗಳೊಂದಿಗೆ ನಿಮ್ಮ ಕೈಗಳನ್ನು ಜೋಡಿಸಿ ಪ್ರಾರ್ಥಿಸಿರಿ.

## ಪವಿತ್ರಾತ್ಮನೆಂಬ ಪ್ರಾರ್ಥನಾ ಸ್ನೇಹಿತನು!

ಯೇಸುಕ್ರಿಸ್ತನು ಒಬ್ಬ ಪ್ರಾರ್ಥನಾ ಸ್ನೇಹಿತನಾಗಿರುವದು ಮಾತ್ರವಲ್ಲ, ಇನ್ನೊಬ್ಬ ಪ್ರಾರ್ಥನಾ ಸ್ನೇಹಿತನನ್ನು ನಮಗೆ ಪರಿಚಯಿಸಿದ್ದಾನೆ. ಆತನೇ ಪವಿತ್ರಾತ್ಮನು. ಆದ್ದರಿಂದ ಒಂದು ಕೈಯಿಂದ ಕ್ರಿಸ್ತನ ಕೈಯನ್ನೂ, ಮತ್ತೊಂದು ಕೈಯಿಂದ ಪವಿತ್ರಾತ್ಮನ ಕೈಯನ್ನೂ ಹಿಡಿದುಕೊಂಡು ಪ್ರಾರ್ಥಿಸಿರಿ. ಯೇಸುಕ್ರಿಸ್ತನ ಕೈ ಹಿಡಿಯುವಾಗ ಸಹಾಯ ನೀಡುವ ಆತನ ಕರಗಳಲ್ಲಿರುವ ರಕ್ತವನ್ನು ಗ್ರಹಿಸಬಹುದು. ಪವಿತ್ರಾತ್ಮನ ಕೈಹಿಡಿಯುವಾಗ ಆತನ ಅಭಿಷೇಕದ ಎಣ್ಣೆಯನ್ನು ಗ್ರಹಿಸಬಹುದು. ಇಬ್ಬರೂ ನಿಮ್ಮ ಕೈಗಳನ್ನು ಹಿಡಿದು ಪ್ರಾರ್ಥಿಸಲು ವಿಜ್ಞಾಪನೆ ಮಾಡಲು ಕಾತರದಿಂದಿರುವರು. ನಿಮಗೆ ಪ್ರಾರ್ಥಿಸಲಾಗದಂಥ ವೇಳೆಗಳಲ್ಲಿ ಪವಿತ್ರಾತ್ಮನೇ ನಿಮಗಾಗಿ ಪ್ರಾರ್ಥಿಸುವನು. "ನಾವು ದೇವರ ಅಪೇಕ್ಷೆಯಂತೆ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನೇ ಮಾತಿಲ್ಲದ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ" ಎಂದು ಅಪೊ. ಪೌಲನು ಹೇಳುತ್ತಾನೆ (ರೋಮಾ. 8:26).

ಇಂದಿಗೂ ಪ್ರಾಪಂಚಿಕರು ತಮ್ಮ ಪಾಪಗಳೆಂಬ ಚಾಟಿ ಏಟುಗಳಿಂದ ಕ್ರಿಸ್ತನನ್ನು ಹೊಡೆದು ಜಜ್ಜುತ್ತಿರುವಾಗ, ನೀವಾದರೂ ಆತನ ಭಾರವನ್ನು ಹಂಚಿಕೊಂಡು ಪರಿತಪಿಸಲಾರಿರಾ? ಕ್ರಿಸ್ತನಿಗೆ ಬೆಂಬಲವಾಗಿ ನಿಲ್ಲಲಾರಿರಾ? ನರಕದ ಕಡೆಗೆ ಓಡುತ್ತಿರುವ ಆತ್ಮಗಳನ್ನು ಪರಲೋಕ ಮಾರ್ಗದಲ್ಲಿ ನಡೆಸಲು ಕ್ರಿಸ್ತನೊಂದಿಗೆ ಸೇರಿ ಪ್ರಾರ್ಥಿಸಲಾರಿರಾ?

**ವಾಗ್ದಾನ ವಚನ** ಕೀರ್ತನೆ 103:11

**"ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ಆತನಲ್ಲಿ ಭಯ ಭಕ್ತಿಯುಳ್ಳವರ ಮೇಲೆ ಆತನ ಕೃಪೆಯು ಅಷ್ಟು ಅಪಾರವಾಗಿದೆ"**

## ಸತ್ಯವೇದದ ಶ್ರೇಷ್ಠತೆ!

ಹೆಸರಾಂತ ಆಂಗ್ಲ ಲೇಖಕರಾದ ಸರ್. ವಾಲ್ಟರ್ ಸ್ಕಾಟ್‌ರವರನ್ನು ಕುರಿತು ನೀವು ತಿಳಿದಿರಬಹುದು. ಆತನು ತನ್ನ ಲೇಖನಗಳ ಮೂಲಕ ದೇಶದಲ್ಲಿ ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿದರು.

ಅವರು ಮರಣದ ಹಾಸಿಗೆಯಲ್ಲಿರುವಾಗ ತನ್ನ ಮಗನನ್ನು ನೋಡಿ ಆ ಪುಸ್ತಕವನ್ನು ತೆಗೆದುಕೊಂಡು ಬಾ ಎಂದು ಹೇಳಿದರು. ಆತನ ಮಗನು ಆತನನ್ನು ನೋಡಿ, ಅಪ್ಪಾ ಯಾವ ಪುಸ್ತಕವನ್ನು ಕೇಳುತ್ತಿದ್ದೀರಿ ಎಂದು ಕೇಳಲು ಆ ಬರಹಗಾರರು "ಪುಸ್ತಕವೆಂದು ಕರೆಯಲು ಯೋಗ್ಯತೆಯುಳ್ಳ ಒಂದೇ ಪುಸ್ತಕ, ಅದು ಸತ್ಯವೇದ. ಸತ್ಯವೇದವನ್ನು ತೆಗೆದುಕೊಂಡು ಬಂದು ಯೋಹಾನನ ಸುವಾರ್ತೆ 14ನೇ ಅಧ್ಯಾಯವನ್ನು ಓದು" ಎಂದರು. ಅದನ್ನು ಅವರ ಮಗನು ಓದುತ್ತಾ ಓದುತ್ತಾ ಇದ್ದಂತೆ ಆ ಬರಹಗಾರರು ಕಣ್ಣೀರೊಂದಿಗೆ ಕೇಳುತ್ತಲೇ ಇದ್ದರು. ಸತ್ಯವೇದ ನಮಗೆ ಎಷ್ಟು ಆದರಣೆಯಾದದ್ದು! ಎಷ್ಟು ಆದರಣೆ ಕೊಡುವಂಥದ್ದು! ಎಂದು ಹೇಳಿಕೊಂಡೇ ಕಣ್ಣು ಮುಚ್ಚಿ ದೈವಾಧೀನರಾದರು.

ಪ್ರತಿಯೊಬ್ಬ ದೇವಮಗುವೂ ಸತ್ಯವೇದದ ಬೆಲೆಯನ್ನು ಅರಿತುಕೊಳ್ಳಬೇಕು. ಅದನ್ನು ಕೈಯಲ್ಲಿ ಹಿಡಿದಾಗಲೆಲ್ಲಾ ಪ್ರೀತಿಯುಳ್ಳ ತಂದೆಯಾದ ದೇವರು ನಮಗಾಗಿ ಬರೆದ ಪ್ರೀತಿಯ ಪತ್ರವೆಂಬ ಭಾವನೆಯಿಂದ ಓದಬೇಕು ಮಾತ್ರವಲ್ಲ, ಸತ್ಯವೇದ ಎಂದಿಗೂ ಮಾರ್ಪಡುವದಿಲ್ಲ. ಅದರಲ್ಲಿರುವ ವಾಗ್ದಾನಗಳು ತಪ್ಪಿಹೋಗುವದಿಲ್ಲ ಎಂಬ ಸತ್ಯವನ್ನು ತಿಳಿದುಕೊಳ್ಳಬೇಕು.

## ಸೈತಾನನ ಆಕರ್ಷಣೆ!

ಒಮ್ಮೆ ಒಬ್ಬ ಮನುಷ್ಯನನ್ನು ಹಂದಿಗಳ ಒಂದು ಗುಂಪು ಹಿಂಬಾಲಿಸುತ್ತಾ ಹೋಗುತ್ತಿದ್ದದ್ದನ್ನು ಒಬ್ಬ ಬೋಧಕರು ಕಂಡರು. ಅವರಿಗೆ ಆ ಹಂದಿಗಳ ಗುಂಪು ಹೇಗೆ ಇವನನ್ನು ಹಿಂಬಾಲಿಸುತ್ತಿವೆ ಎಂಬದನ್ನು ತಿಳಿದುಕೊಳ್ಳುವ ಕುತೂಹಲ ಉಂಟಾಯಿತು. ಆ ಮನುಷ್ಯನ ಬಳಿ ಹೋಗಿ "ಸಹೋದರನೇ, ಹೇಗೆ ಈ ಹಂದಿಗಳ ಗುಂಪು ನಿನ್ನನ್ನು ಹಿಂಬಾಲಿಸಿ ಬರುವಂತೆ ಮಾಡಿದ್ದೀ" ಎಂದು ಕೇಳಿದರು. ಅದಕ್ಕೆ ಆ ಮನುಷ್ಯನು "ಗೆಣಸು ತುಂಬಿದ ಬುಟ್ಟಿ ನನ್ನ ಕೈಯಲ್ಲಿರುವದು. ನಾನು ನಡೆಯುತ್ತಾ ಒಂದೊಂದೇ ಗೆಣಸಿನ ತುಂಡನ್ನು ಕೆಳಗೆ ಹಾಕುತ್ತಾ ಬರುತ್ತಿರುವೆನು. ಅವು ಗೆಣಸಿನ ರುಚಿಯ ಆಕರ್ಷಣೆಗೆ ಒಳಗಾಗಿ ನನ್ನನ್ನು ಹಿಂಬಾಲಿಸಿ ಬರುತ್ತಿರುವವು" ಅಂದನು. ಆಗ ಬೋಧಕರು ಇವುಗಳನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀ? ಎಂದು ಕೇಳಲು, ಅವನು ಅವುಗಳನ್ನು ಖಸಾಯಿ ಖಾನೆಗೆ ಕರೆದುಕೊಂಡು ಹೋಗುತ್ತಿರುವದಾಗಿ ಹೇಳಿದನು.

ಇದೇ ರೀತಿ, ಸೈತಾನನು ಜನರಿಗೆ ಈ ಲೋಕದ ಆಕರ್ಷಣೆಗಳನ್ನು ತೋರಿಸಿ ಅವುಗಳನ್ನು ಹಿಂಬಾಲಿಸುವಂತೆ ಮಾಡಿ ಕೊನೆಗೆ ಅವರ ಆತ್ಮಗಳನ್ನು ನರಕಕ್ಕೆ ಕೊಂಡೊಯ್ಯುವನು.



## ಹೇಗೆ ನಾಶಗೊಳಿಸುವದು?

ಹಿಂದಿನ ಕಾಲದಲ್ಲಿ ಒಬ್ಬ ಅರಸನ ಬಳಿ ಬಹಳ ಭಕ್ತಿಯುಳ್ಳ ಒಬ್ಬ ಸೇವಕನಿದ್ದನು. ಆದರೆ ಅರಸನಿಗೋ ಅವನನ್ನು ಕಂಡರೆ ಆಗದು. ಅವನನ್ನು ಹೇಗಾದರೂ ಕೊಲ್ಲಬೇಕು ಎಂದು ಆಲೋಚಿಸುತ್ತಿದ್ದನು. ಅರಸನ ಸಲಹೆಗಾರರು "ಅರಸನೇ, ಆ ಕ್ರೈಸ್ತ ಸೇವಕನನ್ನು ಖೈದು ಮಾಡಿ ಚೆನ್ನಾಗಿ ಹೊಡೆದು ಜೀವಸಹಿತ ಸುಟ್ಟುಬಿಡು" ಎಂದು ಹೇಳಿದರು. ಬೇರೆ ಕೆಲವರು, "ಅರಸನೇ ನೀನು ಹಾಗೆ ಒಂದೇ ಸಾರಿ ಕೊಂದುಬಿಟ್ಟರೆ ಆ ಭಕ್ತಿವಂತನು ಸಂತೋಷದಿಂದ ಮರಣವನ್ನು ಸಂಧಿಸಿ ಪರಲೋಕ ರಾಜ್ಯದೊಳಗೆ ಪ್ರವೇಶಿಸಿಬಿಡುವನು. ಹಾಗೆ ಮಾಡಬೇಡ. ಅವನಿಗೆ ಹೇರಳವಾದ ಸಂಪತ್ತನ್ನು ಕೊಟ್ಟು ಪಾಪ ಮಾಡು ಪ್ರೇರಣೆ ಉಂಟಾಗುವಂತೆ ಸಂದರ್ಭಗಳನ್ನು ಸೃಷ್ಟಿಸು ಅದುವೇ ಅವನನ್ನು ನಿತ್ಯನಾಶನಕ್ಕೆ ನಡೆಸುವ ಮಾರ್ಗ" ಎಂದು ಹೇಳಿದರು.

ಸೈತಾನನೂ ಹೀಗೆಯೇ ವಿಶ್ವಾಸಿಗಳನ್ನು ನಾಶನದ ಮಾರ್ಗ ನಡೆಸುವನು. ಅನೇಕ ವಿಶ್ವಾಸಿಗಳು ಹೊರನೋಟಕ್ಕೆ ಪಾಪ ಮಾಡದೇ ಇದ್ದರೂ ಅವರ ಚಿಂತನೆಗಳಲ್ಲಿ ಪಾಪದೊಂದಿಗೆ ಒಂದು ರೀತಿಯ ಐಕ್ಯತೆಯನ್ನು ಇಟ್ಟುಕೊಂಡಿರುತ್ತಾರೆ. ಇದು ಯಾವಾಗ್ಯೂ ಅಪಾಯಕಾರಿಯಾದದ್ದು. ಅದು ಪಾಪವನ್ನು ಹುಟ್ಟುಹಾಕುವದು. ಇದಕ್ಕೆ ಔಷಧಿ ಎಂದರೆ ಮನಸಾರೆ ಪಾಪವನ್ನು ತ್ಯಜಿಸಿಬಿಡುವದು. ಪ್ರಪಂಚದ ಅಕರ್ಷಣೆಗಳು ಅಸಹ್ಯವಾದವುಗಳೆಂದು ಒದರಿತಳ್ಳುವದು.

## ತೀರ್ಮಾನ ತೆಗೆದುಕೋ!

ಒಬ್ಬ ಬಡ ವ್ಯಾಪಾರಿ, ಪ್ರತಿದಿನವೂ ಒಂದು ಬುಟ್ಟಿಯಲ್ಲಿ ಒತ್ತು ಶ್ಯಾವಿಗೆಯನ್ನು (ಇಡಿಯಪ್ಪಂ) ತುಂಬಿ ತಲೆಯಮೇಲೆ ಹೊತ್ತು ಮಾರಿ ಜೀವನ ಸಾಗಿಸುತ್ತಿದ್ದನು. ಆ ಊರಿನಲ್ಲಿದ್ದ ಒಂದು ಕೋತಿ ಇವನು ಬರುವದನ್ನೇ ಕಾದಿದ್ದು, ಅವನ ಕೂಗು ಕೇಳುತ್ತಿದ್ದಂತೆ ಆ ಬುಟ್ಟಿಯ ಮೇಲೆ ಹಾರಿ ಕೈತುಂಬಾ ಶ್ಯಾವಿಗೆಯನ್ನು ತೆಗೆದುಕೊಂಡು ಓಡಿಹೋಗುತ್ತಿತ್ತು. ಇದಕ್ಕೆ ಒಂದು ಅಂತ್ಯ ಕಾಣಿಸಬೇಕೆಂದು ಆ ವ್ಯಾಪಾರಿ ಅಂದು ಆ ಬುಟ್ಟಿಯ ತುಂಬಾ ಕೆಂಡ ತುಂಬಿದ ಪಾತ್ರೆಯನ್ನಿಟ್ಟು, "ಒತ್ತುಶ್ಯಾವಿಗೆ" ಎಂದು ಕೂಗುತ್ತಾ ಬಂದನು. ಅವನ ಸ್ವರ ಕೇಳಿದ್ದೇ ತಡ ಆ ಕೋತಿ ಓಡಿಬಂದು ಅವನ ಮೇಲೆ ಎರಗಿ ಆ ಬುಟ್ಟಿಯೊಳಗೆ ಎರಡೂ ಕೈಗಳನ್ನು ಹಾಕಿತು. ಅಯ್ಯೋ, ಅದರ ಎರಡು ಕೈಗಳೂ ಬೆಂದುಹೋದವು.

ನಮ್ಮ ಕಣ್ಣುಗಳೂ, ಚಿಂತನೆಗಳೂ ಒಂದು ಕೋತಿಯೇ. ಪಾಪ ಮಾಡುತ್ತಾ ಮಾಡುತ್ತಾ ಅದು ಅಭ್ಯಾಸವಾಗಿಬಿಡುತ್ತದೆ. ಕೊನೆಯಲ್ಲಿ ಅದು ನರಕಕ್ಕೆ ಕೊಂಡೊಯ್ಯುತ್ತದೆ. ಹಾಗಾಗದಂತೆ ಅವುಗಳನ್ನು ಮೊದಲೇ ತ್ಯಜಿಸಿರಿ. ಈಗ ಅದು ಕಷ್ಟವಾದರೂ ಮುಂದೆ ಅದು ನಿಮ್ಮನ್ನು ನಿತ್ಯತ್ವಕ್ಕೆ ನಡೆಸುವದು.

# ಪ್ರೀತಿ ತುಂಬಿರುವ ಕಾಣಿಕೆ

ಕೊರಿಯಾ ದೇಶವನ್ನು ಸಂಚರಿಸಿ ನೋಡಲು ಬಂದ ಹೊರ ದೇಶದ ಒಬ್ಬ ದೇವಸೇವಕರನ್ನು ಪಾಲ್‌ಯಾಂಗಿಚೋರವರು ಕೆಲವು ಸ್ಥಳಗಳಿಗೆ ಕರೆದೊಯ್ದರು. ಹೋಗುವ ಮಾರ್ಗದಲ್ಲಿ ವೃದ್ಧರೊಬ್ಬರು ಹೊಲ ಉಳುತ್ತಿರುವಾಗ ಎತ್ತುಗಳಿಗೆ ಬದಲಾಗಿ ಇಬ್ಬರು ಯೌವನಸ್ಥರು ನೇಗಿಲನ್ನು ಎಳೆಯುತ್ತಿರುವದನ್ನು ಕಂಡರು. ಬಹಳ ಪ್ರಯಾಸದಿಂದ ಕಷ್ಟಪಡುವದನ್ನು ಕಂಡು ಇವರ ಮನಸ್ಸಿಗೆ ಬಹಳ ಸಂಕಟವಾಯಿತು. ಎಲ್ಲಾ ದೇಶಗಳಲ್ಲಿಯೂ ಎತ್ತು, ಕತ್ತೆ ಮುಂತಾದ ಪ್ರಾಣಿಗಳಿಂದ ಹೊಲ ಉಳುತ್ತಾರೆ. ಆದರೆ ನಿಮ್ಮ ದೇಶದಲ್ಲಿ ಏಕೆ ಮನುಷ್ಯರನ್ನು ಉಪಯೋಗಿಸುತ್ತಿದ್ದಾರೆ ಎಂದು ಕೇಳಿದರು.

ಅದನ್ನು ಕೇಳಿದ ಪಾಲ್‌ಯಾಂಗಿ ಚೋರವರು ಕಣ್ಣೀರಿನಿಂದ ಅವರನ್ನು ನೋಡಿ ಅಯ್ಯಾ, ಇವರು ನಮ್ಮ ಸಭೆಯ ವಿಶ್ವಾಸಿಗಳು. ನಮ್ಮ ಆಲಯ ಕಟ್ಟುವ ನಿಧಿಗಾಗಿ ಹಣವನ್ನು ಕೊಡಲು ಅವರ ಬಳಿ ಹಣವಿರಲಿಲ್ಲ. ಆದ್ದರಿಂದ ಅವರು ತಮ್ಮ ಬಳಿ ಇದ್ದ ಎತ್ತುಗಳನ್ನು ಮಾರಿ ಅದರಿಂದ ಬಂದ ಹಣವನ್ನು ಕಾಣಿಕೆಯಾಗಿ ಕೊಟ್ಟರು. ಆ ಎರಡು ಎತ್ತುಗಳನ್ನು ಕಟ್ಟುವ ಜಾಗದಲ್ಲಿ ಅವರ ಇಬ್ಬರು ಯೌವನಸ್ಥ ಮಕ್ಕಳನ್ನು ಸಂತೋಷದಿಂದ ನೇಗಿಲಿಗೆ ಕಟ್ಟಿ ಹೊಲವನ್ನು ಉಳುತ್ತಿದ್ದಾರೆ ಅಂದರು. ಆ ದೇವಸೇವಕರಿಗೆ ದುಃಖವನ್ನು ತಡೆಯಲು ಸಾಧ್ಯವಾಗಲಿಲ್ಲ. ಅವರು ನೇರವಾಗಿ ಆ ವೃದ್ಧರ ಬಳಿಗೆ ಹೋಗಿ ಅಯ್ಯಾ, ನಾನು ಕರ್ತನಿಗಾಗಿ ಎಷ್ಟೆಷ್ಟೋ ಕಾಣಿಕೆಗಳನ್ನು ಕೊಟ್ಟಿದ್ದೇನೆ. ಆದರೆ ನಿಮ್ಮ ಪ್ರೀತಿಯ ಕಾಣಿಕೆಯನ್ನು ನೋಡಿ ನನ್ನ ಹೃದಯವು ಪರವಶಗೊಂಡಿದೆ ಎಂದು ಹೇಳಿ ಅವರನ್ನು ತಬ್ಬಿಕೊಂಡು ಕಣ್ಣೀರನ್ನು ಸುರಿಸಿದರು. ಅದಕ್ಕೆ ಆ ಹಿರಿಯರು ಅಯ್ಯಾ ನಾನು ಮಾಡಿದ್ದು ತ್ಯಾಗವಲ್ಲ ಇದು ಒಂದು ಭಾಗ್ಯ ಇದರಿಂದ ನಾನು ಬಹಳಷ್ಟು ಆತ್ಮೀಕ ಆಶೀರ್ವಾದಗಳನ್ನು ಹೊಂದಿದ್ದೇನೆ ಅಂದರು.

# ಕರ್ತನು ವಿಶ್ವಾಸಿಗಳಿಗೆ ತೊಡಿಸುವ ವಸ್ತ್ರಗಳು

* ರಕ್ಷಣೆಯ ವಸ್ತ್ರ – ಯೆಶಾಯ 61:10
* ನೀತಿಯ ವಸ್ತ್ರ – ಯೆಶಾಯ 61:10
* ರಾಜಶಿರೋವೇಷ್ಟನ – ಯೆಶಾಯ 62:3
* ಉತ್ಸಾಹ ಸ್ತೋತ್ರದ ವಸ್ತ್ರ – ಯೆಶಾಯ 61:3
* ನಿರ್ಮಲವಾದ ನಯವಾದ ನಾರುಮಡಿ – ಪ್ರಕ. 19:8
* ಜರತಾರಿಯ ವಸ್ತ್ರ – ಕೀರ್ತನೆ 45:13
* ಕಸೂತಿ ಕೆಲಸದ ವಸ್ತ್ರ – ಕೀರ್ತನೆ 45:14
* ಜಯಶಾಲಿಗೆ ತೊಡಿಸುವ ಶುಭ್ರ ವಸ್ತ್ರ – ಪ್ರಕ. 3:5



# ನಂಬಿಗಸ್ಥನಾದ ಕರ್ತನು

* ನಮ್ಮ ಪಾಪಗಳನ್ನು ಕ್ಷಮಿಸಲು ಆತನು ನಂಬಿಗಸ್ಥನು – 1 ಯೋಹಾ. 1:9
* ನಮ್ಮನ್ನು ದೃಢಪಡಿಸಲು ಆತನು ನಂಬಿಗಸ್ತನು – 2 ಥೆಸ 3:3
* ನಮ್ಮ ಮೇಲೆ ತಪ್ಪು ಹೊರಿಸದಂತೆ ಕಾಪಾಡಲು ಆತನು ನಂಬಿಗಸ್ಥನು – 1 ಕೊರಿಂ.1:9
* ನಮಗಾಗಿ ವಾಗ್ದಾನಗಳನ್ನು ಮಾಡಿರುವಾತನು ನಂಬಿಗಸ್ಥನು – ಇಬ್ರಿ. 10:23
* ಆತನ ಆಜ್ಞೆಗಳನ್ನು ಅನುಸರಿಸುವವರಿಗೆ ಕೃಪೆ ತೋರಿಸಲು ಆತನು ನಂಬಿಗಸ್ಥನು – ಧರ್ಮೋ. 7:9
* ನಮ್ಮ ಆತ್ಮ ಪ್ರಾಣ ಶರೀರಗಳನ್ನು ದೋಷವಿಲ್ಲದೆ ಕಾಪಾಡಲು ಆತನ ಬರೋಣದಲ್ಲಿ ನಮ್ಮನ್ನು ನಿಲ್ಲಿಸಲು ಆತನು ನಂಬಿಗಸ್ಥನು – 1 ಥೆಸ. 5:23–24

# ಎಂದಿಗೂ ಸಾಯುವದಿಲ್ಲ

ಬ್ರಿಟಿಷ್ ಸೈನ್ಯವು ಇಂಗರ್‌ಸಾಲ್ ಎಂಬ ಸ್ಥಳದಲ್ಲಿ ಯುದ್ಧಮಾಡುತ್ತಿತ್ತು. ಒಬ್ಬ ಯುದ್ಧವೀರನಿಗೆ ಬಲವಾಗಿ ಗುಂಡುಗಳ ಪೆಟ್ಟು ಬಿದ್ದಿತು. ಶರೀರದಿಂದ ರಕ್ತ ಹರಿಯುತ್ತಿತ್ತು. ತನ್ನ ಗುಡಾರದೊಳಗೆ ಹೋದನು. ಅವನ ಕಣ್ಣುಗಳು ಏನನ್ನೋ ಅವಸರದಿಂದ ಹುಡುಕುತ್ತಿದ್ದವು. ಅದು ಅವನು ಇಷ್ಟಪಟ್ಟು ಓದುತ್ತಿದ್ದ ವಾಕ್ಯವನ್ನು ಸತ್ಯವೇದದಿಂದ ತೆಗೆದು ಓದಿದನು. “ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ” (ಯೋಹಾ.11:25–26). ಇದನ್ನು ಓದಿದ ಅವನ ಕಣ್ಣುಗಳು ಪ್ರಕಾಶಿಸಿದವು. ಮುಖದಲ್ಲಿ ಒಂದು ನೆಮ್ಮದಿ ಸಮಾಧಾನವು ಆವರಿಸಿತು. ರಕ್ತದಿಂದ ತೋಯ್ದಿದ್ದ ತನ್ನ ಕರಗಳನ್ನು ಆ ವಾಕ್ಯದ ಮೇಲಿಟ್ಟು ತೀರಿಹೋದನು.


## ಸಂಗೀತ ಮತ್ತು ಕೀರ್ತನೆಗಳ ಸಂಗ್ರಹ

ಸಿ.ಎಸ್.ಐ. ಮತ್ತು ಮೆಥೋಡಿಸ್ಟ್ ಸಭೆಗಳಲ್ಲಿ ಉಪಯೋಗಿಸುವ ಬಹಳ ಉಪಯುಕ್ತವಾದ ಸಂಗೀತ ಮತ್ತು ಕೀರ್ತನೆಗಳ ಹಾಡಿನ ಪುಸ್ತಕ ನಮ್ಮಲ್ಲಿ ಲಭ್ಯವಿದೆ. ಅನುದಿನದ ಆಹಾರ ಸಂಸ್ಥೆಯು ನಿಮಗಾಗಿ ಇದನ್ನು ಬಹಳ ಪರಿಶ್ರಮದೊಂದಿಗೆ ಹೊರತಂದಿದೆ. ಇದರ ಪ್ರತಿ ಒಂದಕ್ಕೆ 100/– ಗಳು (ಅಂಚೆ ವೆಚ್ಚ ಪ್ರತ್ಯೇಕ).

ವಿವರಗಳಿಗಾಗಿ ನಮ್ಮ ಕಛೇರಿಯನ್ನು ಸಂಪರ್ಕಿಸಿ.

# ನಮ್ಮ ದೇಶದ ಸುದ್ದಿಗಳು
## (INDIAN NEWS)

**1. ಅಳಿವಿನ ಅಂಚಿನಲ್ಲಿ 173 ಪಕ್ಷಿಗಳು :**

ಭಾರತದಲ್ಲಿ 173 ವಿವಿಧ ಪಕ್ಷಿ ಪ್ರಭೇಧಗಳು ಅಳಿವಿನ ಅಂಚಿನಲ್ಲಿವೆ. ಅಲ್ಲದೆ ಹೊಸದಾಗಿ ಎಂಟು ಪಕ್ಷಿಗಳನ್ನು 2014ರ ಕೆಂಪು ಪಟ್ಟಿಗೆ ಸೇರಿಸಲಾಗಿದೆ ಎಂದು ಅಂತರ ರಾಷ್ಟ್ರೀಯ ಪ್ರಕೃತಿ ಸಂರಕ್ಷಣಾ ಒಕ್ಕೂಟ ತಿಳಿಸಿದೆ.

**2. ಮಾನವ ಕಳ್ಳಸಾಗಣೆ : ಭಾರತ ಮುಂಚೂಣಿ :**

ದಕ್ಷಿಣ ಏಷ್ಯಾದಲ್ಲಿ ಮಾನವ ಕಳ್ಳಸಾಗಣೆಯಾಗುವ ತಾಣದಲ್ಲಿ ಭಾರತವು ಮುಂಚೂಣಿಯಲ್ಲಿದೆ ಎಂದು ವಿಶ್ವಸಂಸ್ಥೆಯ ಪ್ರಮುಖ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನೇಪಾಳ, ಬಾಂಗ್ಲಾದೇಶ ಹಾಗೂ ಕೊಲ್ಲಿ ರಾಷ್ಟ್ರಗಳ ಪ್ರಜೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾರತಕ್ಕೆ ಕಳ್ಳ ಸಾಗಣೆಯಾಗುತ್ತಿದ್ದಾರೆ ಎಂದು ತಿಳಿಸಿದ್ದಾರೆ.

**3. ಯುದ್ಧಭೂಮಿಯಲ್ಲಿ ಮಹಿಳೆಗೆ ಮುಂದಾಳತ್ವ :**

ಸೇನಾಪಡೆ ತನ್ನ ನೀತಿಯಲ್ಲಿ ಬದಲಾವಣೆ ಮಾಡಿಕೊಂಡಿದ್ದು, ಮಹಿಳಾ ಅಧಿಕಾರಿಗಳಿಗೆ ಯುದ್ಧದ ಮುಂದಾಳತ್ವ ನೀಡಲು ನಿರ್ಧರಿಸಿದೆ. ಇದು 2015ರಿಂದ ಜಾರಿಗೆ ಬರಲಿದೆ. ಪ್ರಸ್ತುತ ಮಹಿಳಾ ಅಧಿಕಾರಿಗಳು ಪದಾತಿದಳ ಹಾಗೂ ಶಸ್ತ್ರಾಸ್ತ್ರ ವಿಭಾಗ ಹೊರತುಪಡಿಸಿ ಉಳಿದ ಎಲ್ಲ ವಿಭಾಗಗಳಲ್ಲಿಯೂ ಸೇವೆಸಲ್ಲಿಸುತ್ತಿದ್ದಾರೆ.

**4. ಭಾರತೀಯರಿಗೆ ಇಂದಿಗೂ ಹೆಣ್ಣುಮಗು ಹೊರೆ! :**

ಭಾರತದಲ್ಲಿ ಇಂದಿಗೂ ಹೆಣ್ಣು ಮಗುವನ್ನು ಹೊರೆ ಎಂದು ಭಾವಿಸಲಾಗುತ್ತಿದ್ದು ಶತಮಾನಗಳ ಹಿಂದಿನಭಾರತೀಯರ ಮನೋಭಾವ ಇನ್ನೂ ಬದಲಾಗಿಲ್ಲ ಎಂದು ವಿಶ್ವ ಸಂಸ್ಥೆಯ ವರದಿ ಹೇಳಿದೆ. ಲಿಂಗಾನುಪಾತದಲ್ಲಿ ಭಾರಿ ವ್ಯತ್ಯಾಸವು ಕಂಡುಬರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದೆ.

**5. ಭಾರತಕ್ಕೆ ರೂ. 1.08 ಲಕ್ಷ ಕೋಟಿ ಸಾಲ :**

ಭಾರತಕ್ಕೆ ಮುಂದಿನ ಮೂರು ವರ್ಷಗಳಲ್ಲಿ 1500 ಕೋಟಿಯಿಂದ 1800 ಕೋಟಿ ಡಾಲರ್ ಸಾಲ ನೀಡುವದಾಗಿ ವಿಶ್ವಬ್ಯಾಂಕ್ ಸಮೂಹ ಭರವಸೆ ನೀಡಿದೆ. ಈ ಮೂಲಕ ಭಾರತ ಶೇ.9 ರಷ್ಟು ಆಥಿಕ ಪ್ರಗತಿ ಕಾಣುವಂತಾಗಲು ಅಗತ್ಯ ಬೆಂಬಲ ನೀಡಲು ಬದ್ಧವಾಗಿರುವದಾಗಿಯೂ ಹೇಳಿದೆ.





# ಹೊರ ದೇಶದ ಸುದ್ದಿಗಳು
## (FOREIGN NEWS)

**1. ಒಬಾಮ ವಿರುದ್ಧ ಕಾನೂನು ಕ್ರಮಕ್ಕೆ ಸಮ್ಮತಿ :**

ಅಮೇರಿಕ ಅಧ್ಯಕ್ಷ ಬರಾಕ್ ಒಬಾಮ ವಿರುದ್ಧ ಮೊಕದ್ದಮೆ ದಾಖಲಿಸಲು ಜನಪ್ರತಿನಿಧಿ ಸಭೆಯ ಅನುಮೋದನೆ ಪಡೆದುಕೊಳ್ಳುವಲ್ಲಿ ರಿಪಬ್ಲಿಕ್ ಪಕ್ಷ ಯಶಸ್ವಿಯಾಗಿದೆ. 2010ರ ಆರೋಗ್ಯ ರಕ್ಷಣೆ ಕಾನೂನು ಜಾರಿಯಲ್ಲಿ ಒಬಾಮ ಅವರು ಸಾಂವಿಧಾನಿಕ ಅಧಿಕಾರವನ್ನು ಮೀರಿ ನಡೆದುಕೊಂಡಿದ್ದಾರೆ ಎಂಬ ಆರೋಪದಲ್ಲಿ ಕಾನೂನು ಕ್ರಮಕ್ಕೆ ರಿಪಬ್ಲಿಕ್ ಪಕ್ಷ ಮುಂದಾಗಿದೆ.

**2. ಮ್ಯಾಗ್ಸೆಸ್ ಪ್ರಶಸ್ತಿ ಪ್ರಕಟ :**

ಚೀನಾದ ಪ್ರಭಾವಿ ಪತ್ರಕರ್ತ ಹಾಗೂ ಪರಿಸರ ಹೋರಾಟಗಾರ ವಕೀಲರೊಬ್ಬರು ಈ ಬಾರಿಯ “ರೇಮನ್‌ಮ್ಯಾಗ್ಸೆಸ್” ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ನಿಯತಕಲಿಕ ಕೈಜಿಂಗ್‌ನ ಸ್ಥಾಪಕ ಹಾಗೂ ಸಂಪಾದಕರಾದ 61ರ ಹರೆಯದ ಹುಷುಲಿ ಈ ಬಾರಿಯ ಆರು ಮಂದಿ ಮ್ಯಾಗ್ಸೆಸೆ ಪುರಸ್ಕೃತರ ಪಟ್ಟಿಯಲ್ಲಿದ್ದಾರೆ. ಇದನ್ನು ಏಷ್ಯಾದ ನೊಬೆಲ್ ಪ್ರಶಸ್ತಿ ಎಂದೇ ಪರಿಗಣಿಸಲಾಗುತ್ತಿದೆ.

**3. 2040ರಲ್ಲಿ ವಿಶ್ವದೆಲ್ಲೆಡೆ ಜಲಕ್ಷಾಮ :**

2040ರ ಹೊತ್ತಿಗೆ ಜಗತ್ತಿನೆಲ್ಲೆಡೆ ಜಲಕ್ಷಾಮ ಎದುರಾಗಲಿದೆಯಂತೆ. ವಿದ್ಯುತ್ ಮತ್ತು ಇಂಧನವನ್ನು ಮಿತಿಯಿಲ್ಲದೆ ವ್ಯಯಿಸುವುದು ಯಥಾಪ್ರಕಾರ ಮುಂದುವರೆಸಿದ್ದಾದರೆ. ನೀರಿಲ್ಲದೆ ಪರದಾಡಬೇಕಾದೀತು ಎಂಬ ಆತಂಕತವನ್ನು ಭಾರತದ ದೃಷ್ಟಾಂತವನ್ನು ಒಳಗೊಂಡ ಹೊಸ ಅಧ್ಯಯನ ವರದಿಯೊಂದು ಎಚ್ಚರಿಸಿದೆ.

**4. ಅಮೆಜಾನ್‌ನಿಂದ ಹೆಚ್ಚುವರಿ ಹೂಡಿಕೆ :**

ಭಾರತದಲ್ಲಿ ಇ-ಕಾಮರ್ಸ್ ವಹಿವಾಟು ವಿಸ್ತರಿಸುವ ನಿಟ್ಟಿನಲ್ಲಿ ಜಾಗತಿಕ ಮಟ್ಟದ ಆನ್‌ಲೈನ್ ಮಾರಾಟ ಕಂಪನಿ ಅಮೆರಿಕ ಮೂಲದ ಅಮೆಜಾನ್ ಹೆಚ್ಚುವರಿಯಾಗಿ 12,000 ಕೋಟಿ ಹೂಡಿಕೆ ಮಾಡುವದಾಗಿ ಹೇಳಿದೆ.

**5. ಏಳು ಪರ್ವತಗಳನ್ನು ಏರಿದ ಪಾಕ್ ಮಹಿಳೆ :**

ಪಾಕಿಸ್ತಾನದ ಸಬೀನಾ ಬೇಗ್ ಅವರು ಪ್ರಪಂಚದ ಏಳೂ ಖಂಡಗಳ ಏಳು ಅತಿ ಎತ್ತರದ ಪರ್ವಗಳನ್ನು ಎಂಟು ತಿಂಗಳ ಅವಧಿಯಲ್ಲಿ ಏರಿದ ಪಾಕೀಸ್ತಾನದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

# ಏಳು ಪುನರುಜ್ಜೀವನ ಹೊಂದು

1666ರಲ್ಲಿ ಲಂಡನ್ ಮಹಾನಗರದಲ್ಲಿ ಒಂದು ಬೆಂಕಿ ಅನಾಹುತ ಸಂಭವಿಸಿತು. ಅದರಲ್ಲಿ ಸಂತ ಪೌಲನ ದೇವಾಲಯವು ನಾಶವಾಯಿತು. ಎಷ್ಟೋ ವರ್ಷಗಳು ಹಾಗೆಯೇ ಪಾಳುಬಿದ್ದ ಸ್ಥಿತಿಯಲ್ಲಿಯೇ ಇತ್ತು. ಅದನ್ನು ಸುಮ್ಮನೇ ವೀಕ್ಷಿಸಲು ಹೋದ ಒಬ್ಬ ಇಂಜಿನಿಯರ್ ಒಬ್ಬರ ಕಣ್ಣುಗಳಿಗೆ ಕಲ್ಲಿನಲ್ಲಿ ಕೆತ್ತಲ್ಪಟ್ಟ ಅಕ್ಷರಗಳು ಕಾಣಿಸಿತು. ಅದರಲ್ಲಿ "ನಾನು ತಿರುಗಿ ಜೀವಿಸುತ್ತೇನೆ" ಎಂದು ಬರೆಯಲ್ಪಟ್ಟಿತ್ತು. ಅದು ಆತನಲ್ಲಿ ಶಕ್ತಿಯುತವಾಗಿ ಕ್ರಿಯೆ ಮಾಡಿತು. ಹಗಲೂ ರಾತ್ರಿ ಕಷ್ಟಪಟ್ಟು 30 ವರ್ಷಗಳು ಕೆಲಸಮಾಡಿ ಮತ್ತೆ ದೇವಾಲಯವನ್ನು ಪುನರುಜ್ಜೀವನಗೊಳಿಸಿದನು. ಯೇಸುಕ್ರಿಸ್ತನ ಪುನರುತ್ಥಾನದ ಬಲವನ್ನು ಸಾರಿಹೇಳುವ ಆ ಮಾತುಗಳು ಒಬ್ಬ ವ್ಯಕ್ತಿಯ ಮೂಲಕ ಹಾಳುಬಿದ್ದಿದ್ದ ಕಟ್ಟಡವನ್ನು ಪುನರುಜ್ಜೀವನಗೊಳಿಸುವಂತೆ ಮಾಡಿತು. ಇಂದು ಪಾಪದಲ್ಲಿ ಬಿದ್ದಿರುವ ಅನೇಕ ವಿಶ್ವಾಸಿಗಳು ಬಿದ್ದೇಹೋಗಬಾರದು. ಬೀಳುವದು ಪಾಪ ಅದಕ್ಕಿಂತಲೂ ದೊಡ್ಡ ಪಾಪವೆಂದರೆ ಬಿದ್ದಲ್ಲೇ ಬಿದ್ದುಕೊಂಡಿರುವದು. ಬೀಳುವಿಕೆಯಿಂದ ಸೋತುಹೋಗಿ ಹಾಗೆಯೇ ಬಿದ್ದಿರಬಾರದು. ನಮ್ಮ ವಿಮೋಚಕನಾದ ಯೇಸುಕ್ರಿಸ್ತನು ತನ್ನ ಮರಣದ ಮೂಲಕ ಪಾಪದ ಬಲವನ್ನು ಮುರಿದು ಪುನರುತ್ಥಾನ ಹೊಂದಿದ ದೇವರು. ಆತನ ಪುನರುತ್ಥಾನದ ಬಲ ನಮ್ಮನ್ನು ಪುನರುಜ್ಜೀವನ ಮಡುವಂಥದ್ದಾಗಿದೆ.

# ಕ್ರಿಸ್ತನಿಗಾಗಿ ಸುಗಂಧವಾಸನೆ

ಅಮೆರಿಕ ದೇಶದ ರಾಷ್ಟ್ರಪತಿಯಾಗುವ ಮೊದಲು ಜಾನ್ ಕೆನಡಿಯವರು ಒಂದು ಸುಗಂಧ ತಯಾರಿಕೆಯ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದರು. ಅದರ ಮೂಲಕ ಬರುವ ಆದಾಯವನ್ನು ಒಂದು ಅನಾಥಾಶ್ರಮಕ್ಕೆ ಕೊಡುತ್ತಿದ್ದರು. ಅವರು ದಿನವೆಲ್ಲಾ ಆ ಕಾರ್ಖಾನೆಯಲ್ಲಿರುತ್ತಿದ್ದದ್ದರಿಂದ ಅವರು ಮನೆಗೆ ಬರುವಾಗ ದಾರಿಯಲ್ಲೆಲ್ಲಾ ಸುಗಂಧ ವಾಸನೆ ಬರುತ್ತಿತ್ತು. ಮನೆಯ ಒಳಗೆ ಇರುವವರೂ ಸಹ ಆ ವಾಸನೆಯನ್ನು ಗುರುತಿಸಿ ಕೆನಡಿ ಹೋಗುತ್ತಿದ್ದಾರೆಂದು ಹೇಳುತ್ತಿದ್ದರು.

ಸತ್ಯವೇದ ಹೇಳುತ್ತದೆ, "ರಕ್ಷಣಾ ಮಾರ್ಗದಲ್ಲಿರುವವರಲ್ಲಿಯೂ ನಾಶನ ಮಾರ್ಗದಲ್ಲಿರುವವರಲ್ಲಿಯೂ ನಾವು ದೇವರ ಮುಂದೆ ಕ್ರಿಸ್ತನ ಪರಿಮಳವಾಗಿದ್ದೇವೆ. ನಾವು ನಾಶನ ಮಾರ್ಗದಲ್ಲಿರುವವರಿಗೆ ಮರಣದಿಂದ ಹುಟ್ಟಿ ಮರಣವನ್ನು ಹುಟ್ಟಿಸುವ ವಾಸನೆಯಾಗಿಯೂ ರಕ್ಷಣಾ ಮಾರ್ಗದಲ್ಲಿರುವವರಿಗೆ ಜೀವದಿಂದ ಹುಟ್ಟಿ ಜೀವವನ್ನು ಹುಟ್ಟಿಸುವ ವಾಸನೆಯಾಗಿದ್ದೇವೆ" ಎಂದು. (2 ಕೊರಿಂ. 2:15–16). ಕ್ರಿಸ್ತನ ಮಧುರವಾದ ಸ್ವಭಾವದ ಸುಗಂಧವನ್ನು ಸತ್ಯವೇದದಲ್ಲಿ ಓದಿ ಅನುಭವಿಸುತ್ತೇವೆ. ಈ ನಮ್ಮ ಜೀವಿತ ಬೇರೆಯವರಿಗೆ ಕ್ರಿಸ್ತನನ್ನು ಕುರಿತು ಪರಿಮಳಿಸಬೇಕಾಗಿದೆ. ಕರ್ತನಿಗಾಗಿ ಸುಗಂಧ ವಾಸನೆಯನ್ನು ಬೀರಬೇಕಾಗಿದೆ.



ಸೆಪ್ಟೆಂಬರ್ 1

# ಮೆಚ್ಚಿಕೊಂಡರೆ!

ಬೆಳಿಗ್ಗೆ : ಕೀರ್ತನೆ 135, 136
ಸಂಜೆ : 1 ಕೊರಿಂ. 12

"ಅದು ಹಾಲೂ ಜೇನೂ ಹರಿಯುವ ದೇಶ; ಯೆಹೋವನು ನಮ್ಮನ್ನು ಮೆಚ್ಚಿಕೊಂಡರೆ ಅದರಲ್ಲಿ ನಮ್ಮನ್ನು ಸೇರಿಸಿ ಅದನ್ನು ನಮ್ಮ ಸ್ವಾಧೀನಕ್ಕೆ ಕೊಡುವನು (ಅರಣ್ಯ. 14:8).

ನೀವು ಕರ್ತನನ್ನು ಮೆಚ್ಚಿಸುವದಕ್ಕೆ ಮೊದಲ ಸ್ಥಾನ ನೀಡಿರುವಿರಾ? ಕರ್ತನ ಮೆಚ್ಚಿಕೆ ನಿಮ್ಮ ಮೇಲಿರುವದಾ? ಕರ್ತನು ನಿಮ್ಮನ್ನು ಕನಿಕರಿಸಿ ಆಶೀರ್ವದಿಸುವನಾ? ಎಂಬುದನ್ನು ಸ್ವಲ್ಪ ಯೋಚಿಸಿ ನೋಡಿರಿ. ನೀವು ಕರ್ತನನ್ನು ಮೆಚ್ಚಿಸುವವರಾದರೆ ಆತನು ಪರಲೋಕದ ಬಾಗಿಲುಗಳನ್ನು ತೆರೆದು ನಿಮ್ಮನ್ನು ಆಶೀರ್ವದಿಸುವನು. ಗುಣುಗುಟ್ಟುತ್ತಾ ಇದ್ದ ಇಸ್ರಾಯೇಲ್ಯರನ್ನು ನೋಡಿ ಯೆಹೋಶುವನೂ ಕಾಲೇಬನೂ– ನಾವು ಸಂಚರಿಸಿ ನೋಡಿದ ದೇಶವು ಅತ್ಯುತ್ತಮವಾದದ್ದು; ಅದು ಹಾಲೂ ಜೇನೂ ಹರಿಯುವ ದೇಶ; ಯೆಹೋವನು ನಮ್ಮನ್ನು ಮೆಚ್ಚಿಕೊಂಡರೆ ಅದರಲ್ಲಿ ನಮ್ಮನ್ನು ಸೇರಿಸಿ ಅದನ್ನು ನಮ್ಮ ಸ್ವಾದೀನಕ್ಕೆ ಕೊಡುವನು. ಯೆಹೋವನಿಗೆ ತಿರುಗಿ ಬೀಳಬೇಡಿರಿ" ಎಂದು ಹೇಳಿದರು (ಅರಣ್ಯ 14:7–9).

ಇಸ್ರಾಯೇಲ್ಯರು ಪ್ರೀತಿಯುಳ್ಳ ದೇವರ ಬಳಿ, ಗುಣುಗುಟ್ಟಿ ಕೊರತೆಗಳನ್ನು ಹೇಳಿ ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳಬಹುದೆಂದು ಭಾವಿಸಿದರು. ಅದು ದೇವರ ಕೋಪವನ್ನು ಎಬ್ಬಿಸಿತು. ನೀವು ಕರ್ತನ ಬಳಿ ಕೇಳುವಾಗಲೆಲ್ಲಾ, ಆತನನ್ನು ಮೆಚ್ಚಿಸುತ್ತಾ ಆತನನ್ನು ಸಂತೋಷಪಡಿಸುತ್ತಾ ಕೇಳಿರಿ. ಸ್ತುತಿಸಿ, ಆರಾಧಿಸಿ ಆನಂತರ ಕೇಳಿರಿ. ಆಗ ಆತನು ಸಂತೋಷದಿಂದ ಕೇಳಿದ್ದನ್ನು ನೀಡುವನು. ಈ ಲೋಕದ ದೊಡ್ಡವರ ಬಳಿ ಅಧಿಕಾರಿಗಳ ಬಳಿ ನಮ್ಮ ಬೇಡಿಕೆಯನ್ನು ಮುಂದಿಡುವ ಮೊದಲು ಅವರ ಬಳಿ ಒಳ್ಳೆಯ ಮಾತಾಡುತ್ತೇವೆ, ಹೊಗಳುತ್ತೇವೆ, ಅವರಲ್ಲಿರುವ ಶ್ರೇಷ್ಠತೆಯನ್ನು ಕುರಿತು ಪ್ರಶಂಸಿಸುತ್ತೇವೆ. ಆಗ ಅವರು ನಮ್ಮ ಬೇಡಿಕೆಗಳನ್ನು ಪೂರೈಸುವರು. ಅರಸನಾದ ಸೊಲೊಮೋನನು ಕರ್ತನ ಬಳಿ ಜ್ಞಾನವನ್ನು ಬೇಡುವ ಮೊದಲು ಕರ್ತನನ್ನು ಮೆಚ್ಚಿಸಲು ಸಹಸ್ರಯಜ್ಞಗಳನ್ನು ಸಮರ್ಪಿಸಿ, ತನ್ನ ತಂದೆಗೂ ತನಗೂ ಕರ್ತನು ಮಾಡಿದ ಎಲ್ಲಾ ಉಪಕಾರಗಳನ್ನು ಕರ್ತನ ಮುಂದೆ ಅರಿಕೆ ಮಾಡಿದ್ದನು. 1 ಅರಸು 3ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿದೆ. ಆಗ ಕರ್ತನು ಸೊಲೊಮೋನನು ಬೇಡಿದಂತ ಅಪರಿಮಿತವಾದ ಜ್ಞಾನದಿಂದಲೂ, ಧನೈಶ್ವರ್ಯಗಳಿಂದಲೂ ಅವನನ್ನು ತುಂಬಿಸಿದನು.

ದೇವಮಕ್ಕಳೇ, ನೀವು ಕರ್ತನನ್ನು ಮೆಚ್ಚಿಸುವಾಗ, ಆತನು ಮೆಚ್ಚುವಂಥ ಕಾರ್ಯಗಳನ್ನು ಮಾಡುವಾಗ, ನಿಮ್ಮ ಬೇರೆ ಎಲ್ಲಾ ಸಮಸ್ಯೆಗಳನ್ನೂ ಕರ್ತನು ನೋಡಿಕೊಳ್ಳುವನು. ಕುಟುಂಬದಲ್ಲಿ ಸಂತೋಷವನ್ನೂ, ಸಮಾಧಾನವನ್ನೂ ನೆಲೆಗೊಳಿಸುವನು.

*ನೆನಪಿಗೆ : ನಿನ್ನ ವಿಜ್ಞಾಪನೆಯ ಆರಂಭದಲ್ಲಿಯೇ ದೇವರ ಅಪ್ಪಣೆಯಾಯಿತು. ಅದನ್ನು ನಿನಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ. ನೀನು ದೇವರಿಗೆ ಅತಿ ಪ್ರಿಯನು (ದಾನಿ. 9:23).*

ಸೆಪ್ಟೆಂಬರ್ 2

# ಸ್ವಾರ್ಥಚಿಂತಕರಾ?

ಬೆಳಿಗ್ಗೆ : ಕೀರ್ತನೆ 137,138,139
ಸಂಜೆ : 1 ಕೊರಿಂ. 13

"ಕಡೇ ದಿವಸಗಳಲ್ಲಿ ಕಠಿಣಕಾಲಗಳು ಬರುವವೆಂಬದನ್ನು ತಿಳಿದುಕೋ. ಮನುಷ್ಯರು ಸ್ವಾರ್ಥಚಿಂತಕರೂ, ಹಣದಾಸೆಯುಳ್ಳವರೂ ಬಡಾಯಿಕೊಚ್ಚುವವರೂ, ಅಹಂಕಾರಿಗಳೂ, ದೂಷಕರೂ ಆಗಿರುವರು" (2 ತಿಮೊ. 3:1,5)

ಅಂತ್ಯಕಾಲದ ಸೂಚನೆಗಳನ್ನು ಕುರಿತು ಅಪೊ. ಪೌಲನು ಬರೆಯುವಾಗ, ಸುಮಾರು ಇಪ್ಪತ್ತೆರಡು ಗುಂಪಿನ ಜನರನ್ನು ಕುರಿತು ಹೇಳುತ್ತಾನೆ. ಈ ದಿನಗಳಲ್ಲಿ ಕರ್ತನು ತನ್ನ ಜನರನ್ನು ತನ್ನ ಮಹಿಮೆಯಾದ ಬರೋಣಕ್ಕಾಗಿ ಸಿದ್ಧಪಡಿಸುವ ದಿನಗಳು. ಹಿಂಗಾರನ್ನು ಸುರಿಸುವನು. ಅದೇ ವೇಳೆಯಲ್ಲಿ ಸೈತಾನನು ಸ್ವಾರ್ಥಚಿಂತಕರನ್ನೂ, ಹಣದಾಸೆಯುಳ್ಳವರನ್ನೂ ಬಡಾಯಿ ಕೊಚ್ಚುವವರನ್ನೂ, ಅಹಂಕಾರಿಗಳನ್ನೂ, ದೂಷಕರನ್ನೂ ಎಬ್ಬಿಸುತ್ತಿರುವನು.

ಇಸ್ರಾಯೇಲ್ಯರಲ್ಲೆಲ್ಲಾ 'ಆಕಾನ'ನು ಸ್ವಾರ್ಥಚಿಂತಕನಾಗಿದ್ದನು. ತನಗೆಂದು ಆಶೆಯಿಂದ ಶಿನಾರ ದೇಶದ ನಿಲುವಂಗಿಯನ್ನೂ, ಇನ್ನೂರು ರೂಪಾಯಿ ತೂಕದ ಬೆಳ್ಳಿಯನ್ನೂ, ಐವತ್ತು ರೂಪಾಯಿ ತೂಕದ ಬಂಗಾರದ ಗಟ್ಟಿಯನ್ನೂ ತೆಗೆದು ತನ್ನ ಗುಡಾರದಲ್ಲಿ ಹುದುಗಿಸಿಟ್ಟಿದ್ದನು. ಕರ್ತನಿಂದ ತಡೆಮಾಡಿಸಲ್ಪಟ್ಟಿದ್ದ ಹಾಗೂ ಶಾಪಕ್ಕೆ ಗುರಿಯಾದ ವಸ್ತುಗಳೆಂದು ಅವನು ತಿಳಿದಿದ್ದರೂ ತನ್ನ ಸ್ವಾರ್ಥದಿಂದ ಅವುಗಳನ್ನು ತೆಗೆದುಕೊಂಡು ಇಸ್ರಾಯೇಲ್ಯರೆಲ್ಲರೂ ಶಾಪಕ್ಕೆ ಗುರಿಯಾಗುವಂತೆ ಮಾಡಿದನು. ಅವನೊಬ್ಬನು ಮಾಡಿದ ತಪ್ಪಿನಿಂದಾಗಿ ಇಸ್ರಾಯೇಲ್ಯರು ಯುದ್ಧದಲ್ಲಿ ಸೋಲನ್ನು ಕಾಣಬೇಕಾಯಿತು. ಮಾತ್ರವಲ್ಲ, ಅವನ ತಪ್ಪು ಬಹಿರಂಗವಾದಾಗ ಅವನೂ ಅವನ ಕುಟುಂಬದವರು ದನಕುರಿ ಎಲ್ಲವೂ ಕಲ್ಲೆಸೆಯಲ್ಪಟ್ಟು ಕೊಲ್ಲಲ್ಪಟ್ಟರು. ಸ್ವಾರ್ಥ ಚಿಂತನೆಯಿಂದಾಗಿ ಇಂದು ಕುಟುಂಬಗಳಲ್ಲಿ ಸಮಾಜದಲ್ಲಿ ದೇಶದಲ್ಲಿ ಅಸಮಾಧಾನ ಅಶಾಂತಿ, ತಲೆಎತ್ತಿ ನಿಂತಿರುವವು. ಸ್ವಾರ್ಥತೆ ಎಂಥವರನ್ನೂ ಕುರುಡಾಗಿಸಿಬಿಡುತ್ತದೆ. ಅಂಥವರು ಮೃಗಗಳಾಗಿ ಮಾರ್ಪಡುವ ಕುಟುಂಬದಲ್ಲಿ ಗಂಡನು ಸ್ವಾರ್ಥಿಯಾದರೆ, ಹೆಂಡತಿ ಮಕ್ಕಳ ಸ್ಥಿತಿ ಕರುಣಾಜನಕವಾದದ್ದು. ಇಂದು ಅನೇಕ ಪುರುಷರು ತಮ್ಮ ಸ್ವಂತ ಸುಖಭೋಗಗಳಿಗಾಗಿ ತಮ್ಮ ಹೆಂಡತಿ ಮಕ್ಕಳನ್ನೇ ಬಲಿಕೊಡಲು ಸಿದ್ಧರಾಗುವರು. ಅದೇ ರೀತಿ ಸ್ತ್ರೀಯರೂ ತಮ್ಮ ಐಹಿಕ ಆಶೆಗಳಿಗೆ ಒಳಗಾಗಿ ಗಂಡಂದಿರನ್ನೇ ಕೊಲೆಗೀಡುಮಾಡುವ ಸಂಗತಿಗಳನ್ನು ದಿನಪತ್ರಿಕೆಗಳಲ್ಲಿ ಓದುತ್ತಲೇ ಇದ್ದೇವೆ. ಇನ್ನು ದೇಶದ ನಾಯಕರು ಸ್ವಾರ್ಥಚಿಂತಕರಾಗಿ ದೇಶದ ಬೊಕ್ಕಸವನ್ನೇ ನುಂಗುವ ವಿಚಾರ ಹೊಸದೇನೂ ಅಲ್ಲ.

ದೇವಮಕ್ಕಳೆ, ನಿಮಗೆ ಲೋಕವಲ್ಲ, ಕ್ರಿಸ್ತನೇ ಮಾದರಿಯಾಗಿರಲಿ. ಆತನ ನಿಸ್ವಾರ್ಥವಾದ ಆ ಕಲ್ವಾರಿ ಪ್ರೀತಿ ನಿಮ್ಮ ಮನೋನೇತ್ರಗಳ ಮುಂದೆ ಸದಾ ಇರಲಿ. ಈ ಪ್ರಪಂಚದಲ್ಲಿರುವವರೆಲ್ಲ ನಿಸ್ವಾರ್ಥರಾಗಿ ಜೀವಿಸಿರಿ.

*ನೆನಪಿಗೆ : ತಮ್ಮನ್ನು ತಾವೇ ಹೊಗಳಿಕೊಳ್ಳುವ ಕೆಲವರಲ್ಲಿ ನಮ್ಮನ್ನು ಸೇರಿಸಿಕೊಳ್ಳುವದಕ್ಕಾಗಿ, ಅವರೊಂದಿಗೆ ಹೋಲಿಸಿಕೊಳ್ಳುವದಕ್ಕಾಗಲಿ ನಮಗೆ ಧೈರ್ಯಸಾಲದು (2 ಕೊರಿಂ. 10:12).*



ಸೆಪ್ಟೆಂಬರ್ 3

# ಹಣದಾಸೆಯವರು!

ಬೆಳಿಗ್ಗೆ : ಕೀರ್ತ. 140,141,142
ಸಂಜೆ : 1 ಕೊರಿಂ. 14:1–25

ಕಡೇ ದಿನಗಳಲ್ಲಿ ಮನುಷ್ಯರು ಸ್ವಾರ್ಥ ಚಿಂತಕರೂ, ಹಣದಾಸೆಯವರೂ ಬಡಾಯಿ ಕೊಚ್ಚಿಕೊಳ್ಳುವವರೂ, ಅಹಂಕರಿಗಳೂ, ದೂಷಕರೂ ಆಗಿ..... (2 ತಿಮೊ. 3:1,2).

ಈ ಕಡೆಯ ಕಾಲದಲ್ಲಿ ಹಣದಾಸೆ ಮನುಷ್ಯರಲ್ಲಿ ಹೆಚ್ಚುತ್ತಾ ಇದೆ. ಹಣ, ಹಣ ಎಂದು ಎಲ್ಲೆಲ್ಲೂ ಅಲೆಯುತ್ತಿರುವರು. ಹಣಕ್ಕಾಗಿ ದೇಶ ವಿದೇಶಗಳನ್ನು ಸುತ್ತಿ ಬರುವರು. ಇಂದಿನ ಪೀಳಿಗೆಯ ಮಂತ್ರವೇ ಹಣ. ಹಣದಿಂದ ಎಲ್ಲವನ್ನೂ ಪಡೆಯಬಹುದು. ಖರೀದಿಸಬಹುದು. ಏನುಬೇಕಾದರೂ ಸಾದಿಸಬಹುದೆಂದು ಜನರು ತಿಳಿದಿರುವರು. ಹಣ ಎಂಬುದು ಪಾತಾಳದವರೆಗೂ ಸೇರುವದು.

ನಿಜವೇ, ಹಣ ಪಾತಾಳದವರೆಗೂ ಮುಟ್ಟುವದು. ಆದರೆ ಹಣ ಎಂದಿಗೂ ಪರಲೋಕದವರೆಗೂ ಮುಟ್ಟಲು ಸಾಧ್ಯವಿಲ್ಲ. ಹಣದಿಂದ ದೇವರ ರಾಜ್ಯವನ್ನು ಸಂಪಾದಿಸಲಾಗದು. ದೇವ ವರಗಳನ್ನು ಪಡೆಯಲಾಗದು. ಇಂದು ಅನೇಕ ಕ್ರೈಸ್ತರು ಹಣದಾಸೆಯಿಂದ ಕರ್ತನ ದಿನವನ್ನೂ ಕಡೆಗಣಿಸಿ ಅದನ್ನು ಸಂಪಾದಿಸಲು ಆಲಯಕ್ಕೂ ಬರುವದಿಲ್ಲ. ಕರ್ತನಿಗಿಂತ ಹೆಚ್ಚಾಗಿ ನೀವು ಯಾವದನ್ನು ಪ್ರೀತಿಸಿದರೂ ಅದು ವಿಗ್ರಹಾರಾಧನೆಯಾಗಿ ಮಾರ್ಪಡುವದು. "ಬೆಳ್ಳಿಯನ್ನು ಆಶಿಸುವವನಿಗೆ ಎಷ್ಟು ಬೆಳ್ಳಿಯಿಂದಲೂ ತೃಪ್ತಿಯಾಗದು; ಸಮೃದ್ಧಿಯನ್ನು ಬಯಸುತ್ತಲೇ ಇರುವವನಿಗೆ ಆದಾಯವೆಷ್ಟಾದರೂ ಸಾಲದು. ಎಲ್ಲವೂ ವ್ಯರ್ಥ" ಎಂದು ಪ್ರಸಂಗಿ ಹೇಳುತ್ತಾನೆ (ಪ್ರಸಂ. 5:10). ಅನೇಕರು ಅಡ್ಡದಾರಿಯಲ್ಲಿ ಸಾಗಿ ಜನರಿಗೆ ಸರ್ಕಾರಕ್ಕೆ ಮೋಸ ಮಾಡಿ ಅಧಿಕವಾಗಿ ಹಣ ಸಂಪಾದಿಸುವರು. ಇನ್ನು ಕುಳಿತು ಅನುಭವಿಸೋಣ ಎಂದು ನೆನಸುವಾಗ ಹೃದಯಾಘಾತದಿಂದಲೋ, ಇಲ್ಲವೇ ಯಾವುದಾದರೂ ಖಾಯಿಲೆಗಳಿ ತುತ್ತಾಗಿ ಮರಣ ಹೊಂದುವರು. ಹಣದಾಸೆ ಸಕಲ ಕೆಟ್ಟತನಕ್ಕೆ ಮೂಲವಾಗಿದೆ. ಇಂದಿನ ಕೆಲವು ತಂದೆ ತಾಯಿಗಳು ತಮ್ಮ ಮಕ್ಕಳ ಭವಿಷ್ಯವನ್ನು ಕರ್ತನ ಕೈಯಲ್ಲಿ ಒಪ್ಪಿಸಿಕೊಡದೆ, ತಾವೇ ರೂಪಿಸುವದಾಗಿ ನಿಶ್ಚಯಿಸಿ ಹಗಲಿರುಳೆನ್ನದೆ ದುಡಿದು ಸಂಪಾದಿಸುವರು. ಮಕ್ಕಳ ಬೆಳವಣಿಗೆಗೆ ಗಮನ ಹರಿಸಲು ಸಮಯವಿಲ್ಲದೆ, ಲಂಚವಾಗಿ ಮಕ್ಕಳು ಕೇಳಿದ್ದನ್ನೆಲ್ಲಾ ಕೊಟ್ಟು ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವದರಲ್ಲಿ ತಾವೇ ಹಾಳು ಮಾಡುವರು. ಕಾಲ ಮಿಂಚಿದ ಮೇಲೆ ವ್ಯಥೆಪಡುವರು. ಅವರ ಹಣ ಅವರ ಮಕ್ಕಳಿಗೆ ವಿದ್ಯೆಯನ್ನು ಕೊಡಬಹುದು, ಆಸ್ತಿಯನ್ನು ಕೊಡಬಹುದು ಆದರೆ ಪರಲೋಕದ ಸ್ವಾಸ್ಥ್ಯಕ್ಕೆ ಬಾಧ್ಯರನ್ನಾಗಿ ಮಾಡಲು ಹಣಕ್ಕೆ ಬಲವಿಲ್ಲ.

ದೇವಮಕ್ಕಳೆ, ಕರ್ತನಿಗಿಂತ ಹೆಚ್ಚಿನ ಪ್ರಾಧಾನ್ಯತೆಯನ್ನು ಯಾವದಕ್ಕೂ ಕೊಡದಿರಿ. ಕರ್ತನ ಆಶೀರ್ವಾದವೇ ಕುಟುಂಬದಲ್ಲಿನ ಸಮಾಧಾನಕ್ಕೂ ಸಂತೋಷಕ್ಕೂ ಕಾರಣವಾದದ್ದು ಎಂಬ ಸತ್ಯವನ್ನು ಮರೆಯದಿರಿ.

*ನೆನಪಿಗೆ : ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿದ್ದೇನೆ. ಬಡವನಾಗಿರಲೂ ಬಲ್ಲೆನು, ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನು (ಫಿಲಿ. 4:11,12)*

ಸೆಪ್ಟೆಂಬರ್ 4

## ಸುಖಭೋಗ ಪ್ರಿಯರು!

ಬೆಳಿಗ್ಗೆ : ಕೀರ್ತ. 143,144,145
ಸಂಜೆ : 1 ಕೊರಿಂ. 14:26–40

ಕಡೇ ದಿನಗಳಲ್ಲಿ ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರೂ ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವವರೂ ಆಗಿರುವರು (2 ತಿಮೊ. 3:4–5).

ಕಡೇ ಕಾಲದ ಸೂಚನೆಗಳಲ್ಲಿ ಒಂದು ಅನೇಕರು ಸುಖ ಭೋಗಿಗಳಾಗಿ ಮಾರ್ಪಡುವರು. ಮನಸ್ಸು ಶರೀರ ಬಯಸಿದವುಗಳನ್ನು ಮಾಡುವರು. ಅವರು ಭೋಗದ ಜೀವಿತವನ್ನೇ ಬಯಸುವರು. ಒಳ್ಳೆಯ ಮನೆ, ಒಳ್ಳೆಯ ಉಡುಗೆ ತೊಡುಗೆ, ಒಳ್ಳೆಯ ಊಟ ಹೀಗೆ ಎಲ್ಲಾ ಐಹಿಕ ಸುಖಗಳೇ ಇರಬೇಕು. ಆದರೆ ಆತ್ಮೀಕ ಚಿಂತನೆಯನ್ನು ಅವರು ಬಯಸುವದಿಲ್ಲ.

ಒಬ್ಬ ವಿಶ್ವಾಸಿ ಬಡವನಾಗಿದ್ದನು, ಸ್ವಂತ ಮನೆ ಇಲ್ಲದೆ ಹಳೇ ಸೈಕಲಿನಲ್ಲಿ ಓಡಾಡುತ್ತಿದ್ದನು. ಆದರೆ ಐಶ್ವರ್ಯ, ಸಂಪತ್ತು ಬಂದ ಮೇಲೆ ಕರ್ತನನ್ನು ಮರೆತುಬಿಟ್ಟನು. ಅವನು ನಡೆನುಡಿ ನಾಗರೀಕತೆ ಮಾರ್ಪಟ್ಟಿತು. ಭಕ್ತಿಯ ವೇಷ ಧರಿಸಿಕೊಂಡವನಾದನು. ಎಷ್ಟು ವ್ಯಸನಕರವಾದ ಸಂಗತಿಯಲ್ಲವೇ? ಸುಖಭೋಗಿಯಾಗಿರುವ ವಿಧವೆಯು ಬದುಕಿರುವಾಗಲೂ ಸತ್ತವಳೇ (1 ತಿಮೊ.5:6) ಎಂದು ಸತ್ಯವೇದ ಹೇಳುತ್ತದೆ. ಭೋಗಪುರುಷ ಹಾಗೂ ಲಾಜರನ ಸಂಭವವನ್ನು ನೋಡುವಾಗ, ಐಶ್ವರ್ಯವಂತನು ಸಕಲಾತಿನಯ ಉಡುಪುಗಳನ್ನು ಧರಿಸಿ, ದಿನವೂ ವೈಭವದಿಂದ ಸುಖ ಜೀವನ ನಡೆಸುತ್ತಿದ್ದನು. ಲಾಜರನೆಂಬ ಒಬ್ಬ ಭಿಕ್ಷುಕನು ಅವನ ಮನೆಯ ಬಾಗಿಲಿನಲ್ಲಿ ಬಿದ್ದುಕೊಂಡು ಭೋಗಪುರುಷನ ಮೇಜಿನಿಂದ ಬೀಳುತ್ತಿದ್ದ ಎಂಜಲಿನ ಊಟವನ್ನು ತಿಂದು ಬದುಕುತ್ತಿದ್ದನು (ಲೂಕ. 16:19–20,21). ಒಳ್ಳೆಯದನ್ನು ಮಾಡುವದಕ್ಕೆ ಶಕ್ತನಾಗಿದ್ದರೂ ಆ ಭೋಗ ಪುರುಷನು ಬಡವನಾದ ಲಾಜರನಿಗೆ ಯಾವದೇ ಉಪಕಾರ ಮಾಡಲಿಲ್ಲ. ಅದು ಪಾಪವಾಗಿ ಪರಿಣಮಿಸಿತು. ಅವನು ನರಕಕ್ಕೆ ಹೋದನಂತರ ಒಂದು ತೊಟ್ಟು ನೀರೂ ಅವನಿಗೆ ದೊರಕಲಿಲ್ಲ ಎಂತಹ ವಿಪರ್ಯಾಸ.

ದೇವಮಕ್ಕಳೇ, ಕರ್ತನು ಕೊಡುವದೆಲ್ಲವೂ ನೀವು ಸ್ವಾರ್ಥಿಗಳಾಗಿ ಅನುಭವಿಸಬೇಕೆಂದು ಅಲ್ಲ. ಕರ್ತನ ರಾಜ್ಯವು ಕಟ್ಟಿ ಎಬ್ಬಿಸಲ್ಪಡಬೇಕೆಂದು. ಕೆಲವರನ್ನು ಕರ್ತನು ಬಹಳವಾಗಿ ಆಶೀರ್ವದಿಸುವಾಗ, ಅವರ ಜೀವಿತದ ನೆಲೆಯೇ ಮಾರ್ಪಟ್ಟು ಹೋಗುವದು. “ನೋಡಿರಿ, ದುಷ್ಟರು ಇಂಥವರೇ, ಅವರು ಸದಾ ಸುಖದಿಂದಿದ್ದು ಸ್ಥಿತಿವಂತರಾಗಿ ಹೋಗುತ್ತಾರೆ” (ಕೀರ್ತ.73:12) ಎಂದು ಕೀರ್ತನೆಗಾರನು ಬರೆಯುತ್ತಾನೆ. ಪ್ರಿಯರೇ, ಕರ್ತನು ನಿಮ್ಮನ್ನು ಆಶೀರ್ವದಿಸುವಾಗ, ದೇವರ ಚಿತ್ತಕ್ಕೆ ಒಪ್ಪುವ ರೀತಿಯಲ್ಲಿ ಜೀವಿಸುತ್ತಾ ಆತನ ರಾಜ್ಯದ ಏಳಿಗೆಗಾಗಿ ಶ್ರಮಿಸಿರಿ.

*ನೆನಪಿಗೆ : ಯುವತಿಯೇ, ಬಾಬೆಲ್‌ಪುರಿಯೇ, ಕೆಳಕ್ಕಿಳಿದು ಧೂಳಲ್ಲಿ ಕೂತುಕೋ, ಕಸ್ದೀಯರ ನಗರಿಯೇ ಸಿಂಹಾಸನರಹಿತಳಾಗಿ ನೆಲದ ಮೇಲೆ ಕುಕ್ಕರಿಸು, ನೀನು ಇನ್ನು ಕೋಮಲೆ, ಸುಕುಮಾರಿ ಎಂದೆನಿಸಿಕೊಳ್ಳಲಾರೆ (ಯೆಶಾ. 47:1).*



ಸೆಪ್ಟೆಂಬರ್ 5

## ಮನುಷ್ಯರನ್ನು ಮೆಚ್ಚಿಸುವವರು!

ಬೆಳಿಗ್ಗೆ : ಕೀರ್ತನೆ 146,147
ಸಂಜೆ : 1 ಕೊರಿಂ. 15:1–34

ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ, ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ, ನಾನು ಕ್ರಿಸ್ತನದಾಸನಲ್ಲ (ಗಲಾ. 1:10).

ಕರ್ತನನ್ನು ಮೆಚ್ಚಿಸಿ, ಭಯಭಕ್ತಿಯಿಂದ ಜೀವಿಸುವಾಗ, ದೇವರ ಬಳಿಯಿಂದ ಲೆಕ್ಕವಿಲ್ಲದಷ್ಟು ಆಶೀರ್ವಾದಗಳನ್ನು ಪಡೆಯಬಹುದು. ಹಾಲೂ, ಜೇನೂ ಹರಿಯುವ ಪರಮ ಕಾನಾನನ್ನು ನಿತ್ಯಜೀವವನ್ನು ನಿಮಗೆ ನೀಡುವನು. ಈ ಕೊಂಚಕಾಲದ ಜೀವಿತದಲ್ಲಿ ನೀವು ಆತನಿಗೆ ನಿಮ್ಮ ಅಂತರ್ಯದಲ್ಲಿ ಸ್ಥಳಕೊಟ್ಟು, ಆತನಿಗೆ ಮೆಚ್ಚಿಗೆಯಾಗುವಂತೆ ನಡೆದುಕೊಂಡರೆ ಮಹಿಮೆಯಾದ ಪ್ರಕಾಶಮಾನವಾದ ದೇಶದಲ್ಲಿ ಎಂದೆಂದಿಗೂ ಜೀವಿಸುವಂತೆ ನಿಮಗೆ ಆತನು ಸ್ಥಳ ಕೊಡುವನು.

ಉದಾಹರಣೆಗಾಗಿ, ಒಬ್ಬ ದೇವಸೇವಕನು ಜನರನ್ನು ಮೆಚ್ಚಿಸಲು ಮತ್ತು ಅವರಿಂದ ಚಪ್ಪಾಳೆಯನ್ನು ನಿರೀಕ್ಷಿಸಿ ಆಡಂಬರದಿಂದ ಪ್ರಸಂಗವನ್ನು ಮಾಡಿದರೆ, ಜನರು ಸಂತೋಷ ಪಡಬಹುದು. ಅಧಿಕವಾದ ಕಾಣಿಕೆಗಳನ್ನು ಅವರು ಕೊಡಬಹುದು ಎಂದು ನೆನಸಬಹುದು. ಆದರೆ ಕರ್ತನು ಹೇಳಬೇಕಾದ ಸಂಗತಿಗಳನ್ನು ಹೇಳದೇ ಹೋದರೆ ಕರ್ತನ ಆತ್ಮ ದುಃಖಪಡುವದು. ಆದ್ದರಿಂದ ಕರ್ತನು ಏನು ಹೇಳುತ್ತಾನೋ ಅದನ್ನು ಗಮನವಿಟ್ಟು ಕೇಳಿ. ಅದನ್ನೇ ಜನರಿಗೆ ಹೇಳಬೇಕು. ಪ್ರಪಂಚವನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುವದು ಸ್ವಾಭಾವಿಕವಾದದ್ದು. ವಿವಾಹವಾದ ಗಂಡಹೆಂಡತಿಯರು ಒಬ್ಬರನ್ನೊಬ್ಬರು ಮೆಚ್ಚಿಸಲು ಪ್ರಯತ್ನಿಸುವದು ಸಹಜ. ಆದರೆ ಕರ್ತನ ಮಕ್ಕಳಾದ ನೀವೋ, ಕರ್ತನನ್ನು ಯಾವ ರೀತಿ ಮೆಚ್ಚಿಸಬೇಕೆಂಬ ಚಿಂತನೆಯೊಂದಿಗೆ ಇರಬೇಕು. ಯಾರು ಏನೇ ಹೇಳಲಿ ಆ ಕಾರ್ಯ ಅಥವಾ ಆಲೋಚನೆ ಕರ್ತನ ದೃಷ್ಟಿಯಲ್ಲಿ ಸರಿಯಾದದ್ದಾ? ಆತನ ವಾಕ್ಯಗಳಿಗೆ ಅನುಗುಣವಾಗಿರುವದಾ? ಎಂಬುದನ್ನು ಚಿಂತಿಸುವವರಾಗಿರಬೇಕು. ಇಲ್ಲವಾದಲ್ಲಿ ಕರ್ತನನ್ನು ಮೆಚ್ಚಿಸುವದು ಅಸಾಧ್ಯವಾದ ಕಾರ್ಯ. ಪಿಲಾತನು ಜನರನ್ನು ಮೆಚ್ಚಿಸುವದಕ್ಕಾಗಿ ಜನರ ಇಚ್ಛೆಯಂತೆ ಬರಬ್ಬನನ್ನು ಬಿಡುಗಡೆ ಮಾಡಿ ಪಾಪವನ್ನೇ ಅರಿಯದ ಯೇಸುಕ್ರಿಸ್ತನನ್ನು ಮರಣದಂಡನೆಗೆ ಒಪ್ಪಿಸಿಕೊಟ್ಟನು. ಇದರಿಂದ ಅವನು ತನ್ನ ಅಧಿಕಾರದಲ್ಲಿ ಮುಂದುವರೆದಿರಬಹುದು. ಆದರೆ ಕಡೆಯ ಕಾಲದಲ್ಲಿ ಮತಿಗೆಟ್ಟವನಾಗಿ ಆಳ್ವಿಕೆ ನಡೆಸಲಾಗದೆ ಹುಚ್ಚನಾಗಿ ಜೀವಿಸಬೇಕಾಯಿತು.

ದೇವಮಕ್ಕಳೇ, ನೀವು ಮನುಷ್ಯರನ್ನು ಮೆಚ್ಚಿಸದಿರಿ. ಆ ಒಂದು ಆಕಾಂಕ್ಷೆ ಮನಃಸ್ಥೈರ್ಯ ಇಲ್ಲವಾದರೆ, ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ.

*ನೆನಪಿಗೆ : ನಿನ್ನ ಚಿತ್ತದಂತೆ ನಡೆದುಕೊಳ್ಳುವದನ್ನು ನನಗೆ ಕಲಿಸು; ನನ್ನ ದೇವರು ನೀನಲ್ಲವೋ? ಶುಭಕಾರಿಯಾಗಿರುವ ನಿನ್ನ ಆತ್ಮನು ನನ್ನನ್ನು ಮಟ್ಟ ನೆಲದಲ್ಲಿ ನಡಿಸಲಿ (ಕೀರ್ತ. 143:10).*

ಸೆಪ್ಟೆಂಬರ್ 6

# ನಿದ್ರಾಪ್ರಿಯರು!

ಬೆಳಿಗ್ಗೆ : ಕೀರ್ತ. 148,149,150
ಸಂಜೆ : 1 ಕೊರಿಂ. 15:35–58

ಇವರೆಲ್ಲರೂ... ನಿದ್ರೆಯನ್ನಾಶಿಸಿ ಮಲಗಿಕೊಂಡು ಕನವರಿಸುವ.... (ಯೆಶಾ. 56:10).

ಕಡೆಯ ಕಾಲದಲ್ಲಿ ಅನೇಕರು ಘನನಿದ್ರೆಯ ಆತ್ಮದಿಂದ ಹಿಡಿಯಲ್ಪಟ್ಟು ನಿದ್ರಾಪ್ರಿಯರಾಗಿರುತ್ತಾರೆ. ಇಂಥವರು ಕಾವಲುಗಾರರಾಗಿ ನಿಲ್ಲಲಾರರು. ಸತ್ಯವೇದ ಹೇಳುತ್ತದೆ, ಅವರ ಕಾವಲುಗಾರರಿಗೆ ಯಾರಿಗೂ ತಿಳುವಳಿಕೆ ಇಲ್ಲ. ಬೊಗಳಲಾರದ ಮೂಗನಾಯಿಗಳು (ಯೆಶಾ. 56:10) ಎಂದು.

ಅಬ್ರಹಾಮನು ಯಜ್ಞವನ್ನರ್ಪಿಸಿದ ಮೇಲೆ, ಅವನಿಗೆ ಗಾಢ ನಿದ್ರೆ ಹತ್ತಿತು. ಪಕ್ಷಿಗಳು ಇಳಿದು ಯಜ್ಞದ ಮಾಂಸವನ್ನು ಭಕ್ಷಿಸುವಾಗ ಅವುಗಳನ್ನು ಓಡಿಸಲಾಗದೆ ಭಯಭ್ರಾಂತನಾದನು. ಆ ಸಂದರ್ಭದಲ್ಲಿ ಕರ್ತನು ಅವನಿಗೆ ನಿನ್ನ ಸಂತತಿಯವರು ಕೆಲವು ಕಾಲ ಅನ್ಯದೇಶದಲ್ಲಿ ವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆ ಪಡುವರು. ಇದನ್ನು ನೀನು ಚೆನ್ನಾಗಿ ತಿಳಿಯತಕ್ಕದ್ದು (ಆದಿ. 15:13) ಎಂದು ಹೇಳಿದನು. ಘನ ನಿದ್ರೆಯ ಆತ್ಮ ಮನುಷ್ಯನನ್ನು ಶಾಪಕ್ಕೂ, ದಾಸತ್ವಕ್ಕೂ ನಡಿಸುತ್ತದೆ. ಸಂಸೋನನು ದೇವರ ಮಹಿಮೆಯಾದ ಸೇವಕನಾಗಿದ್ದನು. ಆರಿಸಿಕೊಳ್ಳಲ್ಪಟ್ಟು, ಅಭಿಷೇಕದಿಂದ ತುಂಬಿದವನಾಗಿದ್ದರೂ, ಘನನಿದ್ರೆಯ ಆತ್ಮ ಅವನಲ್ಲಿ ನೆಲೆಸಿತ್ತು. ವೇಶ್ಯೆಯಾದ ದೆಲೀಲಳ ಮಡಿಲಿನಲ್ಲಿ ಮಲಗಿದನು. ಅಯ್ಯೋ! ಎಂಥ ಪರಿತಾಪಕರವಾದ ಸ್ಥಿತಿ. ಫಿಲಿಷ್ಟಿಯರಿಂದ ಕಣ್ಣುಗಳು ಕೀಳಲ್ಪಟ್ಟು ಬೇಡಿಗಳಿಂದ ಬಂಧಿಸಲ್ಪಟ್ಟು ಹಿಟ್ಟು ಬೀಸುವವನಾದನು. ನಿದ್ರೆ ಒಬ್ಬ ಮನುಷ್ಯನನ್ನು ಸೋಮಾರಿಯನ್ನಾಗಿ ಮಾಡಿಬಿಡುತ್ತದೆ. ಎಚ್ಚರದಿಂದಿರಬೇಕಾದ ಸಮಯಗಳಲ್ಲಿ ನಿದ್ರೆ ಆವರಿಸಿ ಗಂಡಾಂತರಗಳಿಗೆ ಒಳಗಾಗುವನು. ಕಾವಲು ಕಾಯಬೇಕಾದ ಸಮಯದಲ್ಲಿ ಕಾವಲುಗಾರನು ನಿದ್ರೆಗೆ ಜಾರಿದರೆ ಶತ್ರು ಸುಲಭವಾಗಿ ಒಳಗೆ ಪ್ರವೇಶಿಸಿಬಿಡುವನು. ಹಾಗೆಯೇ ಈ ಕಡೆಯ ಕಾಲದಲ್ಲಿ ಸೈತಾನನ ಆಳ್ವಿಕೆಯಿಂದ ತುಂಬಿರುವ ಈ ಪ್ರಪಂಚದಲ್ಲಿ ವಿಶ್ವಾಸಿಯು ಈ ಪ್ರಪಂಚದ ವ್ಯಾಮೋಹ ಆಕರ್ಷಣೆಗಳಿಗೆ ಒಳಗಾಗಿ ಸ್ವಲ್ಪ ಮೈಮರೆತರೂ ಶತ್ರುವಾದ ಸೈತಾನನು ಸುಲಭವಾಗಿ ಅವನನ್ನು ಆವರಿಸಿಬಿಡುವನು.

ದೇವಮಕ್ಕಳೇ, ಘನ ನಿದ್ರೆಯ ಆತ್ಮಕ್ಕೆ ನಿಮ್ಮೊಳಗೆ ನುಸುಳಲು ಅವಕಾಶ ಕೊಡದಿರಿ. ಪ್ರಾರ್ಥಿಸುವ ಸಮಯದಲ್ಲಿ ಎಚ್ಚರದಿಂದಿದ್ದು ಪ್ರಾರ್ಥಿಸಿರಿ. ದೇವರ ರಾಜ್ಯವು ಲೋಕದಲ್ಲಿ ಕಟ್ಟಲ್ಪಡಬೇಕಾದರೆ ಪ್ರತಿಯೊಬ್ಬ ವಿಶ್ವಾಸಿಯೂ ಕಾವಲುಗಾರನಾಗಿರುವನು. ನಿನ್ನ ರಾಜ್ಯವು ಬರಲಿ ಎಂದು ಪ್ರತಿದಿನವೂ ಕರ್ತನಲ್ಲಿ ಅರಿಕೆ ಮಾಡುತ್ತೇವಲ್ಲವೇ?

*ನೆನಪಿಗೆ : ನಿದ್ರೆ ಮಾಡುವವನೇ ಎಚ್ಚರವಾಗು! ಸತ್ತವರನ್ನು ಬಿಟ್ಟು ಏಳು! ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು ಎಂದು ಹೇಳಿದೆ. (ಎಫೆ. 5:14).*



ಸೆಪ್ಟೆಂಬರ್ 7

# ರಕ್ತ ಪ್ರಿಯರು!

ಬೆಳಿಗ್ಗೆ : ಜ್ಞಾನೋಕ್ತಿ. 1,2
ಸಂಜೆ : 1 ಕೊರಿಂ. 16

ಯೆಹೋವನೇ ನರಹತ್ಯೆ ಮಾಡುವವರೂ ಕಪಟಿಗಳೂ ನಿನಗೆ ಹೇಯವಾಗಿದ್ದಾರೆ (ಕೀರ್ತ.5:6).

ಕಡೆಯ ಕಾಲದಲ್ಲಿ ಅನೇಕರು ಕರ್ತನನ್ನು ಮೆಚ್ಚಿಸದೆ, ಸ್ವಾರ್ಥಚಿಂತಕರೂ, ಸುಖಭೋಗವಾದ ಜೀವಿತವನ್ನು ಬಯಸುವವರಾಗಿಯೂ ಮನುಷ್ಯರನ್ನು ಮೆಚ್ಚಿಸುವವರಾಗಿಯೂ ಇರುವರು. ಆದರೆ ಯಾವನು ಕರ್ತನನ್ನು ಮೆಚ್ಚಿಸುವನೋ, ಅವನು ಕೆಟ್ಟದ್ದಕ್ಕೆ ದೂರವಿದ್ದು, ಸಮಾಧಾನವೂ, ಸಂತೋಷವೂ ಉಳ್ಳವನಾಗಿರುವನು. ಕರ್ತನು ಅವನಿಗೆ ಪರಲೋಕ ರಾಜ್ಯವನ್ನೂ ನಿತ್ಯ ಜೀವವನ್ನೂ ನೀಡಿ ಆಶೀರ್ವದಿಸುವನು.

ದುರ್ಮಾರ್ಗಿಗಳು ರಕ್ತಪ್ರಿಯರಾಗಿ ಹೇಗೆ ಮಾರ್ಪಡುವರು? ಅವರಲ್ಲಿ ಸ್ವಾರ್ಥ, ಕಪಟ, ಮೋಸ ಎಂಬ ಆತ್ಮಗಳು ಮಾತ್ರವಲ್ಲ, ದ್ವೇಷ, ಅಸೂಯೆಗಳೆಂಬ ದುರಾತ್ಮಗಳು ಅವರೊಳಗೆ ಹೊಕ್ಕು ಇತರರ ರಕ್ತವನ್ನು ಚೆಲ್ಲಿಯಾದರೂ ಸ್ವಾರ್ಥಸಾಧನೆ ಮಾಡಿಕೊಳ್ಳುವ ಮುಯ್ಯಿಗೆ ಮುಯ್ಯಿ ತೀರಿಸುವ, ದ್ವೇಷ ಸಾಧಿಸುವ ಚಪಲದಿಂದ ತುಂಬಿದವರಾಗಿ ಮಾರ್ಪಡುವರು. ಅಂಥವರಲ್ಲಿ ಕನಿಕರ, ಕರುಣೆ, ದಯೆ ಎಂಬ ದೈವೀಕ ಗುಣಗಳೇ ಇಲ್ಲದವರಾಗಿಬಿಡುತ್ತಾರೆ. ಆದ್ದರಿಂದಲೇ ಸತ್ಯವೇದ ಹೇಳುತ್ತದೆ, “ಕೋಪ ಮಾಡಿದರೂ ಪಾಪ ಮಾಡಬೇಡ” ಎಂದು. ಇಂಥವರ ಸಹವಾಸ ಮಾಡುವದರಲ್ಲಿ ದೇವಮಕ್ಕಳು ಜಾಗ್ರತೆಯುಳ್ಳವರಾಗಿರಬೇಕು. ರಕ್ತದಿಂದ ಹೊಲಸಾದ ಕೈಗಳನ್ನು ಕರ್ತನು ಅಸಹ್ಯ ಪಡುವನು. ದಾವೀದನು ಇಸ್ರಾಯೇಲ್ ದೇಶವನ್ನು ವಿಸ್ತರಿಸಲು ಅನೇಕ ಯುದ್ಧಗಳನ್ನು ಮಾಡಬೇಕಾಯಿತು. ಸಾವಿರರು ಜನರ ರಕ್ತ ಸುರಿಯಲ್ಪಟ್ಟಿತು. ಆದ್ದರಿಂದ ಕರ್ತನು ದಾವೀದನಿಗೆ ನೀನು ಅಧಿಕವಾದ ರಕ್ತ ಸುರಿಸಿದ್ದರಿಂದ ನಿನ್ನ ಹೆಸರಿಗಾಗಿ ಆಲಯವನ್ನು ಕಟ್ಟಬಾರದು ಎಂದು ಹೇಳಿದನು. ಸಮಾಧಾನ ಪ್ರಿಯನಾದ ಸೊಲೊಮೋನನನ್ನು ಆರಿಸಿಕೊಂಡನು. ಅವನು ಕರ್ತನಿಗಾಗಿ ಆಲಯವನ್ನು ಕಟ್ಟಿದನು. ನರಹತ್ಯ ಮಾಡುವವರಿಗೆ ಯಾವ ಆಶೀರ್ವಾದವೂ ಸಿಕ್ಕುವದಿಲ್ಲ. ಕೊಲೆಪಾತಕರೂ, ವಂಚಕರೂ, ನರಾಯುಷ್ಯದ ಅರ್ಧಾಂಶವಾದರೂ ಬದುಕರು (ಕೀರ್ತ.55:23).

ದೇವಮಕ್ಕಳೇ, ಹಣದಾಶೆಯುಳ್ಳವರಾಗಿ, ಲೋಕಭೋಗಗಳಿಗೆ ದಾಸರಾಗಿ, ಅಧಿಕಾರ ದಾಹವುಳ್ಳವರಾಗಿ ಜೀವಿಸುವದು ಬೇಡ. ಅವು ನಿಮ್ಮನ್ನು ಕರ್ತನಿಂದ ದೂರ ಮಾಡುತ್ತದೆ. ನಿಮಗಾಗಿ ರಕ್ತ ಚೆಲ್ಲಿದ ಯೇಸುಕ್ರಿಸ್ತನನ್ನೇ ದೃಷ್ಟಿಸುವವರಾಗಿರ್ರಿ. ಆತನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ಆತನಿಗೆ ಮೆಚ್ಚಿಗೆಯಾದದ್ದನ್ನು ಮಾಡಿರಿ.

*ನೆನಪಿಗೆ : ಕೊಲೆಪಾತಕರು ನಿರ್ದೋಷಿಯನ್ನು ದ್ವೇಷಿಸುವರು; ಯಥಾರ್ಥವಂತನ ಪ್ರಾಣಕ್ಕೂ ಹೊಂಚು ಹಾಕುವರು (ಜ್ಞಾನೋ. 29:10).*

ಸೆಪ್ಟೆಂಬರ್
೮

# ಮಧುಪಾನಪ್ರಿಯರು!

ಬೆಳಿಗ್ಗೆ : ಜ್ಞಾನೋ. 3,4,5
ಸಂಜೆ : 2 ಕೊರಿಂ. 1

ಅವನು ಕುಡಿದು ಜಗಳವಾಡದವನೂ, ಹೊಡೆದಾಡದವನೂ, ಸಾತ್ವಿಕನೂ, ಕುತರ್ಕ ಮಾಡದವನು, ದ್ರವ್ಯಾಶೆ ಇಲ್ಲದವನೂ ಆಗಿರಬೇಕು (1 ತಿಮೊ. 3:3).

ದೇವಸೇವೆಗೆ ನಿಯಮಿಸಲ್ಪಟ್ಟವನ ಸ್ವಭಾವ, ಗುಣ, ಹೇಗಿರಬೇಕು? ಅಪೊ. ಪೌಲನು ಬರೆಯುತ್ತಾನೆ, ಅವನು ಮಧುಪಾನ ಪ್ರಿಯನಾಗಿರಬಾರದು. ಇಂದು ಅನೇಕರು ಚಿಕ್ಕ ಪ್ರಾಯದಿಂದಲೇ ಕುಡಿತಕ್ಕೆ ದಾಸರಾಗಿರುತ್ತಾರೆ. ಮಧುಪಾನ ಪ್ರಿಯರು ದುಡಿದು ಸಂಪಾದಿಸುವದನ್ನು ಬಯಸುವದಿಲ್ಲ, ಕುಟುಂಬವನ್ನು ಗಮನಿಸುವದಿಲ್ಲ. ದ್ರಾಕ್ಷಾರಸವು ಪರಿಹಾಸ್ಯ, ಮದ್ಯವು ಕೂಗಾಟ, ಇವುಗಳಿಂದ ಓಲಾಡುವವನು ಜ್ಞಾನಿಯಲ್ಲ (ಜ್ಞಾನೋ. 20:1) ಎಂದು ಸತ್ಯವೇದ ಹೇಳುತ್ತದೆ.

ಒಮ್ಮೆ ನಾನು ಕೆನಡಾ ದೇಶಕ್ಕೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾಗ, ಒಬ್ಬ ಬಿಷಪ್ ನನ್ನೊಂದಿಗೆ ಪ್ರಯಾಣ ಮಾಡಿದರು. ಅವರ ಕೈಯಲ್ಲಿ ಆತ್ಮೀಕ ಪುಸ್ತಕ ಇತ್ತು. ನನಗೂ ಅವರೊಂದಿಗೆ ಪ್ರಯಾಣ ಮಾಡುವದು ಬಹಳ ಸಂತೋಷವೆನಿಸಿತು. ಆದರೆ ಸ್ವಲ್ಪ ಸಮಯದಲ್ಲಿ ಗಗನಸಖಿ ಅಲ್ಲಿಗೆ ಬಂದಾಗ, ಮಧುಪಾನವನ್ನು ತರಿಸಿಕೊಂಡು ಕುಡಿಯಲಾರಂಭಿಸಿದರು. ಅವರು ನನ್ನ ಬಳಿ "ಇದು ದೇಹಕ್ಕೆ ಒಳ್ಳೆಯದು, ರಕ್ತವನ್ನು ಶುದ್ಧಿಮಾಡುವದು" ಎಂದೆಲ್ಲಾ ಹೇಳಿದರು. ಆದರೆ, ನನ್ನ ಶರೀರವು ದೇವರ ಆಲಯ ಎಂಬುದನ್ನು ನಾನು ತಿಳಿದಿದ್ದೆನು. ನನ್ನೊಳಗೆ ಸದಾ ವಾಸಿಸುವ ಪವಿತ್ರಾತ್ಮನನ್ನು ಯಾವ ರೀತಿಯಲ್ಲೂ ನಾನು ದುಃಖಪಡಿಸಬಾರದೆಂಬುದನ್ನು ನಾನು ಅರಿತಿದ್ದೆನು. ಆ ಬಿಷಪ್ ಕುಡಿದು ಮತ್ತರಾಗಿ ಸ್ವಲ್ಪ ಸಮಯದಲ್ಲೇ ನಿದ್ರೆಗೆ ಜಾರಿಹೋದರು. ಇಳಿಯುವ ಸಮಯ ಬಂದಿತು. ಆದರೆ ಅವರಿಗಾದರೋ ಸಾಧ್ಯವಾಗುತ್ತಿಲ್ಲ. ಅವರ ಸ್ಥಿತಿ ನೋಡಿ ಬಹಳ ವೇದನೆಯಾಯಿತು. ಅಂಥವರು ಸಾಯುವಾಗ ಸೈತಾನನು ಬಂದು ನಿಂತು ಆ ಶರೀರದ ಮೇಲಿನ ಹಕ್ಕನ್ನು ಚಲಾಯಿಸುವನು. ಕೊನೆಯಲ್ಲಿ ಪಾತಾಳಕ್ಕೆ ಎಳೆದುಕೊಂಡುಹೋಗುವನು. ದಾನಿಯೇಲನೂ, ಅವನ ಸ್ನೇಹಿತರೂ ಬ್ಯಾಬಿಲೋನ್ ದೇಶಕ್ಕೆ ಸೆರೆಒಯ್ಯಲ್ಪಟ್ಟಾಗ ಕರ್ತನು ಉಪಯೋಗಿಸಲ್ಪಡುವ ಪಾತ್ರೆಗಳನ್ನಾಗಿ ತಮ್ಮನ್ನು ಕಾಯ್ದುಕೊಳ್ಳಬೇಕೆಂದು ವೈರಾಗ್ಯದಿಂದ ಇದ್ದರು.

ದೇವಮಕ್ಕಳೆ, "ದ್ರಾಕ್ಷಾರಸವನ್ನು ಕುಡಿಯುವದು ರಾಜರಿಗೆ ಯೋಗ್ಯವಲ್ಲ. ಮದ್ಯವೆಲ್ಲಿ ಎನ್ನುವದು ಪ್ರಭುಗಳಿಗೆ ವಿಹಿತವಲ್ಲ" (ಜ್ಞಾನೋ. 31:4). ಕರ್ತನು ನಿಮ್ಮನ್ನು ಅರಸರನ್ನಾಗಿಯೂ, ಯಾಜಕರನ್ನಾಗಿಯೂ ಅಭಿಷೇಕಿಸಿರುವನು (ಪ್ರಕ. 1:6). ಆ ಅಭಿಷೇಕವನ್ನು ನೀವು ಅಸಡ್ಡೆ ಮಾಡಬಾರದು. ಎಚ್ಚರದಿಂದಿದ್ದು ನಿಮ್ಮ ಪವಿತ್ರತೆಯನ್ನು ಕಾಪಾಡಿಕೊಳ್ಳಿರಿ.

*ನೆನಪಿಗೆ : ಕುಡಿದರೆ ಅವರು ಧರ್ಮನಿಯಮಗಳನ್ನು ಮರೆತುಬಿಟ್ಟು ಬಾಧೆಪಡುವವರೆಲ್ಲರ ನ್ಯಾಯವನ್ನು ವ್ಯತ್ಯಾಸಮಾಡುವರು (ಜ್ಞಾನೋ. 31:5).*



ಸೆಪ್ಟೆಂಬರ್
೯

# ವಾಗ್ವಾದ ಪ್ರಿಯರು!

ಬೆಳಿಗ್ಗೆ : ಜ್ಞಾನೋ. 6,7
ಸಂಜೆ : 2 ಕೊರಿಂ. 2

"ಕೆಂಡಕ್ಕೆ ಇದ್ದಿಲು, ಉರಿಗೆ ಕಟ್ಟಿಗೆ, ವ್ಯಾಜ್ಯದ ಕಿಚ್ಚನ್ನೆಬ್ಬಿಸುವದಕ್ಕೆ ಜಗಳಗಂಟಿಗ" (ಜ್ಞಾನೋ.26:21).

ಹಲವು ರೀತಿಯ ಪ್ರಿಯರನ್ನು ಕುರಿತು ಧ್ಯಾನಿಸುತ್ತಾ ಬಂದಿರುವೆವು. ಕರ್ತನ ಬರುವಿಕೆಗೆ ಸಿದ್ಧಪಡಿಸಿಕೊಳ್ಳುವಂತೆ, ಇಂಥಹ ಬೇಡದ ಸ್ವಭಾವಗಳನ್ನು ಹೊಂದಿದವರಿಂದ ಅಗಲಿ ಕರ್ತನನ್ನೇ ಮೆಚ್ಚಿಸುವಂತೆ ತೀರ್ಮಾನ ತೆಗೆದುಕೊಳ್ಳುವದು ಬಹಳ ಅಗತ್ಯ. ಕೆಲವರಿಗೆ ವಾಗ್ವಾದ ಮಾಡುವದೆಂದರೆ ಬಹಳ ಇಷ್ಟ. ಇಂಥವರು ಜಗಳಗಳನ್ನು ಎಬ್ಬಿಸುವರು. "ಹೆಮ್ಮೆಯ ಫಲವು ಕಲಹವೇ, ಬುದ್ಧಿವಾದಕ್ಕೆ ಕಿವಿಗೊಡುವವರಲ್ಲಿ ಜ್ಞಾನ" (ಜ್ಞಾನೋ. 13:10). ವ್ಯಾಜ್ಯದ ಆರಂಭವು ಏರಿಗೆ ಬಿಲಬಿದ್ದಂತೆ; ಸಿಟ್ಟೇರುವದಕ್ಕೆ ಮುಂಚೆ ಜಗಳವನ್ನು ಬಿಟ್ಟುಬಿಡು" (ಜ್ಞಾನೋ. 17:14) ಎಂದು ಸತ್ಯವೇದ ಹೇಳುತ್ತದೆ.

ಒಂದು ಪರಲೋಕದ ದರ್ಶನದೊಂದಿಗೆ, ಅಬ್ರಹಾಮನು ಕಾನಾನನ್ನು ದೃಷ್ಟಿಸುತ್ತಾ ಹೊರಟಾಗ, ಲೋಟನೂ ಸಹ ಜೊತೆಯಲ್ಲಿ ಸೇರಿಕೊಂಡನು. ಅಬ್ರಹಾಮನ ನಿಮಿತ್ತ, ಕರ್ತನು ಲೋಟನನ್ನು ಆಶೀರ್ವದಿಸಿದನು. ಹೇರಳವಾದ ಸಂಪತ್ತು, ಐಶ್ವರ್ಯ ದನಕುರಿಗಳಿದ್ದದರಿಂದ ಅವರು ಒಂದು ಕಡೆ ವಾಸಿಸಲು ಸ್ಥಳಾವಕಾಶ ಇಲ್ಲದೆ ಹೋಯಿತು. ಅಬ್ರಹಾಮನ ಹಾಗೂ ಲೋಟನ ಕೆಲಸದವರಿಗೆ ಆಗಾಗ್ಗೆ ಜಗಳಗಳೂ, ವಾಗ್ವಾದಗಳೂ ಪ್ರಾರಂಭವಾದವು. ಇದರಿಂದ ಅಬ್ರಹಾಮನು ಲೋಟನಿಗೆ "ನಾವಿಬ್ಬರೂ ಸಹೋದರರು ನಮ್ಮ ನಡುವೆ ವಾಗ್ವಾದ ಬೇಡ, ನೀನು ಬಲಕ್ಕೆ ಹೋದರೆ ನಾನು ಎಡಕ್ಕೆ ಹೋಗುವೆನು" ಎಂದು ಹೇಳಿ ಇಬ್ಬರೂ ಬೇರ್ಪಟ್ಟರು. ಬೇರೆಯಾದ ನಂತರ ಸೊದೋಮ್ ಗೊಮೋರ್ ಪಟ್ಟಣವು ಬೆಂಕಿಗೆ ಆಹುತಿಯಾಗಿ ಲೋಟನು ತನ್ನ ಎಲ್ಲಾ ಆಸ್ತಿಯನ್ನು ಕಳೆದುಕೊಂಡನು. ನಿಮ್ಮ ಜೀವಿತದಲ್ಲಿ ಜಗಳ, ವಾಗ್ವಾದಗಳಿಗೆ ಅವಕಾಶ ಕೊಡದಿರಿ. ಅನ್ಯೋನ್ಯತೆ ಒಗ್ಗಟ್ಟನ್ನು ಕಳೆದುಕೊಂಡವರು ಆಶೀರ್ವಾದವನ್ನು ಕಳೆದುಕೊಳ್ಳುವರು. ಇಸಾಕನನ್ನು ಕರ್ತನು ಬಹಳವಾಗಿ ಆಶೀರ್ವದಿಸಿದನು. ಇಸಾಕನು ಅನ್ಯ ದೇಶದಲ್ಲಿ ಬೀಜವನ್ನು ಬಿತ್ತಿದಾಗ, ನೂರರಷ್ಟು ಫಲ ಹೊಂದಿದನು. ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದಿದನು. ಆದರೆ ಅಲ್ಲಿದ್ದ ಫಿಲಿಷ್ಟಿಯರು ಇಸಾಕನು ತೋಡಿದ ಬಾವಿಗಳ ನಿಮಿತ್ತ ಜಗಳ ಮಾಡಿದರು. ಇಸಾಕನು ಆ ಬಾವಿಗಳನ್ನು ಬಿಟ್ಟು ಬೇರೆ ಕಡೆ ಹೊರಟುಹೋದನು. ಅಲ್ಲಿ ಬೇರೆ ಬಾವಿಗಳನ್ನು ತೋಡಿ ಅಲ್ಲಿ ಸಮಾಧಾನದಿಂದ ಇದ್ದನು. ದೇವರಿಗೆ ಸ್ತೋತ್ರ ಸಲ್ಲಿಸಿದನು.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ಜಗಳ, ವಾಗ್ವಾದಗಳಿಗೆ ಸ್ಥಳಕೊಡದಿರಿ. ಒಂದು ಚಿಕ್ಕ ಕಿಡಿ, ಹುಲ್ಲಿನ ಮದೆಯನ್ನೇ ಸುಡುವಂತೆ ಒಂದು ಚಿಕ್ಕ ವಾಗ್ವಾದ, ಇಡೀ ಕುಟುಂಬದ ನೆಮ್ಮದಿಯ ಅಸ್ತಿತ್ವವನ್ನೇ ಬಲಿ ತೆಗೆದುಕೊಂಡುಬಿಡುತ್ತದೆ.

*ನೆನಪಿಗೆ : ಜಗಳ ಹೊಟ್ಟೆಕಿಚ್ಚುಗಳಲ್ಲಿ ಕಾಲಕಳೆಯದೆ ಹಗಲುಹೊತ್ತಿಗೆ ತಕ್ಕ ಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ (ರೋಮಾ. 13:13).*

ಸೆಪ್ಟೆಂಬರ್ 10

# ಪಾಪಪ್ರಿಯರು!

ಬೆಳಿಗ್ಗೆ : ಜ್ಞಾನೋ. 8,9
ಸಂಜೆ : 2 ಕೊರಿಂ. 3

"ಪಾಪಪ್ರಿಯನು ಕಲಹಪ್ರಿಯ, ತನ್ನ ಬಾಗಿಲನ್ನು ಎತ್ತರಿಸುವವನು ಹಾಳಾಗುವನು" (ಜ್ಞಾನೋಕ್ತಿ 17:19).

ಇಲ್ಲಿ ಪಾಪಪ್ರಿಯರನ್ನು ಕುರಿತು ಓದುತ್ತೇವೆ. ವ್ಯಭಿಚಾರ, ಮೋಸ, ಕೊಲೆ, ಮೊದಲಾದ ಪಾಪಕೃತ್ಯಗಳಲ್ಲಿ ಒಬ್ಬನು ನಡೆಯುವಾಗ, ಅವನನ್ನು ಪ್ರಪಂಚ 'ಪಾಪಿಷ್ಟ'ನೆಂದು ಕರೆಯುತ್ತದೆ. ವ್ಯಭಿಚಾರಿಯಾದ ಒಬ್ಬ ಸ್ತ್ರೀ "ಕಳ್ಳನಂತೆ ಹೊಂಚುಹಾಕುತ್ತಾಳೆ. ಜನರಲ್ಲಿ ದ್ರೋಹಿಗಳನ್ನು ಹೆಚ್ಚಿಸುತ್ತಾಳೆ" (ಜ್ಞಾನೋ. 23:28). ಇಂತಹ ಪಾಪಪ್ರಿಯರು ಸೈತಾನನ ದಾಸರಾಗಿರುತ್ತಾರೆ. ಇಂಥವರಿಗೆ ದಯೆ ಕನಿಕರ ಎಂಬುದೇ ಇರುವದಿಲ್ಲ.

ಒಬ್ಬ ಬ್ರಾಹ್ಮಣ ಕುಲದ ಹುಡುಗಿ ಭಾನುವಾರ ಶಾಲೆಗೆ ಬಂದಳು, ಪ್ರೀತಿ ಕನಿಕರ ತುಂಬಿದ ಯೇಸುಕ್ರಿಸ್ತನನ್ನು ಪಾಪಿಗಳು, ಶಿಲುಬೆಯಲ್ಲಿ ಕಠೋರವಾಗಿ ಜಡಿದುಕೊಂದ ಸಂಭವವನ್ನು ಕೇಳಿ ಬಹಳವಾಗಿ ನೊಂದುಕೊಂಡಳು. ಮನೆಗೆ ಬಂದು ತನ್ನ ಅಜ್ಜಿಯ ಬಳಿ "ಅಜ್ಜಿ, ಪ್ರೀತಿ ದಾಯಕನಾದ ಯೇಸುವಿಗೆ ಯಾಕೆ ಈ ಕಷ್ಟ. ಇಂತಹ ವೇದನೆ? ಮುಳ್ಳಿನ ಕಿರೀಟವನ್ನಿಟ್ಟು, ಚಾಟಿಗಳಿಂದ ಥಳಿಸಿ, ಶಿಲುಬೆಯಲ್ಲಿ ಮೊಳೆಗಳಿಂದ ಜಡಿದು ಯಾಕೆ ಕೊಂದರು? ಎಂದು ಕೇಳಿದಳು. ಅಜ್ಜಿ ಯೋಚಿಸಿ ನೋಡಿದಳು. ಏನು ಹೇಳಬೇಕೆಂದು ಆಕೆಗೆ ಗೊತ್ತಾಗಲಿಲ್ಲ. ಕೊನೆಯಲ್ಲಿ ಹೀಗೆ ಹೇಳಿದಳು. "ಏನು ಮಾಡುವದು? ಯೇಸುವಿನ ಜಾತಕ ಹಾಗೆ ಆತನ ಹಣೆ ಬರಹ" ಎಂದು, ಮೊಮ್ಮಗಳು ಅದನ್ನು ಒಪ್ಪಿಕೊಳ್ಳಲಿಲ್ಲ. "ಜಾತಕ ಅಲ್ಲ ಅಜ್ಜಿ, ಮನುಷ್ಯನ ಪಾಪ" ಎಂದು ಉತ್ತರಿಸಿದಳು. ಎಲ್ಲಾ ತಪ್ಪನ್ನು ಜಾತಕದ ಮೇಲೂ, ಹಣೆಬರಹದ ಮೇಲೂ ಹಾಕಲಾಗದು. ಪಾಪಗಳನ್ನು ಬಿಟ್ಟು ಮನುಷ್ಯನು ಮಾರ್ಪಡಬೇಕು, ಯೇಸುಕ್ರಿಸ್ತನು ಮನುಷ್ಯರ ಪಾಪಗಳನ್ನು ಸಹನೆಯಿಂದ ತನ್ನ ಮೇಲೆ ಹೊತ್ತುಕೊಂಡು "ತಂದೆಯೇ ಅವರನ್ನು ಕ್ಷಮಿಸು" ಎಂದು ಪ್ರಾರ್ಥಿಸಿದನು. ಎಲ್ಲಾ ಪಾಪಗಳಲ್ಲೂ ದೊಡ್ಡದು ಕೊಲೆಯ ಅಪರಾಧ. ಯೇಸು ಕ್ರಿಸ್ತನನ್ನು ದಯೆ ದಾಕ್ಷಿಣ್ಯವಿಲ್ಲದೆ ಶಿಲುಬೆಯಲ್ಲಿ ಜಡಿದುಕೊಂದರು.

ದೇವಮಕ್ಕಳೇ, ಇಂದಿಗೂ ನಿಮಗೆ ವಿರೋಧವಾಗಿ ಪಾಪ ಕೃತ್ಯಗಳನ್ನು ಎಸಗಲು ಯಾರಾದರೂ ಚಿಂತಿಸುತ್ತಿರಬಹುದು. ಭಯಪಡಬೇಡಿರಿ. ನೀವು ನಡೆದುಹೋಗುವ ಮಾರ್ಗದಲ್ಲಿ ಕ್ರಿಸ್ತನಿರುವನು. ಆತನೇ ನಿಮ್ಮನ್ನು ಕಾಯ್ದು ರಕ್ಷಿಸುವನು.

*ನೆನಪಿಗೆ : (ಸುವಾರ್ತೆಯ ನಿಮಿತ್ತ) ದುಷ್ಕರ್ಮಿಯಂತೆ ಸಂಕೋಲೆಯಿಂದ ಕಟ್ಟಲ್ಪಟ್ಟವನಾಗಿದ್ದೇನೆ. ಆದರೆ ದೇವರ ವಾಕ್ಯಕ್ಕೆ ಬಂಧನವಿಲ್ಲ" (2 ತಿಮೊ. 2:9).*



ಸೆಪ್ಟೆಂಬರ್ 11

# ಭೋಜನ ಪ್ರಿಯರು!

ಬೆಳಿಗ್ಗೆ : ಜ್ಞಾನೋ. 10,11,12
ಸಂಜೆ : 2 ಕೊರಿಂ. 4

ನೀನು ಹೊಟ್ಟೆಬಾಕನಾಗಿದ್ದರೆ ಕಂಠಕ್ಕೆ ಕತ್ತಿಹಾಕಿಕೋ (ಜ್ಞಾನೋ. 23:2).

ನೀನು ಒಬ್ಬ ಅಧಿಪತಿಯ ಸಂಗಡ ಊಟಕ್ಕೆ ಕೂರುವಾಗ, ಯಾರ ಸನ್ನಿಧಾನದಲ್ಲಿದ್ದೀಯ ಎಂಬುದನ್ನು ಮರೆಯದಿರು. ಅವನ ರುಚಿ ಪದಾರ್ಥಗಳನ್ನು ಬಯಸದಿರು. ಅದು ಮೋಸದ ಆಹಾರವೇ ಸರಿ (ಜ್ಞಾನೋ. 23:1,3) ಎಂದು ಸತ್ಯವೇದ ಹೇಳುತ್ತದೆ. ನೀವು ಊಟ ಮಾಡಲು ಬದುಕಬಾರದು. ಬದುಕುವದಕ್ಕಾಗಿ ಊಟ ಮಾಡಬೇಕು.

ಕೆಲವರು ಊಟ ಮಾಡಲೆಂದೇ ಜೀವಿಸಿರುತ್ತಾರೆ. ಕೆಲವರ ಮನೆಯಲ್ಲಿ ಅತ್ತೆ ಮಾವಂದಿರಿಗೆ ಒಂದು ಅಡಿಗೆ ಗಂಡನಿಗೊಂದು ಅಡಿಗೆ, ಮಕ್ಕಳಿಗೊಂದು ಅಡಿಗೆ ಎಂದು ವಿಧವಿಧವಾದ ಅಡಿಗೆಗಳನ್ನು ಮಾಡುವದರಲ್ಲೇ ತಮ್ಮ ಸಮಯವನ್ನು ಕಳೆದುಬಿಡುತ್ತಾರೆ. ಪ್ರಾರ್ಥಿಸಲು ಸಮಯವಿಲ್ಲ. ಕುಟುಂಬದ ಅನ್ಯೋನ್ಯತೆಗೆ ಸಮಯವಿಲ್ಲ. ಇಂಥವರನ್ನು ನೋಡಿ ಕರ್ತನು "ಮಾರ್ಥಳೇ, ಮಾರ್ಥಳೇ, ನೀನು ಅನೇಕ ಕಾರ್ಯಗಳನ್ನು ಕುರಿತು ಚಿಂತಿಸುತ್ತೀ. ಬೇಕಾದದ್ದು ಒಂದೇ" ಎಂದು. ಆ ಒಂದು ಏನು? ಕರ್ತನ ಪಾದದಲ್ಲಿ ಕುಳಿತು ಆತನ ವಾಕ್ಯಗಳನ್ನು ಕೇಳುವದು. ಆತನನ್ನು ಮೆಚ್ಚಿಸುವದೇ ಆಗಿದೆ. ದೇವ ಸೇವಕರಾದ ಬಿಲ್ಲಿಗ್ರಹಾಂರವರು ಕೊಲ್ಲುವ ಏಳು ಭಯಂಕರ ಪಾಪಗಳು ಎಂಬ ಪುಸ್ತಕವನ್ನು ಬರೆದಿರುವರು. ಅವುಗಳಲ್ಲಿ ಹೊಟ್ಟೆಬಾಕತನ ಒಂದು. ಹೊಟ್ಟೆ ಬಾಕತನಕ್ಕೆ ದಾಸರಾದವರು ತಮ್ಮ ಹಲ್ಲುಗಳಿಂದ ತಮ್ಮ ಸಮಾಧಿಯನ್ನು ತಾವೇ ತೋಡಿಕೊಳ್ಳುವರು. ಇಂದು ಅನೇಕ ಯೌವನಸ್ಥ ಮಕ್ಕಳು ಈ ಪಾಪಕ್ಕೆ ಒಳಗಾಗುತ್ತಿರುವರು. ಈ ಆಧುನಿಕ ಯುಗದಲ್ಲಿ ತಂದೆ ತಾಯಿಗಳಿಬ್ಬರೂ ತಮ್ಮ ಸಂಪಾದನೆಯ ಕಡೆಗೇ ಅಧಿಕ ಸಮಯವನ್ನು ವ್ಯಯಿಸುವದರಿಂದ ಮಕ್ಕಳ ಕಡೆಗೆ ಹೆಚ್ಚು ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಮಕ್ಕಳೊಂದಿಗಿನ ತಮ್ಮ ಅನ್ಯೋನ್ಯತೆಯ ಕೊರತೆಯನ್ನು ನೀಗಲು ಮಕ್ಕಳು ಬೇಡಿದ್ದನ್ನೆಲ್ಲಾ ಲಂಚದ ರೂಪದಲ್ಲಿ ಕೊಡುವರು. ಮಕ್ಕಳಿಗೆ ಅಗತ್ಯವಾದದ್ದಕ್ಕಿಂತ ಹೆಚ್ಚಾಗಿ ಹಣಕೊಟ್ಟು ಅವರನ್ನು ಸಮಾಧಾನ ಪಡಿಸುವರು. ಹೀಗೆ ತಂದೆತಾಯಿಯರ ಪ್ರೀತಿಯಿಂದ ವಂಚಿಸಲ್ಪಟ್ಟ ಮಕ್ಕಳು ಕಣ್ಣಿಗೆ ಕಂಡದ್ದನ್ನು ತಿಂದು, ಕುಡಿದು, ವಯಸ್ಸಿಗೆ ಮೀರಿದ ಅಭ್ಯಾಸಗಳನ್ನು ಚಿಕ್ಕಂದಿನಿಂದಲೇ ಬೆಳೆಸಿಕೊಂಡು ಮುಂದಕ್ಕೆ ತಮಗೂ ಉಪಯೋಗವಿಲ್ಲದ ಕುಟುಂಬಕ್ಕೂ ಉಪಯೋಗವಿಲ್ಲದ, ದೇಶಕ್ಕೂ ಉಪಯೋಗವಿಲ್ಲದ ಪ್ರಜೆಗಳಾಗಿಬಿಡುವರು.

ದೇವಮಕ್ಕಳೇ, "ಕುಡುಕನೂ, ಹೊಟ್ಟೆಬಾಕನೂ, ದುರ್ಗತಿಗೆ ಬರುವನು" (ಜ್ಞಾನೋ.23:21) ಎಂದು ಸತ್ಯವೇದ ಹೇಳುತ್ತದೆ. ಜೀವಿಸಲು ಆಹಾರ ಬೇಕು ನಿಜ. ಆದರೆ ಅದೇ ಜೀವಿತವಲ್ಲ. ಹಿತವಾದ ಮಿತವಾದ ಅಹಾರ ಶರೀರಕ್ಕೂ ಒಳ್ಳೆಯದು, ಆತ್ಮವನ್ನೂ ಚೈತನ್ಯಗೊಳಿಸಿ ಕರ್ತನ ಅನ್ಯೋನ್ಯತೆಯನ್ನು ಹೆಚ್ಚಿಸುವದು.

*ನೆನಪಿಗೆ : ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ (ರೋಮಾ. 14:17).*

ಸೆಪ್ಟೆಂಬರ್ 12

# ಐಶ್ವರ್ಯಪ್ರಿಯರು!

ಬೆಳಿಗ್ಗೆ : ಜ್ಞಾನೋ. 13,14,15
ಸಂಜೆ : 2 ಕೊರಿಂ. 5

ಬೆಳ್ಳಿಯನ್ನು ಆಶಿಸುವವನಿಗೆ ಎಷ್ಟು ಬೆಳ್ಳಿಯಿಂದಲೂ ತೃಪ್ತಿಯಾಗದು, ಸಮೃದ್ಧಿಯನ್ನು ಬಯಸುತ್ತಲೇ ಇರುವವನಿಗೆ ಆದಾಯವೆಷ್ಟಾದರೂ ಸಾಲದು (ಪ್ರಸಂಗಿ. 5:10).

ಇಂದು ನಮ್ಮ ದೇಶದಲ್ಲಿ ಹಬ್ಬುತ್ತಿರುವ ಅಂಟು ಜಾಡ್ಯವೆಂದರೆ, ಹಣದಾಶೆ, ಸಂಪತ್ತಿನ ಆಶೆ. ಹೇಗಾದರೂ ಹಣ ಆಸ್ತಿ ಸಂಪಾದಿಸಬೇಕು. ಇಂದಿನ ಪ್ರಪಂಚದಲ್ಲಿ ತಮಗೆ ತಮ್ಮ ಮಕ್ಕಳಿಗೆ ಮಾತ್ರವಲ್ಲ ಸಂತತಿ ಸಂತತಿಯಾಗಿ ಅನುಭವಿಸುವಷ್ಟು ಸಂಪಾದನೆ ಮಾಡಬೇಕು ಎಂಬ ಈ ದುರಾಸೆಯಿಂದಾಗಿ ಮನುಷ್ಯನಲ್ಲಿ ಮಾನವ ಪ್ರವೃತ್ತಿ ಹೋಗಿ, ರಾಕ್ಷಸ ಪ್ರವೃತ್ತಿ ಬೆಳೆಯುತ್ತಿದೆ.

ಕೆಲವು ವರ್ಷಗಳ ಹಿಂದೆ, ಅಮೆರಿಕಾ ದೇಶದಲ್ಲಿ ಅನೇಕರು ಚಿನ್ನದ ಗಣಿಗಳನ್ನೂ, ವಜ್ರದ ಗಣಿಗಳನ್ನೂ ಹುಡುಕಿ ಅಲೆದರು. ಒಬ್ಬನು ತನ್ನಲ್ಲಿದ್ದ ಚಿಕ್ಕ ತೋಟವನ್ನು ಮಾರಿ ವಜ್ರದ ಬೇಟೆಗೆ ಹೊರಟನು. ಕಾಡುಮೇಡುಗಳನ್ನೆಲ್ಲಾ ಸುತ್ತಿದನು. ಯಾವದೇ ಪ್ರಯೋಜನವಾಗದೆ, ಹುಚ್ಚುಹಿಡಿದು ಸತ್ತನು. ಆದರೆ, ಅವನ ಭೂಮಿಯನ್ನೂ, ತೋಟವನ್ನೂ ಖರೀದಿಸಿದವನೋ, ಒಬ್ಬ ಭಕ್ತಿಯುಳ್ಳ ದೇವಪ್ರಿಯನು. ಆ ಭೂಮಿಯಲ್ಲಿ ವಜ್ರದ ಗಣಿ ಇರುವದನ್ನು ಕಂಡುಹಿಡಿದನು. ದುರ್ಮಾರ್ಗಿಯ ಆಸ್ತಿಯನ್ನು ಕರ್ತನು ನೀತಿವಂತರಿಗಾಗಿ ಇಟ್ಟಿರುವನು. “ಇಂಥವನು ಐಶ್ವರ್ಯವಂತನಾಗುವದಿಲ್ಲ; ಅವನ ಆಸ್ತಿಯು ನಿಲ್ಲುವದಿಲ್ಲ” (ಯೋಬ. 15:29). ದುಷ್ಟರ ಮಹಾ ಸಮೃದ್ಧಿಗಿಂತಲೂ ನೀತಿವಂತನ ಬಡತನವೇ ಲೇಸು” (ಕೀರ್ತ. 37:16). ಸಂಪತ್ತು ಎಂದರೇನು? ದಾವೀದನು ಕರ್ತನ ವಾಕ್ಯಗಳನ್ನೇ ತನ್ನ ಸಂಪತ್ತು, ಐಶ್ವರ್ಯವೆಂದು ತಿಳಿದನು. ಸತ್ಯವೇದವು ಬಂಗಾರಕ್ಕಿಂತ ಅಪರಂಜಿಗಿಂತ ಹೆಚ್ಚಾಗಿ ಬಯಸುವಂಥದು. ಬೆಲೆಯುಳ್ಳದ್ದು. ಯೇಸುಕ್ರಿಸ್ತನೇ ನಮ್ಮ ಸಂಪತ್ತಾಗಿರುವನು. ಅಂದು ಶಿಷ್ಯರ ಬಳಿ ಹಣವಾಗಲಿ, ಐಶ್ವರ್ಯವಾಗಲಿ ಇರಲಿಲ್ಲ. ಆದರೂ ಕರ್ತನ ಮಹಿಮೆ ಅವರೊಂದಿಗಿತ್ತು. ಆತ್ಮನ ವರಗಳಿದ್ದವು. ಅಪೊ. ಪೇತ್ರನಿಂದ ಚಿಲ್ಲರೆ ಕಾಸು ಸಿಗಬಾರದಾ ಎಂದು ಹುಟ್ಟು ಕುಂಟನು ನಿರೀಕ್ಷಿಸಿದನು. ಪೇತ್ರನು ಅವನನ್ನು ನೋಡಿ ಬೆಳ್ಳಿಯಾಗಲಿ, ಬಂಗಾರವಾಗಲಿ ನನ್ನಲ್ಲಿಲ್ಲ. ನನ್ನಲ್ಲಿರುವದನ್ನು ನಿನಗೆ ಕೊಡುತ್ತೇನೆ ಎಂದು ಹೇಳಿ ಅವನ ಕೈ ಹಿಡಿದು ಎಬ್ಬಿಸಿ ಯೇಸುವಿನ ನಾಮದಲ್ಲಿ ಎದ್ದು ನಡೆ ಎನ್ನಲು ಅವನು ಎದ್ದು ನಡೆದನು.

ದೇವಮಕ್ಕಳೇ, ನಶಿಸಿಹೋಗುವ ಈ ಲೋಕದ ಐಶ್ವರ್ಯಕ್ಕಾಗಿ ತವಕ ಪಡದಿರಿ. ಯೇಸುವಿನ ನಾಮದಲ್ಲಿರುವ ಮಹಿಮೆ ಅದಕ್ಕಿಂತಲೂ ದೊಡ್ಡದು. ಆತನ ಕೃಪೆಯು ಎಲ್ಲಕ್ಕಿಂತಲೂ ದೊಡ್ಡದು.

*ನೆನಪಿಗೆ : ಜನರು ನಿಮ್ಮನ್ನು ನಮ್ಮದೇವರ ಸೇವಕರೆಂದು ಕರೆಯುವರು. ಜನಾಂಗಗಳ ಆಸ್ತಿಯನ್ನನುಭವಿಸಿರಿ. ಅವುಗಳ ವೈಭವವನ್ನು ಪಡೆದು ಹೊಗಳಿಕೊಳ್ಳುವಿರಿ (ಯೆಶಾ. 61:6).*



ಸೆಪ್ಟೆಂಬರ್ 13

# ದೇವಪ್ರಿಯರು!

ಬೆಳಿಗ್ಗೆ : ಜ್ಞಾನೋ. 16,17,18
ಸಂಜೆ : 2 ಕೊರಿಂ. 6

ಕರ್ತನಿಗೆ ಮೆಚ್ಚಿಕೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳಿದುಕೊಳ್ಳಿರಿ (ಎಫೆ. 5:10).

ಈ ಅಂತ್ಯಕಾಲದಲ್ಲಿ ಹೆಚ್ಚಿನ ಜನರು ಸ್ವಾರ್ಥಚಿಂತಕರಾಗಿಯೂ, ಹಣದಾಸೆ ಉಳ್ಳವರಾಗಿಯೂ, ಪ್ರಾಪಂಚಿಕ ಕಾರ್ಯಗಳನ್ನೇ ಬಯಸುವವರಾಗಿಯೂ ಇರುವರು. ಅದೇ ವೇಳೆಯಲ್ಲಿ ಕರ್ತನನ್ನು ಪ್ರೀತಿಸುವವರೂ, ಆತನ ಪ್ರೀತಿಗಾಗಿ ತಮ್ಮನ್ನೇ ನಿಸ್ವಾರ್ಥವಾಗಿ ಅರ್ಪಿಸಿಕೊಳ್ಳುವ ದೇವಮಕ್ಕಳೂ ಇರುವರು. ಇಂಥವರು ನನ್ನ ಪ್ರಿಯಳೇ, ಪ್ರಿಯನೇ, ಎಂದು ಪ್ರೀತಿಯಿಂದ ಕರೆಯುವ ಕರ್ತನ ಸ್ವರಕ್ಕಾಗಿ ಹಂಬಲಿಸುವರು. ಅಂಥವರು ಕರ್ತನನ್ನು ಮೆಚ್ಚಿಸುವ ಕಾರ್ಯಗಳನ್ನು ಕುರಿತು ಚಿಂತಿಸುತ್ತಾರೆ (1 ಕೊರಿಂ. 7:32).

ಬೋಧಕರಾದ ರಿಚರ್ಡ್ ಉಂಬ್ರಾಂಡ್ ಎಂಬ ಕರ್ತನ ದಾಸನು. ಕರ್ತನ ಮೇಲೆ ಇಟ್ಟ ಪ್ರೀತಿಗಾಗಿಯೂ, ನಂಬಿಕೆಗಾಗಿಯೂ ಹದಿನಾಲ್ಕುವರ್ಷ ಭಯಂಕರವಾದ ಸೆರೆವಾಸ ಅನುಭವಿಸಬೇಕಾಯಿತು. ಒಂದು ದಿನ ಅವರು “ದೇವರೇ ನಿಮ್ಮನ್ನು ಪ್ರೀತಿಸುವ ನನಗೆ ಯಾಕೆ ಇಷ್ಟು ವರ್ಷಗಳ ಜೈಲುಶಿಕ್ಷೆ? ಎಂದು ಕೇಳಿದರು. ಅದಕ್ಕೆ ಕರ್ತನು ಹೇಳಿದನು “ಯಾಕೋಬನು ತಾನು ಪ್ರೀತಿಸಿದ ರಾಹೇಲಳಿಗಾಗಿ ಇನ್ನೂ ಏಳುವರ್ಷ ಲಾಬಾನನ ಬಳಿ ಸೇವೆ ಮಾಡಲಿಲ್ಲವೇ? ಒಟ್ಟು ಹದಿನಾಲ್ಕು ವರ್ಷ ಅವಳಿಗಾಗಿ ತನ್ನ ಮಾವನ ಬಳಿ ಸೇವೆ ಮಾಡಿದನು. ಅವನು ಒಬ್ಬ ಹೆಣ್ಣಿಗಾಗಿ ಅಷ್ಟು ವರ್ಷ ಸೇವೆ ಮಾಡಿದನು. ಆದರೆ ನೀನು ಒಂದು ಹೆಣ್ಣಿಗಾಗಿ ಅಲ್ಲ, ನಿನಗಾಗಿ ತನ್ನ ಪ್ರಾಣವನ್ನೇ ಕೊಟ್ಟ ನನಗಾಗಿ ಶ್ರಮೆಯನ್ನು ಅನುಭವಿಸಿದೆ. ನಿಶ್ಚಯವಾಗಿ ನನ್ನೊಂದಿಗೆ ರಾಜ್ಯವನ್ನಾಳುವಿ” ಎಂದು ಹೇಳಿದನು. ಒಬ್ಬನು ಕರ್ತನನ್ನು ಪ್ರೀತಿಸುವದಾದರೆ, ಆತನಿಗಾಗಿ ಯಾವ ಹಿಂಸೆಯನ್ನಾದರೂ ಕಷ್ಟವನ್ನಾದರೂ ಸಹಿಸಲು ಸಿದ್ಧನಾಗಿರುತ್ತಾನೆ. ಯೇಸುಕ್ರಿಸ್ತನು ಹೀಗೆ ಹೇಳುತ್ತಾನೆ. ನಾನು ಆತನಿಗೆ ಮೆಚ್ಚಿಕೆಯಾದದ್ದನ್ನು ಯಾವಾಗಲೂ ಮಾಡುವದರಿಂದ ಆತನು ನನ್ನನ್ನು ಒಂಟಿಗನಾಗಿ ಬಿಡಲಿಲ್ಲ ಎಂದು (ಯೋಹಾ. 8:29). ಹೌದು ಆತನನ್ನು ಪ್ರೀತಿಸುವವರನ್ನು ಆತನು ಎಂದಿಗೂ ಮರೆಯುವದಿಲ್ಲ. ತನ್ನನ್ನು ಪ್ರೀತಿಸುವವರಿಗಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲ ಪಡಿಸುವನು.

ದೇವಮಕ್ಕಳೇ, ಇಂದು ನಿಮ್ಮ ಪ್ರೀತಿ ಯಾವದರ ಮೇಲಿದೆ, ಲೋಕದ ಮೇಲಾ? ಲೋಕವನ್ನು ಸೃಷ್ಟಿಸಿದ ಕರ್ತನ ಮೇಲಾ? ದೇವರ ಸನ್ನಿಧಾನದಲ್ಲಿ ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳಿರಿ ಲೋಕದ ಮೇಲಿನ ಪ್ರೀತಿ ಗತಿಸಿಹೋಗುವಂಥದ್ದು, ದೇವರ ಮೇಲಿನ ಪ್ರೀತಿ ನಿತ್ಯಜೀವವನ್ನು ನೀಡುವಂಥದ್ದು.

*ನೆನಪಿಗೆ : ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು. ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ ಅಂದೆನು (ಕೀರ್ತ. 40:8).*

ಸೆಪ್ಟೆಂಬರ್ 14

# ಪ್ರಿಯವಾದ ಸೇವೆ!

ಬೆಳಿಗ್ಗೆ : ಜ್ಞಾನೋ. 19,20,21
ಸಂಜೆ : 2 ಕೊರಿಂ. 7

ದೇಶದಲ್ಲಿ ಇಸ್ರಾಯೇಲ್ ವಂಶದವರೆಲ್ಲರೂ ನನ್ನ ಪರಿಶುದ್ಧವಾದ ಬೆಟ್ಟದಲ್ಲಿ ಇಸ್ರಾಯೇಲಿನ ಪರ್ವತಾಗ್ರದಲ್ಲಿ ನನ್ನನ್ನು ಸೇವಿಸುವರು (ಯೆಹೆ. 20:40).

ಈ ಪ್ರಪಂಚದಲ್ಲಿ ಅನೇಕ ರೀತಿಯ ಸೇವೆಗಳಿರುವವು. ಸರ್ಕಾರದ ಸೇವೆ, ಸಮಾಜ ಸೇವೆ, ರಾಜಕೀಯ ಸೇವೆ ಹೀಗೆ ಅನೇಕ ಸೇವೆಗಳುಂಟು. ಹಾಗೆಯೇ ಆ ಸೇವೆಗಳ ಹಿಂದೆ ವಿವಿಧ ರೀತಿಯ ಉದ್ದೇಶಗಳೂ ಉಂಟು. ಪ್ರತಿಫಲಗಳೂ ಉಂಟು. ಎಲ್ಲಕ್ಕಿಂತ ಮಿಗಿಲಾದ ಉತ್ಕೃಷ್ಟವಾದ ಸೇವೆ ಕರ್ತನಿಗಾಗಿ, ಆತನ ರಾಜ್ಯದ ಅಭ್ಯುದಯಕ್ಕಾಗಿ ಮಾಡುವ ಸೇವೆ.

ಕರ್ತನನ್ನು ಸೇವಿಸುವದು ಅಂದರೇನು? ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬಲದಿಂದಲೂ ಆತನನ್ನು ಪ್ರೀತಿಸಿ, ಆರಾಧನೆ ಮಾಡುವದಾಗಿದೆ. ಕರ್ತನನ್ನು ಹೇಗೆ ಸೇವಿಸಬೇಕು? "ಯೆಹೋವನಿಗೆ ಭಯಭಕ್ತಿಯಿಂದ ಸೇವೆ ಮಾಡಿರಿ; ನಡುಗುತ್ತಾ ಉಲ್ಲಾಸಪಡಿರಿ" (ಕೀರ್ತ. 2:11) ಎಂದು ಕೀರ್ತನೆಗಾರನು ಹೇಳುತ್ತಾನೆ. ಈ ಭಯ ಲೋಕರೀತಿಯ ಭಯವಲ್ಲ; ಅದು ದೇವಭಯ. ದೇವಭಯವುಳ್ಳವರು ಪಾಪಕ್ಕೆ ದೂರವಾಗಿರುತ್ತಾರೆ. ಈ ಲೋಕದ ಇಚ್ಛೆಗಳನ್ನು, ಭೋಗಗಳನ್ನು ಬೇಡವೆಂದು ದೂರತಳ್ಳುವರು. ತಮ್ಮನ್ನು ಪರಿಶುದ್ಧಪಡಿಸಿಕೊಂಡು ದೇವರನ್ನು ಆರಾಧಿಸುವರು. ನಾವು ಆರಾಧಿಸುವ ದೇವರು ಭಯ ಭಕ್ತಿಗೆ ಪಾತ್ರನು. ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ನಮಸ್ಕರಿಸಿರಿ; ಎಲ್ಲಾ ಭೂನಿವಾಸಿಗಳೇ ಆತನ ಮುಂದೆ ನಡುಗಿರಿ (ಕೀರ್ತ. 96:9) ಎಂದು ಸತ್ಯವೇದ ಹೇಳುತ್ತದೆ. ಡೇವಿಡ್ ಲಿವಿಂಗ್ಸ್ಟನ್ ಎಂಬ ಭಕ್ತನು ಒಬ್ಬ ದೊಡ್ಡ ವೈದ್ಯನು. ಕರ್ತನಿಗೆ ಸೇವೆ ಮಾಡಬೇಕೆಂಬ ಉದ್ದೇಶದಿಂದ ಆಫ್ರಿಕಾಖಂಡಕ್ಕೆ ಹೋದನು. ಅಲ್ಲಿ ಅನೇಕ ಉಪದ್ರವಗಳನ್ನು ಎದುರಿಸಬೇಕಾಯಿತು. ದೈಹಿಕವಾಗಿ ಮಾನಸಿಕವಾಗಿ ಅನೇಕ ತೊಂದರೆಗಳಿಗೆ ಒಳಗಾದರೂ ಆತನು ಧೈರ್ಯಗುಂದದೆ ತನ್ನ ಸೇವೆಯಲ್ಲಿ ದೃಢವಾಗಿ ನಿಂತನು. ಆತನು ಮರಣದ ವೇಳೆ ಸಮೀಪಿಸಿದಾಗಲೂ, ಹೊತ್ತಾರೆಯಲ್ಲಿ ಎದ್ದು ಸತ್ಯವೇದವನ್ನು ಓದಿ, ದೇವರೇ ನಿನಗೆ ಮೆಚ್ಚಿಗೆಯಾದ ಜೀವಿತವನ್ನು ಜೀವಿಸಿರುವೆನಾ? ಎಂದು ತನ್ನನ್ನು ಸ್ವಪರೀಕ್ಷೆ ಮಾಡಿಕೊಂಡನು.

ದೇವಮಕ್ಕಳೇ, ಇಂದು ನೀವು ಯಾವದೇ ಸೇವೆ ಮಾಡುತ್ತಿದ್ದರೂ ಕರ್ತನಿಗಾಗಿ ಸೇವೆ ಮಾಡುವದನ್ನು ಮತ್ತು ಮಾಡುತ್ತಿರುವಿರೆಂಬುದನ್ನು ಮರೆಯದಿರಿ. ಆತನ ಸೇವೆ ನಿಮಗೆ ಆಶೀರ್ವಾದವನ್ನು ತಂದುಕೊಡುವದು.

*ನೆನಪಿಗೆ : ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೆಂದು ಮಾಡದೆ, ಕರ್ತನಿಗೋಸ್ಕರವೆಂದು ಮನಃಪೂರ್ವಕವಾಗಿ ಮಾಡಿರಿ (ಕೊಲೋ 13:23).*



ಸೆಪ್ಟೆಂಬರ್ 15

# ಪ್ರಿಯನಾದವನೇ!

ಬೆಳಿಗ್ಗೆ : ಜ್ಞಾನೋ. 22,23,24
ಸಂಜೆ : 2 ಕೊರಿಂ. 8

ಪ್ರಿಯನೇ, ನೀನು ಆತ್ಮವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕು. (3 ಯೋಹಾ. 1:2).

ಕರ್ತನು ನಿಮ್ಮನ್ನು ಪ್ರಿಯನೇ, ಪ್ರಿಯಳೇ ಎಂದು ಕರೆಯಲಿ. ದಾನಿಯೇಲನನ್ನು, ನೀನು ನನಗೆ ಬಹಳವಾಗಿ ಪ್ರಿಯನಾದವನು ಅಂದು ಹೇಳಿದಂತೆ, ನಿಮ್ಮನ್ನು ಕರೆದು, ತನ್ನ ರಹಸ್ಯಗಳನ್ನೆಲ್ಲಾ ನಿಮ್ಮೊಂದಿಗೆ ಹಂಚಿಕೊಳ್ಳಲಿ. ಈ ಪ್ರಪಂಚದ ಜನರು ನಿಮ್ಮ ಮೇಲೆ ಇಟ್ಟ ಪ್ರೀತಿ ಕ್ರಮೇಣ ಕಡಿಮೆಯಾಗಬಹುದು. ಅಥವಾ ಮಾರ್ಪಡಬಹುದು. ಆದರೆ ಕರ್ತನ ಪ್ರೀತಿಯಾದರೋ ಪರಿಪೂರ್ಣವಾದದ್ದು, ನಿರಂತರವಾದದ್ದು, ಬದಲಾಗದಂಥದ್ದು (ಯೋಹಾ. 13:1).

ದೇವರು ತನ್ನ ಒಬ್ಬನೇ ಮಗನಾದ ಕ್ರಿಸ್ತನನ್ನು ನಂಬುವ ಒಬ್ಬನಾದರೂ ನಾಶವಾಗದೆ ನಿತ್ಯಜೀವವನ್ನು ಪಡೆಯುವದಕ್ಕಾಗಿ ಆತನನ್ನು ಪಾಪನಿವಾರಣ ಯಜ್ಞವಾಗಿ ಅರ್ಪಿಸಲು ಈ ಲೋಕಕ್ಕೆ ಕಳುಹಿಸಿದನು (ಯೋಹಾ. 3:16). ದೇವರು ಪ್ರೀತಿಸ್ವರೂಪಿಯಾಗಿದ್ದಾನೆ (1ಯೋಹಾ.4:8). ತಂದೆ ತಾಯಿಗಳು ಕೈಬಿಟ್ಟರೂ ಕರ್ತನು ನಿಶ್ಚಯವಾಗಿ ನಿಮ್ಮನ್ನು ಸೇರಿಸಿಕೊಳ್ಳುವನು (ಕೀರ್ತ. 27:10). ನಾನು ಮೋಶೆಯ ಸಂಗಡ ಇದ್ದಂತೆ ನಿನ್ನ ಸಂಗಡಲೂ ಇರುವೆನು. ನಿನ್ನನ್ನು ಕೈಬಿಡುವದಿಲ್ಲ ತೊರೆಯುವದಿಲ್ಲ (ಯೆಹೊ. 1:5–6) ಎಂದು ಯೆಹೋಶುವನಿಗೆ ವಾಗ್ದಾನ ಮಾಡಿದ ದೇವರು ನಿಮ್ಮ ದೇವರೂ ಆಗಿದ್ದಾನೆ. ಆತನ ವಾಗ್ದಾನ ಎಂದಿಗೂ ತಪ್ಪಿಹೋಗದು. ಆದ್ದರಿಂದ ಕರ್ತನನ್ನು ಮೆಚ್ಚಿಸಿರಿ. ಆತನು ಬಯಸುವಂತೆ ನಡೆದುಕೊಳ್ಳಿರಿ. ನಿಮ್ಮ ಆತ್ಮದ ವಿಮೋಚನೆಯನ್ನೂ, ಜೀವವನ್ನೂ ಆತನು ಶ್ರೇಷ್ಠವೆಂದೆಣಿಸಿದ್ದರಿಂದ ನಿಮಗಾಗಿ ಪರಲೋಕವನ್ನು ತ್ಯಜಿಸಿ, ಈ ಭೂಮಿಯಲ್ಲಿ ದಾಸನ ರೂಪಧರಿಸಿ ನಿಮ್ಮ ಆತ್ಮ ರಕ್ಷಣೆಗಾಗಿ ತನ್ನನ್ನೇ ಸಜೀವಯಜ್ಞವಾಗಿ ಅರ್ಪಿಸಿದನು (ಯೆಶಾ. 53:12). ನಿಮ್ಮ ಆತ್ಮದಲ್ಲಿ ಜೀವ ಇರಬೇಕೆಂತಲೂ ಅದು ಸಮೃದ್ಧಿಯಾಗಿರಬೇಕೆಂತಲೂ ಕ್ರಿಸ್ತನು ಬಂದದ್ದರಿಂದ ನಿಮ್ಮ ಆತ್ಮವನ್ನು ಕಾಪಾಡಿಕೊಳ್ಳಿರಿ. ಪಾಪವು ಅದನ್ನು ಆವರಿಸಿಕೊಳ್ಳಬಾರದು. ಶರೀರದ ಇಚ್ಛೆಗಳೋ ಜೀವನದ ಹೆಮ್ಮೆಯೋ ಅದನ್ನು ಅಶುದ್ಧಪಡಿಸಬಾರದು. ಪಾಪದ ಸಂಬಳ ಮರಣ (ರೋಮಾ.6:23). ಪಾಪ ಮಾಡುವ ಆತ್ಮವು ಸಾಯುವದು (ಯೆಹೆ. 18:20).

ದೇವಮಕ್ಕಳೇ, ಕರ್ತನಿಗೆ ಬೇಡವಾದ ಯಾವದೇ ಸಂಗತಿಯು ನಿಮ್ಮಲ್ಲಿ ಇರುವದಾದರೆ ಅದನ್ನು ಬಿಟ್ಟು ಇಂದೇ ಕಣ್ಣೀರಿನಿಂದ ಕರ್ತನ ಕಡೆಗೆ ತಿರುಗಿರಿ. ಎಷ್ಟರ ಮಟ್ಟಿಗೆ ಆತನನ್ನು ದುಃಖಪಡಿಸಿದ್ದೀರೋ, ಅಷ್ಟರಮಟ್ಟಿಗೆ ಆತನನ್ನು ಪ್ರೀತಿಸಿ, ಆತನನ್ನು ಆರಾಧಿಸಲು ಸೇವಿಸಲು ನಿಮ್ಮನ್ನು ಒಪ್ಪಿಸಿಕೊಡಿರಿ. ಆತನು ನಿಮ್ಮ ಹೃದಯದ ಬಾಗಿಲ ಬಳಿ ನಿಂತು ತಟ್ಟುತ್ತಾ ಇರುವನು.

*ನೆನಪಿಗೆ : ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ? (ರೋಮಾ.8:32)*

ಸೆಪ್ಟೆಂಬರ್ 16

## ಕರೆ, ಆರಿಸಿಕೊಳ್ಳುವಿಕೆ!

ಬೆಳಿಗ್ಗೆ : ಜ್ಞಾನೋ. 25,26
ಸಂಜೆ : 2 ಕೊರಿಂ. 9

ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ, ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವದಿಲ್ಲ (2 ಪೇತ್ರ. 1:10).

ಕರೆಯುವಿಕೆ, ಆರಿಸಿಕೊಳ್ಳುವಿಕೆ ಬಹಳ ಮುಖ್ಯವಾದದ್ದು. ಎಂದು ನೀವು ವಿಶ್ವಾಸಿಗಳಾದಿರೋ, ಅಂದೇ ನೀವು ನಿಮ್ಮ ಕರೆಯುವಿಕೆಯನ್ನೂ, ಆರಿಸಿಕೊಳ್ಳುವಿಕೆಯನ್ನೂ ಅರಿತುಕೊಳ್ಳಬೇಕು. ದೃಢಪಡಿಸಿಕೊಳ್ಳಬೇಕು. ನಂತರ ಆ ಕರೆಯುವಿಕೆಯಲ್ಲಿ ಓಡಬೇಕು.

ಅಪೊ. ಪೇತ್ರನನ್ನು ಯೇಸುಕ್ರಿಸ್ತನು ತನ್ನ ಶಿಷ್ಯನಾಗಲು ಕರೆದಾಗ, ಆ ಕರೆಯ ಶ್ರೇಷ್ಠತೆಯನ್ನು ಅರಿತುಕೊಂಡು ತನ್ನ ದೋಣಿಯನ್ನು, ಬಲೆಯನ್ನು, ಉದ್ಯೋಗವನ್ನು ಬಿಟ್ಟುಬಿಟ್ಟು ಕ್ರಿಸ್ತನನ್ನು ಹಿಂಬಾಲಿಸಿದನು. ಆತನೊಂದಿಗೆ ಮೂರುವರೆ ವರುಷಗಳ ಕಾಲ ಜೊತೆ ಸೇವಕನಾಗಿದ್ದನು. ಪೇತ್ರನು ತನ್ನ ಕರೆಯನ್ನು ನೆರವೇರಿಸಲು ಯೇಸುಕ್ರಿಸ್ತನು ಬೋಧನೆ ಮಾಡಿದನು. ಮಾದರಿ ತೋರಿಸಿದನು. ಪೇತ್ರನು ತನ್ನ ಜೀವಿತದ ಹಲವು ಅನುಭವಗಳನ್ನು ಒಂದು ನಿರ್ದಿಷ್ಟ ಗುಂಪಿನ ಜನರಿಗೆ ಬರೆದನು. ಅವರು ಯಾರು? "ನಮ್ಮೊಂದಿಗೆ ಅಮೂಲ್ಯವಾದ ನಂಬಿಕೆಯನ್ನು ಹೊಂದಿದವರಿಗೆ" ಎಂದು ಬರೆಯುತ್ತಾನೆ (2 ಪೇತ್ರ 1:1). ಅಂದರೆ ವಿಶ್ವಾಸಿಗಳಾದ ನಮಗೆ ಬರೆದಿರುವನು. ನಿಮ್ಮ ಕರೆಯುವಿಕೆಯು, ಆರಿಸಿಕೊಳ್ಳುವಿಕೆಯ ಬಗ್ಗೆ ಜಾಗ್ರತೆಯಾಗಿರ್ರಿ. ಇಲ್ಲದೆ ಹೋದರೆ ಎಡವಿ ಬೀಳುವ ಅಪಾಯವೇ ಹೆಚ್ಚು. 'ಜಾಗ್ರತೆ' ಎಂದು ಹೇಳುವಾಗ 'ಎಚ್ಚರಿಕೆಯಾಗಿರ್ರಿ' ಎಂದು ಅರ್ಥ. ಸತ್ಯವೇದದಲ್ಲಿ ಬರೀ ಆಶೀರ್ವಾದವನ್ನು ಮಾತ್ರವಲ್ಲ, ವಾಗ್ದಾನಗಳನ್ನು ಮಾತ್ರವಲ್ಲ, ಎಚ್ಚರಿಕೆಗಳನ್ನೂ ಕೊಟ್ಟಿರುವದು. ಅವು ನಿಮ್ಮ ಕಾಲುಗಳಿಗೆ ದೀಪವೂ, ಮಾರ್ಗಕ್ಕೆ ಬೆಳಕೂ, ಆಗಿರುವದು (ಕೀರ್ತ. 119:105). ನೀವು ಇರುಳಿನಲ್ಲಿ ಮುಗ್ಗರಿಸದಂತೆ, ಅವು ನಿಮಗೆ ಬೆಳಕನ್ನು ನೀಡುವದು.

ಸಹೋದರನೇ, ಸಹೋದರಿಯೇ, ನಿನ್ನ ಕರೆಯುವಿಕೆ ಏನಾಗಿದೆ ನೀವು ದೇವರ ಮಕ್ಕಳಾಗುವಂತೆ ಕರೆಯಲ್ಪಟ್ಟಿರುವಿರಿ. ಕರ್ತನನ್ನು ಅಪ್ಪಾ, ತಂದೆಯೇ ಎಂದು ಕರೆಯುವ ಒಂದು ಬಾಂಧವ್ಯದಲ್ಲಿ ನೆಲೆಯೂರಲು ಕರೆಯಲ್ಪಟ್ಟಿದ್ದೀರಿ. ಈ ಕರೆಯು, ನಿತ್ಯತ್ವದವರೆಗೂ ಸಾಗುವಂತೆ ಕರೆಯಲ್ಪಟ್ಟಿದ್ದೀರಿ. ಆದ್ದರಿಂದ ನಿಮ್ಮ ಕರೆಯುವಿಕೆಯನ್ನೂ, ಆರಿಸಿಕೊಳ್ಳುವಿಕೆಯನ್ನೂ ದೃಢಪಡಿಸಿಕೊಂಡು, ಪರಿಶುದ್ಧತೆಯಲ್ಲಿ ದೃಢವಾಗಿ ನಿಲ್ಲಿರಿ.

*ನೆನಪಿಗೆ : ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದು.... ಪೂರ್ಣ ವಿನಯ, ಸಾತ್ವಿಕತ್ವಗಳಿಂದಲೂ, ದೀರ್ಘಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ (ಎಫೆ. 4:1,2,3).*



ಸೆಪ್ಟೆಂಬರ್ 17

## ಕರೆಯಲ್ಪಟ್ಟ ಕರೆಯಲ್ಲಿ!

ಬೆಳಿಗ್ಗೆ : ಜ್ಞಾನೋ. 27,28,29
ಸಂಜೆ : 2 ಕೊರಿಂ. 10

"ಸಹೋದರರೇ, ಪ್ರತಿಯೊಬ್ಬನು ಕರೆಯಲ್ಪಟ್ಟಾಗ ಯಾವ ಸ್ಥಿತಿಯಲ್ಲಿದ್ದನೋ ಅದೇ ಸ್ಥಿತಿಯಲ್ಲಿ ದೇವರ ಮುಂದೆ ಇದ್ದುಕೊಂಡಿರಲಿ" (1 ಕೊರಿಂ. 7:24).

ಪ್ರತಿಯೊಬ್ಬ ದೇವಮಕ್ಕಳನ್ನೂ ಕರ್ತನು ಒಂದೊಂದು ರೀತಿಯಲ್ಲಿ ಕರೆದಿರುವನು. ಪ್ರತಿಯೊಬ್ಬರಿಗೂ ಕರ್ತವ್ಯಗಳು ಉಂಟು, ತಲಾಂತುಗಳುಂಟು, ಸೇವೆಗಳಿರುವವು, ಕ್ರಿಯೆಗಳುಂಟು. ನೀವು ಕರೆಯಲ್ಪಟ್ಟ ಕರೆಯಲ್ಲಿ ಉಪಯೋಗಿಸಲ್ಪಡುವಾಗ, ಕರ್ತನ ನಾಮ ಮಹಿಮೆ ಹೊಂದುವದು. ಓಟದ ಪಂದ್ಯದಲ್ಲಿ ಇಪ್ಪತ್ತು ಮಂದಿ ಓಡುವರೆಂದು ಇಟ್ಟುಕೊಳ್ಳಿ. ಪ್ರತಿಯೊಬ್ಬರು ತಮಗೆಂದು ಸೂಚಿಸಲ್ಪಟ್ಟ ಎಲ್ಲೆಯೊಲಗೆ ಓಡಬೇಕು. ಒಬ್ಬರು ಇನ್ನೊಬ್ಬರ ಎಲ್ಲೆಯಲ್ಲಿ ಬಂದುಬಿಟ್ಟರೆ ಬಹುಮಾನ ಪಡೆದುಕೊಳ್ಳಲಾಗುವದಿಲ್ಲ.

ಒಬ್ಬ ಸಹೋದರನನ್ನು ಕರ್ತನು ಸೌವಾರ್ತಿಕನನ್ನಾಗಿ ಕರೆದಿದ್ದನು. ಅದರಿಂದ ಅವನು ಎಷ್ಟೋ ಆತ್ಮಗಳನ್ನು ಕರ್ತನಿಗಾಗಿ ಸಂಪಾದಿಸಿದನು. ಜಯಭರಿತವಾದ ಸೇವೆ ಮಾಡುತ್ತಿದ್ದ ಆತನು ಇದ್ದಕ್ಕಿದ್ದಂತೆ ಒಂದು ಸಭೆಗೆ ಬೋಧಕರಾದರು. ಆತನು ಯಾಕೆ ತನ್ನ ಕರೆಯನ್ನು ಬಿಟ್ಟು ಬೇರೆ ಸೇವೆಗೆ ಹೋದನೆಂದು ಕೇಳಿದಾಗ, "ಸುವಾರ್ತಾ ಸೇವೆಯಲ್ಲಿ ನನ್ನ ಕುಟುಂಬವನ್ನು ನಡೆಸಲಾಗಲಿಲ್ಲ. ಸಭೆಯ ಬೋಧಕನಾದರೆ ದಶಮ ಭಾಗ ಸಿಗುತ್ತದೆ. ಅಲೆದಾಡುವುದು ಇರುವದಿಲ್ಲ. ಒಂದೇ ಸ್ಥಳದಲ್ಲಿ ಇದ್ದುಕೊಂಡು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬಹುದು" ಎಂದರು. ಆದರೆ ಅವರ ಸಭೆಯಲ್ಲಿ ಸೇವೆ ಆಶೀರ್ವಾದಕರವಾಗಿರಲಿಲ್ಲ. ವಿಶ್ವಾಸಿಗಳಿಗೆ ತೊಡಕು ಉಂಟು ಮಾಡಿ ತಾವೂ ಅದರಲ್ಲಿ ಸಿಕ್ಕಿಕೊಂಡರು. ಬೋಧಕರಾದ ಪಾಲ್ ಯಾಂಗಿಚೋರವರು ತಮ್ಮ ಸೇವೆಯ ಪ್ರಾರಂಭದ ದಿನಗಳಲ್ಲಿ ಬಿಲ್ಲಿಗ್ರಹಾಂರಂತೆ ಆಗಬೇಕೆಂದು ಆಸೆಪಟ್ಟರು. ಬಿಲ್ಲಿಗ್ರಹಾಂರ ಎಲ್ಲಾ ಪ್ರಸಂಗಗಳನ್ನು ಪದೇ ಪದೇ ಕೇಳಿ ಅವರಂತೆ ನಟಿಸಲಾರಂಭಿಸಿದರು. ಒಂದು ದಿನ ದೇವರು ಅವರನ್ನು ನೋಡಿ "ನನ್ನ ಮಗನೇ, ನೀನು ನೀನಾಗಿರು, ವೇಷ ಹಾಕಬೇಡ. ನಿನ್ನ ಕರೆಯಲ್ಲಿ ನೀನು ನೆಲೆಯಾಗಿ ನಿಂತರೆ, ತಕ್ಕ ಸಮಯದಲ್ಲಿ ನಿನ್ನನ್ನು ಉನ್ನತಿಗೆ ತರುವೆನು" ಎಂದನು. ನೀವು ಒಬ್ಬರನ್ನೊಬ್ಬರು ನೋಡಿ ಕಾಪಿ ಹೊಡೆಯುವ ಅಗತ್ಯವಿಲ್ಲ. ಇನ್ನೊಬ್ಬರ ಪಾದರಕ್ಷೆಯಲ್ಲಿ ಕಾಲಿಡುವ ಅಗತ್ಯವಿಲ್ಲ. ನಿಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿರಿ.

ದೇವಮಕ್ಕಳೇ, ಶರೀರದಲ್ಲಿ ಹಲವು ಅಂಗಗಳಿವೆ. ಪ್ರತಿಯೊಂದಕ್ಕೂ ಒಂದು ಕಾರ್ಯವಿರುವದು. ಕೈ ಕಾಲಾಗಲು ಪ್ರಯತ್ನಿಸಬಾರದು. ಕಾಲು, ಕಣ್ಣಾಗಬಾರದು. ಕರ್ತನು ತನ್ನ ಚಿತ್ತದಂತೆ ಪ್ರತಿಯೊಂದು ಅಂಗವನ್ನು ಶರೀರದಲ್ಲಿ ಇಡಲ್ಪಟ್ಟಿರುವನು. ಪ್ರಿಯರೇ, ಕರ್ತನು ನಿಮ್ಮನ್ನು ಕರೆದಿರುವ ಕರೆಯಲ್ಲಿ ನೆಲೆಗೊಂಡು ದೇವರ ಚಿತ್ತವನ್ನು ನೆರವೇರಿಸಿರಿ. ಆತನು ನಿಮ್ಮನ್ನು ಮಹಿಮೆಯಾಗಿ ಉಪಯೋಗಿಸುವನು.

*ನೆನಪಿಗೆ : "ವರಗಳಲ್ಲಿ ಬೇರೆ ಬೇರೆ ವಿಧಗಳುಂಟು. ದೇವರಾತ್ಮನು ಒಬ್ಬನೇ, ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು ಕರ್ತನು ಒಬ್ಬನೇ. ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು. ಸರ್ವರಲ್ಲಿಯೂ ಸರ್ವ ಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ" (1 ಕೊರಿಂ. 12:4–6).*

ಸೆಪ್ಟೆಂಬರ್ 18

# ಕರೆಯಲ್ಲಿ ದೃಢತೆ!

ಬೆಳಿಗ್ಗೆ : ಜ್ಞಾನೋ. 30,31
ಸಂಜೆ : 2 ಕೊರಿಂ. 11:1–15

"ನಿಮನ್ನು ಕರೆದದ್ದನ್ನು ಆದುಕೊಂಡದ್ದನ್ನು ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ" (2 ಪೇತ್ರ.1:10)

ಕರ್ತನು ನಿಮ್ಮನ್ನು ಕರೆದು, ಕೈಹಿಡಿದಿದ್ದಾನೆ. ನಿಮ್ಮನ್ನು ಕರೆದ ಕರೆಯಲ್ಲಿ ನಿಮ್ಮನ್ನು ಮಾರ್ಗತೋರಿಸಿ ನಡೆಸಲೂ ಆತನು ಶಕ್ತನಾಗಿರುವನು. ನೀವು ಮಾಡಬೇಕಾದದ್ದೆಲ್ಲಾ ನಿಮ್ಮ ಕರೆಯುವಿಕೆಯನ್ನು, ಆರಿಸಿಕೊಳ್ಳಲ್ಪಟ್ಟಿರುವದನ್ನು ದೃಢಪಡಿಸಿಕೊಳ್ಳುವದು.

ಕರ್ತನು ನನ್ನನ್ನು ಸೇವೆಗಾಗಿ ಆರಿಸಿಕೊಂಡಾಗ, ಬೀದಿ ಪ್ರಸಂಗಗಳನ್ನು ಮಾಡಿದೆನು. ಹಳ್ಳಿಗಳಿಗೆ ಸೇವೆಗಾಗಿ ಹೋಗುತ್ತಿದ್ದೆನು. ಬೆಳಿಗ್ಗೆಯೇ ರೈಲು ನಿಲ್ದಾಣಕ್ಕೆ ತೆರಳಿ ಸುವಾರ್ತಾ ಕರಪತ್ರಗಳನ್ನು ಹಂಚುತ್ತಿದ್ದೆನು. ಆಸ್ಪತ್ರೆ ಸೇವೆ, ಜೈಲು ಸೇವೆ ಎಂದು ಹಲವು ರೀತಿಯ ಸೇವೆಗಳನ್ನು ಮಾಡುತ್ತಲೇ ಬಂದೆನು. ಆ ಸಮಯದಲ್ಲೆ ಸರ್ಕಾರಿ ಕಛೇರಿಯಲ್ಲಿ ಕೆಲಸ ಮಾಡಿದೆ. ನನ್ನ ಕರೆ ಯಾವದು? ಕರ್ತನು ನನಗಾಗಿ ಇಟ್ಟಿರುವ ನಿರ್ದಿಷ್ಟವಾದ ಸೇವೆ ಯಾವದು? ಎಂಬುದು ಗೊತ್ತಿರಲಿಲ್ಲ. ಒಂದು ದಿನ ಒಬ್ಬ ದೇವಸೇವಕರನ್ನು ಸಂಧಿಸಿ "ಅಯ್ಯಾ, ನೀವು ನನಗಾಗಿ ಪ್ರಾರ್ಥಿಸಿರಿ, ನನ್ನ ಕರೆ ಯಾವದು? ಕರ್ತನು ನನಗಾಗಿ ಇಟ್ಟಿರುವ ಸೇವೆ ಯಾವದು? ನಾನು ಸೌವಾರ್ತಿಕನಾ? ಬೋಧಕನಾ? ಪ್ರವಾದಿಯಾ? ಇಲ್ಲವೇ ಕುರುಬನಾ? ಹೇಳಿರಿ ಎಂದು ಕೇಳಿದನು. ಅವರು ಪ್ರೀತಿಯಿಂದ ಬೆನ್ನು ತಟ್ಟಿ ನಿನಗೆ ಯಾವ ಯಾವ ಸೇವೆ ಮಾಡಲು ಇಷ್ಟವೋ ಅವೆಲ್ಲವುಗಳನ್ನೂ ಮನಸ್ಪೂರ್ತಿಯಾಗಿ ಆಸಕ್ತಿಯಿಂದ ಮಾಡು. ಕರ್ತನ ಸಮಯ ಬರುವಾಗ, ಆತನು ಒಂದು ನಿರ್ದಿಷ್ಟ ಸಮಯದಲ್ಲಿ, ನಿನ್ನನ್ನು ನಡೆಸಲು ಪ್ರಾರಂಬಿಸುವನು. ಆಗ ಆ ಸೇವೆಯನ್ನು ದೃಢವಾಗಿ ಹಿಡಿದುಕೋ. ಆ ಸೇವೆಯಲ್ಲಿ ಆಲಸ್ಯ ಮಾಡದೆ ದೃಢವಾಗಿ ನಿಲ್ಲುವಿಯಾದರೆ, ಅದರಲ್ಲಿ ನೀನು ಅಭಿವೃದ್ಧಿ ಹೊಂದುವಿ" ಎಂದರು. ಹಾಗೆಯೇ ಕೆಲವು ವರ್ಷಗಳು ದಾಟಿಹೋದವು. ಒಂದು ದಿನ ಕರ್ತನು ಬರವಣಿಗೆಯ ಸೇವೆಯನ್ನು ಕುರಿತು ನನ್ನೊಂದಿಗೆ ಮಾತನಾಡಿದನು. ನಾನು ಆತ್ಮೀಕ ಪುಸ್ತಕಗಳನ್ನು ಒಂದು ಸಾರಿಯೂ ಯೋಚಿಸಿರಲೇ ಇಲ್ಲ. ಆದರೆ ಕರ್ತನ ಸ್ವರ ಸ್ಪಷ್ಟವಾಗಿ ಕೇಳಿಸಿದ್ದರಿಂದ ಆ ಸೇವೆಯಲ್ಲಿ ದೃಢವಾಗಿ ನಿಂತೆನು. ಅನೇಕರು ಕರ್ತನ ಕರೆಯನ್ನು ಬಿಟ್ಟು ತಮ್ಮ ಸ್ವ ಇಚ್ಚೆಯಂತೆ ದಿಕ್ಕು ತಪ್ಪಿ ನಡೆಯುವಾಗ, ತಮ್ಮ ಜೀವಿತದಲ್ಲಿ ಸಮಾಧಾನವನ್ನು, ನೆಮ್ಮದಿಯನ್ನು ಕಳೆದುಕೊಳ್ಳುವರು.

ದೇವಮಕ್ಕಳೇ, ಕರ್ತನು ತನ್ನ ಮಕ್ಕಳಾಗುವಂತೆ ನಿಮ್ಮನ್ನು ಕರೆದಿರುವನು (1 ಯೋಹಾ.3:1). ನಿತ್ಯಜೀವವನ್ನು ಪಡೆಯಲು ಕರೆದಿರುವನು (1 ತಿಮೊ. 6:12) ಪರಿಶುದ್ಧತೆಗಾಗಿ ಕರೆದಿರುವನು (1 ಥೆಸ. 4:7). ನೀವು ಮಾಡಬೇಕಾದದ್ದೇನು? ದೇವರ ಕರೆಗೆ ಪಾತ್ರರಾಗಿ ನಡೆದುಕೊಳ್ಳಬೇಕು (ಎಫೆ. 4:1). ಅದುವೇ ನಿಮ್ಮನ್ನು ಕುರಿತಾದ ಕರ್ತನ ಉದ್ದೇಶ.

*ನೆನಪಿಗೆ : ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು. ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು. ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮ ಪದವಿಗೆ ಸೇರಿಸಿದನು (ರೋಮಾ. 8:30).*



ಸೆಪ್ಟೆಂಬರ್ 19

# ಕರೆಯುವಿಕೆಯನ್ನು ನೋಡಿರಿ!

ಬೆಳಿಗ್ಗೆ : ಪ್ರಸಂಗಿ 1,2,3
ಸಂಜೆ : 2 ಕೊರಿಂ. 11:16–33

ಸಹೋದರರೇ, ದೇವರು ನಿಮ್ಮನ್ನು ಕರೆದಾಗ ಎಂಥವರನ್ನು ಕರೆದನೆಂದು ಆಲೋಚಿಸಿರಿ. ನಿಮ್ಮೊಳಗೆ.... ಜ್ಞಾನಿಗಳೂ ಅನೇಕರಿಲ್ಲ, ಅಧಿಕಾರಿಗಳೂ ಅನೇಕರಿಲ್ಲ, ಕುಲೀನರೂ ಅನೇಕರಿಲ್ಲ. ದೇವರು ಬಲಿಷ್ಠರನ್ನು ನಾಚಿಕೆ ಪಡುಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ (1 ಕೊರಿಂ. 1:26,27).

ತಂದೆಯಾದ ದೇವರು ನಮ್ಮ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಕೃಪೆಯನ್ನು ನಮ್ಮ ಮೇಲೆ ಸುರಿಸುತ್ತಿರುವನು ಮತ್ತು ನಮ್ಮನ್ನು ಕರೆದಿರುವನು! ನಾವೇನು ಜ್ಞಾನಿಗಳಾ? ಅಧಿಕಾರಿಗಳಾ, ಬಲಶಾಲಿಗಳಾ? ಯಾವದೂ ಅಲ್ಲ. ನಮ್ಮ ದೀನಾವಸ್ಥೆಯಲ್ಲೂ ಕರ್ತನು ನಮ್ಮನ್ನು ಆರಿಸಿಕೊಂಡು ಪ್ರೀತಿಸಿದನು. ನಮ್ಮ ಭಾಗ್ಯವೆಲ್ಲಾ ಕರ್ತನು ನಮ್ಮೊಂದಿಗೆ ಇರುವದೇ ಆಗಿದೆ. ಇದರಿಂದಾಗಿ ನಾವು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಲು ಸಾಧ್ಯ.

ಕರ್ತನು ನಿಮ್ಮೊಂದಿಗಿರುವಾಗ ನಿಮಗಿಂತ ಜ್ಞಾನಿಯಾರಿರುವರು? ಆತನು ನಿಮ್ಮೊಂದಿಗಿರುವಾಗ ನಿಮಗಿಂತ ಬಲಶಾಲಿಗಳು ಯಾರಿರಲು ಸಾಧ್ಯ? ಕ್ರಿಸ್ತಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ, ನೀತಿ, ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು (1ಕೊರಿಂ.1:30). ಕರ್ತನು ಮೋಶೆಯನ್ನು ಆರಿಸಿಕೊಂಡಾಗ, ಮೋಶೆ ತನ್ನ ಅಸಹಾಯಕತೆಯನ್ನು, ಬಲಹೀನತೆಯನ್ನು ದೇವರ ಬಳಿ ವಿವರಿಸಿ, "ನಾನು ಮಾತುಬಲ್ಲವನಲ್ಲ, ಮಂದ ನಾಲಿಗೆ ಉಳ್ಳವನು" ಅಂದನು. ಆದರೆ ಕರ್ತನು ಮೋಶೆಯ ಮೂಲಕ ಇಸ್ರಾಯೇಲ್ಯರನ್ನು ನಾಲ್ವತ್ತು ವರುಷಗಳು ಅರಣ್ಯಮಾರ್ಗದಲ್ಲಿ ನಡೆಸಿದನು. ಕರ್ತನು ಪ್ರವಾದಿಯಾದ ಯೆರೆಮೀಯನನ್ನು ಕರೆದಾಗ, ಅವನು ದೇವರೆ ನಾನು ಮಾತು ಬಲ್ಲವನಲ್ಲ. ಅಲ್ಪನಾದವನು ಎಂದು ಹೇಳಿದಾಗಲೂ, ಕರ್ತನು ತನ್ನ ಮಾತುಗಳನ್ನು ಯೆರಮೀಯನ ಬಾಯಲ್ಲಿಟ್ಟು ಅವನನ್ನು ಪ್ರವಾದಿಯನ್ನಾಗಿ ಉಪಯೋಗಿಸಿದನು. ಮೀನು ಹಿಡಿಯುತ್ತಿದ್ದ ಪೇತ್ರನನ್ನು ಆರಿಸಿಕೊಂಡು ತನ್ನ ಶಿಷ್ಯನನ್ನಾಗಿಯೂ, ಒಬ್ಬ ದೊಡ್ಡ ಅಪೊಸ್ತಲನನ್ನಾಗಿಯೂ ಉಪಯೋಗಿಸಿದನು. ಗಿಡ್ಡ ಮನುಷ್ಯನೆಂದು ಜನರ ಅಪಹಾಸ್ಯಕ್ಕೆ ಒಳಗಾಗಿದ್ದ ಜಾನ್‌ವೆಸ್ಲಿಯನ್ನು ಮೆಥೋಡಿಸ್ಟ್ ಸಭೆಯ ಸ್ಥಾಪಕನನ್ನಾಗಿ ಕರ್ತನು ಉಪಯೋಗಿಸಿದನು. ಡಿ.ಎಲ್. ಮೂಡಿಯವರು ಓದು ಬರಹ ಅಷ್ಟಾಗಿ ತಿಳಿಯದ ವ್ಯಕ್ತಿ. ಆದರೆ ಕತ್ತು ತನ್ನ ಸೇವೆಯಲ್ಲಿ ಅಗ್ನಿಜ್ವಾಲೆಯಾಗಿ ಉಪಯೋಗಿಸಿದನು. ಆತನ ಸೇವೆಯಲ್ಲಿ ಆಶೀರ್ವದಿಸಲ್ಪಟ್ಟವರು ಲಕ್ಷಾಂತರ ಜನರು.

ದೇವಮಕ್ಕಳೇ, ದೇವರಿಂದ ಕರೆಯಲ್ಪಟ್ಟ ದೊಡ್ಡ ಭಕ್ತರು ಶರೀರದಲ್ಲಿಯೂ, ಜ್ಞಾನದಲ್ಲಿಯೂ ಬಲಹೀನರಾಗಿದ್ದಂತೆ ನಿಮಗೂ ಬಲಹೀನತೆಗಳು ಇರಬಹುದು, ಆತ್ಮೀಕ ಜೀವಿತದಲ್ಲಿ ಮೇಲೇರದಂತೆ ಹಲವು ತಡೆಗಳು ಬರಬಹುದು. ಮನಸ್ಸಿನಲ್ಲಿ ಕುಗ್ಗಿಹೋಗದಿರಿ. ಜ್ಞಾನಿಗಳನ್ನು ನಾಚಿಕೆ ಪಡಿಸುವಂತೆ ದೇವರು ನಿಮ್ಮನ್ನು ಆರಿಸಿಕೊಂಡಿರುವನು. ಬಲಹೊಂದಿರಿ ಧೈರ್ಯಗೊಳ್ಳಿರಿ.

*ನೆನಪಿಗೆ : ಕರ್ತನು ಇತರರಿಗೆ ನಿಮ್ಮನ್ನು ಅಧೀನಮಾಡದೆ ಎಲ್ಲರಿಗೂ ಶಿರಸ್ಸನ್ನಾಗಿಯೇ ಮಾಡುವನು. ನೀವು ಎಲ್ಲರಿಗಿಂತಲೂ ಮೇಲಣವರಾಗಿರುವಿರೇ ಹೊರತು ಕೆಳಗಣವರಾಗಿರುವದಿಲ್ಲ (ಧರ್ಮೋ.28:14).*

ಸೆಪ್ಟೆಂಬರ್ 20

## ಕರೆಗೆ ಯೋಗ್ಯರು!

ಬೆಳಿಗ್ಗೆ : ಪ್ರಸಂಗಿ 4,5
ಸಂಜೆ : 2 ಕೊರಿಂ. 12

ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಿರಿ (ಎಫೆ.4:1).

ಪ್ರತಿಯೊಬ್ಬ ದೇವಮಕ್ಕಳು, ಮೊದಲನೆಯದಾಗಿ ದೇವರು ಕರೆದ ಕರೆಗೆ ಯೋಗ್ಯರಾಗಿ ನಡೆದುಕೊಳ್ಳುವದು ಅಗತ್ಯವಾದದ್ದು. ಕರ್ತನು ನಿಮ್ಮನ್ನು ಪರಲೋಕದ ಸ್ವಾಸ್ತ್ಯವನ್ನು ಹೊಂದಿಕೊಳ್ಳುವದಕ್ಕಾಗಿ ಕರೆದಿರುವನು. ಈ ಕರೆಯನ್ನೂ, ಆರಿಸಿಕೊಳ್ಳುವಿಕೆಯನ್ನೂ ದೃಢಪಡಿಸಿಕೊಂಡು ಆತನ ಪ್ರೀತಿಗೆ, ಕರೆಗೆ, ಯೋಗ್ಯರಾಗಿ ನಡೆದುಕೊಳ್ಳಿರಿ. ಅದಕ್ಕೆ ತಕ್ಕ ಜೀವಿತವನ್ನು ಜೀವಿಸಿರಿ.

ಕರ್ತನು ಹೇಳುತ್ತಾನೆ, "ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರೆಯಲ್ಪಟ್ಟವರು ಧನ್ಯರು" ಎಂದು (ಪ್ರಕ. 19:9). "ಮದುವೆಗೆ ಸಿದ್ಧವಾಗಿದೆ. ಆದರೆ ಕರೆಯಲ್ಪಟ್ಟವರು ಯೋಗ್ಯರಾಗಿರಲಿಲ್ಲ" (ಮತ್ತಾ. 22:8) ಎಂದು ಕರ್ತನು ಹೇಳುತ್ತಾನೆ. ಇಂದು ನೀವು ಈ ಕರೆಗೆ ಯೋಗ್ಯರಾಗಿರುವಿರಾ? ಎರಡನೆಯದಾಗಿ ನೀವು ಸುವಾರ್ತೆಗೆ ಯೋಗ್ಯರಾಗಿ ನಡೆದುಕೊಳ್ಳಬೇಕು (ಫಿಲಿ. 1:27). ದೇವರು ಸುವಾರ್ತೆಯನ್ನು ದೇವದೂತರನ್ನು ನಂಬಿ ಕೊಡದೆ ಸಾಧಾರಣ ಮನುಷ್ಯರಾದ ನಿಮ್ಮನ್ನು ನಂಬಿ, ನಿಮ್ಮ ಕೈಗಳಲ್ಲಿ ಕೊಟ್ಟಿರುವನು. ನೀವು ಹೋಗಿ ಸರ್ವರಿಗೂ ಸುವಾರ್ತೆಯನ್ನು ಪ್ರಸಂಗಿಸಿರಿ. ಈ ಸುವಾರ್ತೆಯು ಕಲ್ವಾರಿ ಶಿಲುಬೆಯಲ್ಲಿ ರಕ್ತಕ್ರಯವನ್ನು ಕೊಟ್ಟು ಪಡೆದುಕೊಂಡ ಸುವಾರ್ತೆಯಾಗಿದೆ. ಅದು ಪಾಪದ ದಾಸತ್ವವನ್ನು ಮುರಿದು, ರಕ್ಷಣೆಯ ಸಂತೋಷವನ್ನು ತಂದುಕೊಡುವ ಸುವಾರ್ತೆಯಾಗಿದೆ. ಶಾಪದ ಕಟ್ಟುಗಳನ್ನು ಮುರಿದು ಆಶೀರ್ವಾದವನ್ನು ನೀಡುವದು ಈ ಸುವಾರ್ತೆ ಕರ್ತನ ಬರುವಿಕೆಯಲ್ಲಿ ನಿಮ್ಮನ್ನು ಮಹಿಮೆಯ ಮೇಲೆ ಮಹಿಮೆ ಪಡೆಯುವಂತೆ ಮಾಡುವದು "ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಇದು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ" (ರೋಮಾ.1:16). ಎಂದು ಅಪೊ.ಪೌಲನು ಬರೆಯುತ್ತಾನೆ. ಮೂರನೆಯದಾಗಿ ನೀವು ಪರಲೋಕ ರಾಜ್ಯಕ್ಕೆ ಯೋಗ್ಯರಾಗಿ ಕಾಣಲ್ಪಡಬೇಕು. "ಆತ್ಮದಲ್ಲಿ ಬಡವರಾಗಿರುವವರು ಧನ್ಯರು, ಪರಲೋಕ ರಾಜ್ಯವು ಅವರದು" (ಮತ್ತಾ. 5:3). ಎಂದು ಕರ್ತನು ಹೇಳಿರುವನು. ಆತನ ಸದ್ಗುಣಗಳನ್ನು ಧರಿಸಿಕೊಳ್ಳಿರಿ.

ದೇವಮಕ್ಕಳೇ, ಕರ್ತನು ನಿಮ್ಮನ್ನು ನೋಡಿ "ನನ್ನ ತಂದೆಯ ಆಶೀರ್ವಾದವನ್ನು ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾ. 25:34) ಎಂದು ಕರೆಯುತ್ತಿರುವನು".

*ನೆನಪಿಗೆ : "ರಾಜ್ಯವು ಪರಾತ್ಪರನ ಭಕ್ತರಿಗೆ ಲಭಿಸುವದು, ಅವರೇ ಅದನ್ನು ತಲತಲಾಂತರಕ್ಕೂ ಶಾಶ್ವತವಾಗಿ ಅನುಭವಿಸುವರು" (ದಾನಿ. 7:18).*



ಸೆಪ್ಟೆಂಬರ್ 21

## ಕರೆದಾತನು ಪರಿಶುದ್ಧನು!

ಬೆಳಿಗ್ಗೆ : ಪ್ರಸಂಗಿ 7,8,9
ಸಂಜೆ : 2 ಕೊರಿಂ. 13

ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ (1 ಪೇತ್ರ. 1:15).

ಅಪೊ. ಪೇತ್ರನು "ನಿಮ್ಮ ಎಲ್ಲಾ ನಡವಳಿಕೆಯಲ್ಲಿ" ಎಂದು ಬರೆಯುತ್ತಾನೆ. ನಿಮ್ಮ ನಡವಳಿಕೆಯಲ್ಲೆಲ್ಲಾ ನೀವು ಮಾದರಿಯಾಗಿರಬೇಕೆಂದು ಅಪೊ. ಪೌಲನು ಹೇಳುತ್ತಾನೆ (1ತಿಮೊ.4:12). ಕರ್ತನ ಕಣ್ಣುಗಳು ನಿಮ್ಮ ಒಂದೊಂದು ನಡಾವಳಿಯನ್ನು ತ್ರಾಸಿನಂತೆ ತೂಗಿನೋಡುವದು.

ನಿಮ್ಮ ನಡಾವಳಿಗಳನ್ನು ದೇವರು ಕ್ರಿಸ್ತನ ನಡಾವಳಿಗಳೊಂದಿಗೆ ಹೋಲಿಸಿನೋಡುವನು. ಆತನು ಪರಿಶುದ್ಧನಾಗಿರುವಂತೆ ನೀವೂ ಪರಿಶುದ್ಧರಾಗಿರಬೇಕೆಂದು ಬಯಸುತ್ತಾನೆ. ಒಂದು ವೇಳೆ ನೀವು ಈ ಲೋಕದವರೊಂದಿಗೆ ನಿಮ್ಮನ್ನು ಹೋಲಿಸಿ "ನಾನು ಅವರಿಗಿಂತ ನೀತಿವಂತನು, ಪರವಾಗಿಲ್ಲ" ಎಂದು ಸಂತೈಸಿಕೊಳ್ಳಬಹುದು. ಆದರೆ ದೇವರು ನಿಮ್ಮ ಜೀವಿತವನ್ನು ಲೋಕದ ಜನರೊಂದಿಗೆ ಹೋಲಿಸುವವನಲ್ಲ. ತನ್ನೊಂದಿಗೆ ಹೋಲಿಸುವವನು. ಯಾಕೆಂದರೆ, ನೀವು ಆತನ ಸಾರೂಪ್ಯದಲ್ಲಿ ಅಲ್ಲವಾ ಸೃಷ್ಟಿಸಲ್ಪಟ್ಟಿರುವಿರಿ! ಜನರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವಂತೆ ಅವರೊಳಗೆ ನಡೆದುಕೊಳ್ಳಿರಿ (1 ಪೇತ್ರ.2:12). "ಒಳ್ಳೆಯ ನಡತೆ" ಅಂದರೇನು? ನಿಮ್ಮ ಮಾತುಗಳು, ಕಾರ್ಯಗಳು, ಅನುದಿನದ ಜೀವಿತದಲ್ಲಿ ನೀವು ಜೀವಿಸುವ ರೀತಿ ಎಲ್ಲಾ ಸೇರಿಯೇ "ನಡತೆ" ಎಂದು ಕರೆಯಲ್ಪಡುವದು. ದೇವಮಕ್ಕಳ ನಡತೆ ಹೇಗಿರಬೇಕು? ಕೀರ್ತನೆಗಾರನು ಹೀಗೆ ಹೇಳುತ್ತಾನೆ "ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ, ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ, ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು" ಎಂದು (ಕೀರ್ತನೆ 1:1,2). ದೇವರ ಮಕ್ಕಳು ನಡೆಯಬೇಕಾದ ನಡತೆಯ ಕುರಿತು ಯೇಸುಕ್ರಿಸ್ತನು ಎರಡು ಮುಖ್ಯವಾದ ಆಜ್ಞೆಗಳನ್ನು ಕೊಟ್ಟನು. ಮೊದಲನೆಯದು ನಿಮ್ಮ ಎಲ್ಲಾ ನಡಾವಳಿಕೆಗಳಿಂದ ಕರ್ತನಲ್ಲಿ ಪ್ರೀತಿಯುಳ್ಳವರಾಗಿರಬೇಕು. ಪೂರ್ಣ ಪ್ರೀತಿಯಿಂದ ಪೂರ್ಣ ಹೃದಯದಿಂದ ಪೂರ್ಣ ಪ್ರಾಣದಿಂದ ಆತನನ್ನು ಪ್ರೀತಿಸಬೇಕು. ಎರಡನೆಯದು, ನಿಮ್ಮನ್ನು ನೀವು ಪ್ರೀತಿಸಿದಂತೆ ಇತರರನ್ನು ಪ್ರೀತಿಸಿರಿ ಎಂಬುದು.

ದೇವಮಕ್ಕಳೇ, ನಿಮ್ಮ ನಡತೆಯಲ್ಲಿ ಪರಿಶುದ್ದತೆಯೂ, ದೈವೀಕ ಪ್ರೀತಿಯೂ ಇರಲಿ. ನಿಮ್ಮ ಪ್ರೀತಿ ಕಪಟವಿಲ್ಲದ, ನಿಸ್ವಾರ್ಥವಾದ, ತ್ಯಾಗ ಪೂರಿತವಾದ ಪ್ರೀತಿಯಾಗಿರಲಿ. ಎಲ್ಲಾದರಲ್ಲಿಯೂ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಿರಿ.

*ನೆನಪಿಗೆ : ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುದೇ ನಾನು ಕೊಡುವ ಆಜ್ಞೆಯಾಗಿದೆ (ಯೋಹಾ. 15:12).*

ಸೆಪ್ಟೆಂಬರ್ 22

# ಕರೆಯುವ ದೇವರು!

ಬೆಳಿಗ್ಗೆ : ಪ್ರಸಂಗಿ 10,11,12
ಸಂಜೆ : ಗಲಾ 1

"ಇಲ್ಲದ್ದನ್ನು ಇರುವದಾಗಿ ಕರೆಯುವಂಥ ದೇವರು" (ರೋಮಾ. 4:17).

ನಂಬಿಕೆ ಎನ್ನುವದು ಇಲ್ಲದವುಗಳನ್ನು ಇರುವಂತೆ ಕರೆಯುವದು ಶೂನ್ಯದಿಂದ ಎಲ್ಲವನ್ನೂ ನಿರ್ಮಿಸುವದೇ "ಸೃಷ್ಟಿ". ನಮ್ಮ ದೇವರು ಇಲ್ಲದವುಗಳನ್ನು ಇರುವಂತೆ ಕರೆಯುವಾತನು. ನೀವು ತಾಯಿಯ ಗರ್ಭದಲ್ಲಿ ಸೃಷ್ಟಿಸಲ್ಪಡುವ ಮೊದಲೇ ನಿಮ್ಮನ್ನು ಆರಿಸಿಕೊಂಡು ಕರೆದಿರುವನು.

ಒಂದು ಸಾರಿ ಶಿಲ್ಪಿಯಾದ ಮೈಕೆಲ್ ಏಂಜಲೋ ತನ್ನ ಸ್ನೇಹಿತನೊಂದಿಗೆ ಒಂದು ಕಾಡಿನ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದನು. ಎದುರಿನಲ್ಲಿ ಒಂದು ಕಪ್ಪು ಗುಡ್ಡ ಕಾಣಿಸಿತು. ಅದನ್ನು ಕಂಡ ಕೂಡಲೆ, ಮೈಕೆಲ್ ಏಂಜಲೋ ತನ್ನ ಸ್ನೇಹಿತನನ್ನು ನೋಡಿ, "ಆ ದೇವದೂತನನ್ನು ನೋಡು, ಎಷ್ಟು ಸುಂದರವಾಗಿರುವನು" ಅಂದನು. ಆ ಸ್ನೇಹಿತನು ಆ ಗುಡ್ಡವನ್ನು ಮೇಲಿನಿಂದ ಕೆಳಗಿನವರೆಗೂ ನೋಡಿದನು. ಅವನಿಗೆ ಅಲ್ಲಿ ಯಾವ ದೇವದೂತನೂ ಕಾಣಿಸಲಿಲ್ಲ. ಆ ಸ್ನೇಹಿತನು ವಿಶ್ರಾಂತಿ ತೆಗೆದುಕೊಳ್ಳಲು ಹೋದ ಸಮಯದಲ್ಲಿ ಮೈಕೆಲ್ ಏಂಜಲೋ ಆ ಗುಡ್ಡದ ಬಳಿ ಹೋಗಿ ತನ್ನ ಉಳಿಯಿಂದಲೂ, ಸುತ್ತಿಗೆಯಿಂದಲೂ ಒಂದು ಸುಂದರವಾದ ದೇವದೂತನನ್ನು ಕೆತ್ತಿಬಿಟ್ಟನು. ವಿಶ್ರಾಂತಿ ತೆಗೆದುಕೊಂಡು ಬಂದ ಸ್ನೇಹಿತನು ಈಗ ಆ ಗುಡ್ಡ ಸುಂದರವಾದ ದೇವದೂತನಾಗಿ ನಿಂತಿದ್ದನ್ನು ಕಂಡು ಆಶ್ಚರ್ಯಚಕಿತನಾದನು. ಒಬ್ಬ ಶಿಲ್ಪಿಯಿಂದ ಬರೀ ಗುಡ್ಡವನ್ನು ದೇವದೂತನಂತೆ ಕಾಣಲು ಸಾಧ್ಯ. ಒಬ್ಬ ಬಡಗಿಯಿಂದ ಒಂದು ಮರದ ತುಂಡನ್ನು ಮೇಜು ಕುರ್ಚಿಯಾಗಿ ಕಾಣಲು ಸಾಧ್ಯ. ಹಾಗೆಯೇ ದೇವರು ಶೂನ್ಯವನ್ನೂ, ಇರುಳನ್ನೂ ಸುಂದರವಾದ ಪ್ರಪಂಚವಾಗಿ ಕಾಣಲು ಸಾಧ್ಯವಾಯಿತು. ಒಂದು ದಿನ ಮಗುವಿಲ್ಲದೆ ಬರಿದಾಗಿದ್ದ ಅಬ್ರಹಾಮನನ್ನು ಜನಾಂಗಗಳ ತಂದೆಯಾಗಿ ವಿಶ್ವಾಸದ ಸಂತತಿಯ ತಂದೆಯಾಗಿ ಕಂಡನು. ಹಾಗೆಯೇ ಅಬ್ರಹಾಮನನ್ನು ಆಶೀರ್ವದಿಸಲು ಶಕ್ತನಾಗಿದ್ದನು.

ದೇವಮಕ್ಕಳೇ, ಆ ದೇವರು ನಿಮ್ಮ ದೇವರೂ ಆಗಿರುವನು. ನಿಮ್ಮ ಬಡತನ ಕೊರತೆ, ಸಾಲದ ತೊಂದರೆಗಳ ಮಧ್ಯದಲ್ಲಿ ಆತನು ನಿಮ್ಮನ್ನು ಐಶ್ವರ್ಯವಂತರನ್ನಾಗಿ ಕಾಣುವನು. ಹಾಗೆಯೇ ಆಶೀರ್ವದಿಸುವನು. ನೀವು ಅನೇಕರಿಗೆ ಸಾಲ ಕೊಡುವಿರೇ ಹೊರತು ಸಾಲ ತೆಗೆದುಕೊಳ್ಳುವದಿಲ್ಲ ಎಂಬುದು ಆತನ ವಾಗ್ದಾನವಾಗಿದೆ. ದೇವರು ಶೂನ್ಯದಿಂದ ಸಮಸ್ತ ಸೃಷ್ಟಿಯನ್ನೂ ಉಂಟುಮಾಡಿದ್ದು ಎಷ್ಟು ಸತ್ಯವೋ, ನಿಮ್ಮನ್ನು ಪರಿಶುದ್ಧರನ್ನಾಗಿ ನೀತಿವಂತರನ್ನಾಗಿ ಶುದ್ಧೀಕರಿಸಲ್ಪಟ್ಟವರಾಗಿ ಪರಲೋಕಕ್ಕೆ ಯೋಗ್ಯರನ್ನಾಗಿ ಆತನು ನಿಮ್ಮನ್ನು ಕಾಣುವದು ಅಷ್ಟೇ ಸತ್ಯ. ಆತನು ಅದೇ ರೀತಿ ನಿಮ್ಮನ್ನು ಆಶೀರ್ವದಿಸಲು ಶಕ್ತನು.

*ನೆನಪಿಗೆ : ಆತನು ಶೂನ್ಯದ ಮೇಲೆ ಆಕಾಶದ ಉತ್ತರ ದಿಕ್ಕನ್ನು ವಿಸ್ತರಿಸಿ ಭೂಲೋಕವನ್ನು ಯಾವ ಆಧಾರವೂ ಇಲ್ಲದೆ ತೂಗುಹಾಕಿದ್ದಾನೆ. (ಯೋಬ. 26:7).*



ಸೆಪ್ಟೆಂಬರ್ 23

# ಕರೆಯುವಿಕೆಯಿಂದ!

ಬೆಳಿಗ್ಗೆ : ಪರಮಗೀತ 1,2,3
ಸಂಜೆ : ಗಲಾ 2

ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ (1ಕೊರಿಂ.10:12).

ಅನೇಕರು ದೇವರು ಕರೆದ ಕರೆಯಲ್ಲಿ ನೆಲೆಯಾಗಿ ನಿಲ್ಲುವದಿಲ್ಲ. ಕಾಲಾನಂತರ ಕರ್ತನ ಶ್ರೇಷ್ಠವಾದ ಕರೆಯನ್ನು ತಾತ್ಸಾರ ಮಾಡಿ, ತಮ್ಮ ಮನಸ್ಸಿಗೆ ಬಂದಂತೆ ನಡೆಯಲಾರಂಭಿಸಿಬಿಡುವರು. ಇನ್ನು ಕೆಲವರು ತಾವು ನೆಲೆಯಾಗಿ ನಿಂತಿರುವೆವು ಎಂಬ ಹೆಮ್ಮೆಯಿಂದ ಬೀಗುವರು. ಇದು ಇನ್ನೂ ಅಪಾಯಕಾರಿಯಾದದ್ದು. ನಿಂತಿದ್ದೇನೆ ಎಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರುವದು ಬಹು ಅಗತ್ಯವಾದದ್ದು.

ಸತ್ಯವೇದವು ಎಚ್ಚರಿಕೆಗಾಗಿ ಒಬ್ಬ ಪ್ರಧಾನ ದೇವದೂತನನ್ನು ನಮ್ಮ ಮುಂದೆ ನಿಲ್ಲಿಸಿರುವನು. ಅವನು ದೇವರ ಪರಿಶುದ್ಧ ಪರ್ವತದಲ್ಲಿ ಇದ್ದವನು. ಅವನು ಕಾಪಾಡುವ ಅಭಿಷೇಕ ಹೊಂದಿದ ಕೆರೂಬಿ ಕೆಂಡದ ಮಳೆಯಲ್ಲಿ ವಿಹಾರ ಮಾಡುತ್ತಿದ್ದವನು. ಅವನು ದೇವರ ಹಸ್ತದಲ್ಲಿ ಒಂದು ಅದ್ಭುತ ಸೃಷ್ಟಿಯಾಗಿದ್ದವನು. ದೇವರನ್ನು ಹಗಲಿರುಳು ಸ್ತುತಿಸುತ್ತಿದ್ದವನು. ಆದರೆ ಅವನು ತನ್ನ ಕರೆಯನ್ನು ಆರಿಸಿಕೊಳ್ಳುವಿಕೆಯನ್ನು ಕಾಪಾಡಿಕೊಳ್ಳಲಿಲ್ಲ. ಹೆಮ್ಮೆಗೆ ಸ್ಥಳ ಕೊಟ್ಟು ಎಡವಿದನು (ಯೆಹೆ. 28:14). "ನಾನು ಆಕಾಶಕ್ಕೆ ಹತ್ತಿ ಉತ್ತರ ದಿಕ್ಕಿನ ಕಟ್ಟಕಡೆಯಿರುವ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಆಸೀನನಾಗುವೆನು; ಉನ್ನತ ಮೇಘ ಮಂಡಲದ ಮೇಲೆ ಏರಿ ಉನ್ನತೋನ್ನತನಿಗೆ ಸರಿಸಮಾನನಾಗುವೆನು" (ಯೆಶಾ.14:13,14) ಎಂದು ಹೇಳಿದ್ದರಿಂದ ಅವನು ಕೆಳಗೆ ತಳ್ಳಲ್ಪಟ್ಟನು. ದೇವದೂತನಾಗಿದ್ದವನು ಪಾತಾಳದಲ್ಲಿ ಸೈತಾನನಾಗಿ ತಳ್ಳಲ್ಪಟ್ಟನು. ಆದಕಾರಣ, ನಿಮ್ಮ ಕರೆಯುವಿಕೆಯನ್ನು ಆರಿಸಿಕೊಳ್ಳುವಿಕೆಯನ್ನು ಕಾಪಾಡಿಕೊಳ್ಳಿರಿ. ಯೇಸುಕ್ರಿಸ್ತನು ಸಾಯುವದಕ್ಕೆ ಮೊದಲು ತನ್ನ ಶಿಷ್ಯರನ್ನು ನೋಡಿ, ಈ ರಾತ್ರಿ ನೀವೆಲ್ಲರೂ ನನ್ನ ವಿಷಯದಲ್ಲಿ ದಿಗಿಲು ಪಟ್ಟು ಹಿಂಜರಿಯುವಿರಿ. ಕುರುಬನನ್ನು ಹೊಡೆಯುವೆನು, ಹಿಂಡಿನ ಕುರಿಗಳು ಚದರಿಹೋಗುವವು ಎಂದು ಬರೆಯಲ್ಪಟ್ಟಿದೆಯಲ್ಲಾ (ಮತ್ತಾ. 26:31) ಎಂದು ಹೇಳಿದನು. ಆಗ ಪೇತ್ರನು ಎಲ್ಲರೂ ಓಡಿಹೋದರೂ ನಾನು ನಿನ್ನೊಂದಿಗೆ ಇರುವೆನು ಅಂದನು. ಆದರೆ ಆ ರಾತ್ರಿಯೇ ಅವನು ಕ್ರಿಸ್ತನನ್ನು ಅಲ್ಲಗಳೆದನು ಶಪಿಸಿದನು ಆಣೆ ಇಟ್ಟನು ಎಡವಿಬಿದ್ದನು.

ದೇವಮಕ್ಕಳೇ, ಅನೇಕ ಆತ್ಮೀಕ ಅನುಭವಗಳನ್ನು ನೀವು ಹೊಂದಿರಬಹುದು. ಆದರೆ ಹೆಮ್ಮೆಗೆ ಅವಕಾಶ ಕೊಡದಿರಿ. ಆತ್ಮೀಕ ಹೆಮ್ಮೆ ಒಬ್ಬ ವಿಶ್ವಾಸಿಯ ಬೀಳುವಿಕೆಗೆ ಕಾರಣ. ನಿಮ್ಮ ಕರೆ ಹಾಗೂ ಆರಿಸಿಕೊಳ್ಳುವಿಕೆಯನ್ನು ಜೀವಾಂತ್ಯದವರೆಗೆ ಎಚ್ಚರದಿಂದ ಕಾಪಾಡಿಕೊಳ್ಳಿರಿ.

*ನೆನಪಿಗೆ : ದೇವರು ಜ್ಞಾನಿಗಳನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ. ದೇವರು ಬಲಿಷ್ಠರನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ. (1 ಕೊರಿಂ. 1:27).*

ಸೆಪ್ಟೆಂಬರ್ 24

## ಯಜ್ಞದ ಔತಣಕ್ಕೆ!

ಬೆಳಿಗ್ಗೆ : ಪರಮಗೀತ 4,5
ಸಂಜೆ : ಗಲಾ 3

ಯೆಹೋವನಿಗೋಸ್ಕರ ಯಜ್ಞ ಮಾಡುವದಕ್ಕೆ... ಇಷಯನನ್ನು ಅದಕ್ಕೆ ಕರೆ. ಆಮೇಲೆ ನೀನು ಮಾಡಬೇಕಾದದ್ದನ್ನು ನಾನೇ ತಿಳಿಸುತ್ತೇನೆ. ನಾನು ಯಾವನನ್ನು ತೋರಿಸುತ್ತೇನೋ ಅವನನ್ನು ನೀನು ಅಭಿಷೇಕಿಸು ಅಂದನು (1 ಸಮು. 16:2,3).

ಇಲ್ಲಿ ಒಂದು ದೊಡ್ಡ ಕರೆಯನ್ನು ದಾವೀದನ ತಂದೆ ಇಷಯನಿಗೆ ಕೊಡಲ್ಪಟ್ಟಿತು. ಪ್ರವಾದಿಯಾದ ಸಮುವೇಲನು ಇಷಯನ ಕುಟುಂಬದವರನ್ನು ತಾನು ಮಾಡಲಿರುವ ಯಜ್ಞದ ಔರಣಕ್ಕೆ ಆಹ್ವಾನಿಸಿದನು. ಅ ಯಜ್ಞದ ಔತಣದ ಹಿಂದೆ ಇಷಯನ ಮಗನಾದ ದಾವೀದನನ್ನು ಅರಸನನ್ನಾಗಿ ಅಭಿಷೇಕಿಸುವ ಕರೆಯೂ ಇತ್ತು.

ಕರ್ತನು ನಿಮ್ಮನ್ನು ಒಂದು ಯಜ್ಞದ ಔತಣಕ್ಕೆ ಕರೆಯುತ್ತಾನೆ. ಎಲ್ಲಾ ಯಜ್ಞಗಳಲ್ಲಿಯೂ ಶ್ರೇಷ್ಠವಾದ ಯಜ್ಞ, ಕಲ್ವಾರಿ ಶಿಲುಬೆಯಲ್ಲಿ ಯೇಸುಕ್ರಿಸ್ತನು ತನ್ನನ್ನು ನಮ್ಮೆಲ್ಲರ ಪಾಪಗಳ ಶಾಪಗಳ ನಿವಾರಣಾರ್ಥವಾಗಿ ಅರ್ಪಿಸಿದ ಯಜ್ಞ. ಈ ಯಜ್ಞದ ಔತಣಕ್ಕೆ ಕರ್ತನು ಈ ಭೂಮಿಯಲ್ಲಿರುವ ಎಲ್ಲಾ ಜನರನ್ನೂ ಕರೆಯುತ್ತಾನೆ. ಆ ಯಜ್ಞದ ಮೂಲಕ ಪಾಪಕ್ಷಮಾಪಣೆಯನ್ನೂ, ರಕ್ಷಣೆಯ ಸಂತೋಷವನ್ನು ಪಡೆಯಲು ಸಾಧ್ಯ. ಯೇಸುಕ್ರಿಸ್ತನ ರಕ್ತದಿಂದ ತೊಳೆಯಲ್ಪಡುವಾಗ ನೀವು ದೇವರ ಮಕ್ಕಳಾಗುವ ಅಧಿಕಾರ ನೀಡುವನು. ಪರಲೋಕದ ಕುಟುಂಬದಲ್ಲಿ ಹುಟ್ಟುವದು, ರಾಜಾಧಿರಾಜನು ಕರ್ತಾಧಿಕರ್ತನಾದಾತನನ್ನು ಅಪ್ಪಾ, ತಂದೆಯೇ ಎಂದು ಕರೆಯುವ ಪುತ್ರಸ್ವೀಕಾರ ಆತ್ಮವನ್ನು ಪಡೆದುಕೊಳ್ಳುವಿರಿ. ಇಲ್ಲಿ ಯಜ್ಞ ಮಾತ್ರವಲ್ಲ ಒಂದು ಔತಣವಿರುವದು. ಯೇಸುಕ್ರಿಸ್ತನು ತನ್ನ ದೇಹವನ್ನೇ ರೊಟ್ಟಿಯಾಗಿ ತನ್ನ ರಕ್ತವನ್ನೇ ದ್ರಾಕ್ಷಾರಸವಾಗಿ ತನ್ನ ಮಕ್ಕಳಿಗೆ ಕೊಟ್ಟು ಔತಣಕ್ಕೆ ಆಹ್ವಾನಿಸುತ್ತಾನೆ. ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯಜೀವವನ್ನು ಹೊಂದಿದ್ದಾನೆ (ಯೋಹಾ. 6:54) ಎಂದು ವಾಗ್ದಾನ ಮಾಡಿರುವನು. ಕರ್ತನು ಇಷಯನ ಕುಟುಂಬವನ್ನು ಯಜ್ಞದ ಔತಣಕ್ಕೆ ಆಹ್ವಾನಿಸಿದ್ದು ಮಾತ್ರವಲ್ಲ, ಮುಂದೆ ಕರ್ತನು ದಾವೀದನಿಗೆ ಒಂದು ಮಹಾ ದೊಡ್ಡ ಕರೆಯನ್ನು ಕೊಟ್ಟನು. ದಾವೀದನನ್ನು ಅಭಿಷೇಕಿಸುವಂತೆ ಸಮುವೇಲನಿಗೆ ಹೇಳಿದನು. ಅದು ಅರಸುತನದ ಅಭಿಷೇಕವಾಗಿತ್ತು. ನೀವೂ ಪವಿತ್ರಾತ್ಮನ ಅಭಿಷೇಕ ಹೊಂದಿದಾಗ ಕರ್ತನು ನಿಮ್ಮನ್ನು ಅರಸರನ್ನಾಗಿಯೂ ಯಾಜಕರನ್ನಾಗಿಯೂ ಕಾಣುವನು (ಪ್ರಕ.1:6).

ದೇವಮಕ್ಕಳೇ, ನಿಮ್ಮ ಕರೆ ದೊಡ್ಡದು, ಶ್ರೇಷ್ಠವಾದದ್ದು. ಆ ಕರೆಗೆ ನೀವು ಯೋಗ್ಯರಾಗಿ ಕಾಣಲ್ಪಡಬೇಕು. ಆ ಕರೆಯೊಂದಿಗೆ ಒಂದು ಬಾಧ್ಯತೆ ಇರುವದು. ಅದು ಅರಸರಿಗೆ ಯಾಜಕರಿಗೆ ಕೊಡುವ ಬಾಧ್ಯತೆ, ಅಧಿಕಾರ. ಆದ್ದರಿಂದ ನೀವು ಎಂದಿಗೂ ಕೀಳರಿಮೆಗೆ ನಿಮ್ಮನ್ನು ಒಪ್ಪಿಸಿಕೊಡದಿರಿ. ಕರ್ತನ ಕರೆಯ ಮಾರ್ಗದಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳಿರಿ.

*ನೆನಪಿಗೆ : ನೀವಾದರೋ.... ದೇವರಾದುಕೊಂಡ ಜನಾಂಗವೂ, ರಾಜವಂಶಸ್ಥರಾದ ಯಾಜಕರೂ, ಮೀಸಲಾದ ಜನವೂ, ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ (1 ಪೇತ್ರ. 2:9).*



ಸೆಪ್ಟೆಂಬರ್ 25

## ಶ್ರೇಷ್ಠವಾದ ಕರೆ!

ಬೆಳಿಗ್ಗೆ : ಪರಮಗೀತ 6,7,8
ಸಂಜೆ : ಗಲಾ 4

ಆದುದರ್ರಿಂದ ದೇವಜನರಾದ ಸಹೋದರರೇ, ಪರಲೋಕ ಸ್ವಾಸ್ತ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ... (ಇಬ್ರಿ. 3:1).

ಪ್ರಾಪಂಚಿಕ ರೀತಿಯ ಕರೆಯೂ ಉಂಟು, ಆತ್ಮೀಕ ರೀತಿಯ ಕರೆಯೂ ಉಂಟು. ಪರಲೋಕ ಸ್ವಾಸ್ತ್ಯದ ಕರೆಯೂ ಉಂಟು. ಭೂಮಿಯಲ್ಲಿ ನೀವು ಅಪೊಸ್ತಲರಾಗಿ ಇಲ್ಲವೇ ಸೌವಾರ್ತಿಕರಾಗಿ, ಕುರುಬರಾಗಿ ಕರೆಯಲ್ಪಟ್ಟಿರಬಹುದು. ಅದೇ ವೇಳೆಯಲ್ಲಿ ಕರ್ತನು ನಿಮ್ಮನ್ನು ಪರಲೋಕದ ಸ್ವಾಸ್ತ್ಯಕ್ಕಾಗಿಯೂ ಕರೆದಿರುವನು. ಅದು ನಿತ್ಯನಿತ್ಯವಾದ ಕರೆಯಾಗಿದೆ.

16ನೇ ಶತಮಾನದಲ್ಲಿ ವಿಕ್ಟೋರಿಯಾ ಮಹಾರಾಣಿ ಇಂಗ್ಲೆಂಡ್ ದೇಶವನ್ನು ಆಳುತ್ತಿದ್ದಳು. ಆಕೆಯ ತಂದೆ ತಾಯಿಗಳು ಕರ್ತನನ್ನು ಪ್ರೀತಿಸುವವರಾಗಿದ್ದರು. ಆರಾಧಿಸುತ್ತಿದ್ದರು. ಅರಸು ಮನೆತನದ ವಿಕ್ಟೋರಿಯಾ ಚಿಕ್ಕವಳಾಗಿದ್ದಾಗ ಎಲ್ಲಾ ಮಕ್ಕಳೂ ಓದುವ ಒಂದು ಸಾಮಾನ್ಯ ಶಾಲೆಯಲ್ಲಿ ಕಲಿಯುತ್ತಿದ್ದಳು. ಅವಳು ಅರಸು ಮನೆತನದವಳೆಂದೂ ಅವಳು ರಾಣಿಯಾಗುವವಳೆಂದೂ, ಅವಳಿಗೆ ತಿಳಿಸಬಾರದು, ಅವಳನ್ನು ಇತರ ಮಕ್ಕಳಂತೆ ಕಾಣಬೇಕು. ಅವಳನ್ನು ಎಲ್ಲರಂತೆ ನಡೆಸಿಕೊಂಡು ಉತ್ತಮ ಶಿಕ್ಷಣ ನೀಡಬೇಕೆಂದು ಅವಳ ತಂದೆ ತಾಯಿಗಳು ಆ ಶಾಲೆಯ ಉಪಾಧ್ಯಾಯರುಗಳಿಗೆ ತಿಳಿಸಿದ್ದರು. ಒಂದು ದಿನ ಚರಿತ್ರೆಯ ವಿಷಯವನ್ನು ಬೋಧಿಸುತ್ತಿದ್ದ ಉಪಾಧ್ಯಾಯರು ವಿಕ್ಟೋರಿಯಾಳನ್ನು ನೋಡಿ, "ವಿಕ್ಟೋರಿಯಾ, ಇನ್ನು ಮುಂದೆ ಈ ದೇಶದ ರಾಣಿ ನೀನೇ ಎಂದು ಹೇಳಿದರೆ, ನೀನು ಹೇಗೆ ನಡೆದುಕೊಳ್ಳುತ್ತೀ? ಎಂದು ಕೇಳಿದರು. ಅದಕ್ಕೆ ವಿಕ್ಟೋರಿಯಾ, ನಗುತ್ತಲೇ ನಾನು ಈಗಿನಿಂದಲೇ ರಾಣಿಯಂತೆ ಮಾತನಾಡುತ್ತೇನೆ, ನಡೆದುಕೊಳ್ಳುತ್ತೇನೆ, ರಾಣಿಯಂತೆ ವಸ್ತ್ರಗಳನ್ನು ಧರಿಸುವೆನು" ಎಂದು ಹೇಳಿದಳಂತೆ. ಪ್ರಿಯರೇ, ವಿಕ್ಟೋರಿಯಾ ರಾಣಿಗಿಂತ ಶ್ರೇಷ್ಠವಾದ ಕರೆಯನ್ನು ಕರ್ತನು ನಿಮಗೆ ಕೊಟ್ಟಿರುವನು. ನೀವು ರಾಜಾಧಿರಾಜನ ಮಕ್ಕಳಾಗಿರುವಿರಿ. ಒಂದು ದಿನ ಕ್ರಿಸ್ತನೊಂದಿಗೆ ಈ ಭೂಮಿಯನ್ನು ಆಳಲು ಕರೆಯಲ್ಪಟ್ಟಿರುವಿರಿ. ಆದ್ದರಿಂದ ನಿಮ್ಮ ಮಾತುಗಳನ್ನು ನಡಾವಳಿಗಳನ್ನು ಮಾರ್ಪಡಿಸಿಕೊಳ್ಳಿರಿ.

ದೇವಮಕ್ಕಳೇ, ಒಂದು ವೇಳೆ ನಿಮ್ಮ ಹಳೆಯ ಜೀವಿತ ಕಸದಂತಿದ್ದಿರಬಹುದು. ಕೆಸರಿನಲ್ಲಿ ಸಿಕ್ಕಿಕೊಂಡಿದ್ದಿರಬಹುದು. ನಿಮ್ಮ ಮನಬಂದಂತೆ ಜೀವಿಸಿ ಕರ್ತನ ಕೋಪಕ್ಕೆ ತುತ್ತಾಗಿರಬಹುದು. ಆದರೆ ಕರ್ತನು ನಿಮ್ಮನ್ನು ಆ ಸ್ಥಿತಿಯಿಂದ ಮೇಲಕ್ಕೆ ಎತ್ತಿರುವನು. ತನ್ನ ಮಹಿಮೆಗಾಗಿ ನಿಮ್ಮನ್ನು ಆರಿಸಿಕೊಂಡಿರುವನು. ಆದ್ದರಿಂದ ಕರ್ತನು ಕರೆದಿರುವ ಕರೆಗೆ ಯೋಗ್ಯರಾಗಿ ನಡೆದುಕೊಂಡು ಪರಲೋಕದ ಬಾಧ್ಯತೆಯನ್ನು ಹೊಂದಿಕೊಳ್ಳಿರಿ.

*ನೆನಪಿಗೆ : ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ (ಫಿಲಿಪ್ಪಿ. 3:14).*

ಸೆಪ್ಟೆಂಬರ್ 26

# ಪರಲೋಕದ ಕರೆ!

ಬೆಳಿಗ್ಗೆ : ಯೆಶಾಯ 1,2
ಸಂಜೆ : ಗಲಾ 5

ಪರಲೋಕದಲ್ಲಿ ತೆರೆದಿದ್ದ ಬಾಗಿಲು ಕಾಣಿಸಿತು.... ಇಲ್ಲಿಗೆ ಏರಿಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ಎಂದು ವಾಣಿ ಹೇಳಿತು (ಪ್ರಕ. 4:1).

ಪರಲೋಕದಲ್ಲಿ ನಮ್ಮ ಪರಮ ತಂದೆ ವಾಸಮಾಡುವನು. ಸಾವಿರ, ಹದಿನಾರು ಸಾವಿರ ದೇವದೂತರು, ಸೆರಾಫಿಗಳು ಕೆರೂಬಿಯರು ಹಗಲಿರುಳು ಕರ್ತನನ್ನು ಹಾಡಿ ಸ್ತುತಿಸಿ, ಆರಾಧಿಸುತ್ತಿರುವರು. ಅಪೊ. ಯೋಹಾನನು ಪತ್ಮೋಸ್ ದ್ವೀಪದಲ್ಲಿ ಸೆರೆಯಲ್ಲಿ ಇದ್ದಾಗ ಆತನ ಆಂತರ್ಯ ಕರ್ತನೊಂದಿಗೆ ಮಾತನಾಡಲು ಹಾತೊರೆಯುತ್ತಿತ್ತು. ಆಗ ಪರಲೋಕದ ಬಾಗಿಲು ತೆರೆದಿದ್ದನ್ನು ಕಂಡನು. ಮಾತ್ರವಲ್ಲ ಪರಲೋಕದ ತಂದೆ ಪ್ರೀತಿಯಿಂದ ಅವನನ್ನು ನೋಡಿ ಇಲ್ಲಿಗೆ ಏರಿಬಾ ಎಂದು ಕರೆದನು. ಎಷ್ಟು ಶ್ರೇಷ್ಠವಾದ ಕರೆ!

ಪ್ರಿಯರೇ, ನಿಮ್ಮ ಕಿವಿಗಳು ಯಾವಾಗಲೂ ಕರ್ತನ ಶಬ್ದವನ್ನು ಕೇಳಲು ತೆರೆದಿರಲಿ. ಹನೋಕನು ದೇವರ ಸ್ವರವನ್ನು ಕೇಳಿ, ದೇವರೊಂದಿಗೆ ಸಂಚರಿಸಿದನು (ಆದಿ. 5:24). ನೋಹನು ದೇವರ ಸ್ವರಕ್ಕೆ ಕಿವಿಗೊಟ್ಟು, ತನ್ನ ಕುಟುಂಬವನ್ನು ರಕ್ಷಿಸಲು ನಾವೆಯನ್ನು ಕಟ್ಟಿದನು (ಆದಿ. 6:14). ಮೋಶೆಯು ದೇವರೊಂದಿಗೆ ಮುಖಾಮುಖಿಯಾಗಿ ಮಾತನಾಡಿದನು (ವಿಮೋ. 33:11). 'ಏರಿಬಾ' ಎಂದು ಕರ್ತನು ನಿಮ್ಮನ್ನು ಕರೆಯುತ್ತಲೇ ಇರುವನು. ಆದ್ದರಿಂದ ಇರುವಲ್ಲಿಯೇ ಇರಬೇಡಿರಿ. ಆತ್ಮೀಕ ಜೀವಿತದಲ್ಲಿ ಪ್ರಾರ್ಥನಾ ಜೀವಿತದಲ್ಲಿ ಮೇಲೆ ಮೇಲೆ ಏರಿರಿ. ಪ್ರತಿದಿನವು ಮೇಲೆ ಮೇಲೆ ಏರುವ ಅನುಭವ ನಿಮ್ಮದಾಗಲಿ. ದೇವರ ಪ್ರೀತಿಯಲ್ಲಿ ಮೇಲಕ್ಕೆ ಏರಿರಿ!! ಅಭಿಷೇಕದಲ್ಲಿ ಉನ್ನತಕ್ಕೆ ಏರಿಬಾ ಪರಿಶುದ್ಧತೆಯಲ್ಲಿ ಏರಿಬಾ! ಎಂದು ಕರ್ತನು ನಿಮ್ಮನ್ನು ಕರೆಯುತ್ತಲೇ ಇರುವನು. ಏರಿಬಾ! ಎಂದು ಯೋಹಾನನನ್ನು ಕರೆದ ದೇವರು ದೇವರಾತ್ಮನನ್ನು ಕಳುಹಿಸಿ ಅವನನ್ನು ಆತ್ಮಪರವಶನನ್ನಾಗಿಸಿದನು (ಪ್ರಕ. 4:1,2). ಉನ್ನತಾಕಾಶದಲ್ಲಿನ ಪರಲೋಕದ ಬಾಗಿಲಿನ ಮೂಲಕ ನಿತ್ಯರಾಜ್ಯಕ್ಕೆ ಕರೆದೊಯ್ದನು.

ದೇವಮಕ್ಕಳೇ, ಕ್ರಿಸ್ತಯೇಸು ಪರಲೋಕಕ್ಕೆ ಏರಿಹೋಗಿ ನಿಮಗಾಗಿ ಪರಲೋಕದ ಬಾಗಿಲನ್ನು ತೆರೆದಿಟ್ಟಿರುವನು. ಪರಲೋಕದ ಬಾಗಿಲು ಯಾವದು? "ನಾನೇ ಆ ಬಾಗಿಲು ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು ಒಳಗೆ ಹೋಗುವನು ಹೊರಗೆ ಬರುವನು. ಮೇವನ್ನು ಕಂಡುಕೊಳ್ಳುವನು (ಯೋಹಾ.10:9) ಎಂದು ಕ್ರಿಸ್ತನು ಹೇಳಿರುವನಲ್ಲವೇ? ಹೌದು ಯೇಸುಕ್ರಿಸ್ತನೆಂಬ ಬಾಗಿಲಿನ ಮೂಲಕ ಪ್ರವೇಶಿಸುವಾಗ ನೀವು ಪರಲೋಕಕ್ಕೆ ಸುಲಭವಾಗಿ ಹೋಗಿ ಸೇರುವಿರಿ.

*ನೆನಪಿಗೆ : "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾ. 14:6).*



ಸೆಪ್ಟೆಂಬರ್ 27

# ಮಹಿಮೆಗಾಗಿ ಕರೆದನು!

ಬೆಳಿಗ್ಗೆ : ಯೆಶಾಯ 3,4
ಸಂಜೆ : ಗಲಾ 6

"ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕ ನಿಮ್ಮನ್ನು ಕರೆದನು" (2 ಥೆಸ. 2:14).

ಸುವಾರ್ತೆಯ ಮೂಲಕ ಕರ್ತನು ನಿಮ್ಮನ್ನು ರಕ್ಷಣೆಗೆ ಕರೆದನು. ದೇವರ ಪ್ರಭಾವವನ್ನು ಅಥವಾ ಮಹಿಮೆಯನ್ನು ಸಂಪಾದಿಸಬೇಕೆಂದು ಕರೆದನು. ಸ್ನಾನಿಕನಾದ ಯೋಹಾನನಾದರೂ ಸರಿ, ಕ್ರಿಸ್ತನಾದರೂ ಸರಿ, ಶಿಷ್ಯರಾದರೂ ಸರಿ ದೇವರ ಕಡೆಗೆ ತಿರುಗಿಕೊಳ್ಳಿರಿ. ಪರಲೋಕ ರಾಜ್ಯವು ಸಮೀಪಿಸಿತು ಎಂದು ಹೇಳಿ, ಸುವಾರ್ತೆಯನ್ನು ಸಾರಿದರು. ಆ ಸುವಾರ್ತೆಯನ್ನು ನಂಬುವವರು ರಕ್ಷಿಸಲ್ಪಟ್ಟರು. ದೀಕ್ಷಾಸ್ನಾನ ಪಡೆದರು. ಪವಿತ್ರಾತ್ಮನನ್ನು ಹೊಂದಿದರು. ಅವರ ಸ್ವಭಾವಗಳು ಗುಣಾತಿಶಯಗಳು ಮಾರ್ಪಟ್ಟವು. ಉನ್ನತನಾದ ದೇವರ ಸೇವಕರಾಗಿ ಉತ್ತಮ ಮನುಷ್ಯರಾಗಿ ತಲೆ ಎತ್ತಿ ನಡೆದರು.

ನಮ್ಮ ದೇಶ ಸ್ವಾತಂತ್ರ್ಯಗಳಿಸಿದಾಗ, ಎಲ್ಲರೂ ಈ ದೇಶದ ಪ್ರಜೆಗಳೆಂದು ಕರೆಯಲ್ಪಟ್ಟರು. ಅವರಿಗೆ ಮಾತನಾಡುವ ಹಕ್ಕು ಎಂಎಲ್‌ಎ, ಎಂಪಿಗಳಾಗಿ ಮಂತ್ರಿಗಳಾಗಿ ದೇಶವನ್ನು ಆಳುವ ಹಕ್ಕು ದೊರೆಯಿತು. ಹೀಗೆ ಅಧಿಕಾರಗಳನ್ನು ಪಡೆದವರು ಇನ್ನೂ ಲುಂಗಿ ಸುತ್ತಿಕೊಂಡು, ಬಾಯಿಗೆ ಬಂದಂತೆ ಮಾತಾಡಿಕೊಂಡಿರಲು ಸಾಧ್ಯವಿಲ್ಲ. ಅವನ ನಡೆ, ನುಡಿ, ವಸ್ತ್ರ, ಭಾವನೆಗಳು ಮಾರ್ಪಡಬೇಕು. ದೇಶದ ಕಾನೂನು ಕಟ್ಟಳೆಗಳನ್ನು ರೂಪಿಸುವವನು, ಅನುಸರಿಸುವವನು ಎಂಬ ಜವಾಬ್ದಾರಿಕೆ ಬರಬೇಕು. ಅದರಂತೆಯೇ ಕರ್ತನ ಕರೆಯುವಿಕೆಯೊಂದಿಗೆ ನಿಮಗೆ ಬಾಧ್ಯತೆ, ಅಧಿಕಾರ, ಜವಾಬ್ದಾರಿ ಬರುವದು. ಕರ್ತವ್ಯ, ಕಟ್ಟುಪಾಡು, ಗಣ್ಯತೆ ಇವುಗಳನ್ನು ನಿಮ್ಮಿಂದ ಕರ್ತನು ನಿರೀಕ್ಷಿಸುವನು. "ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು ನನ್ನನ್ನು ಹಿಡುಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ" ಎಂದು ಅಪೊ. ಪೌಲನು ಹೇಳುತ್ತಾನೆ (ಫಿಲಿ. 3:12). ಕರ್ತನು ತನ್ನ ಮಹಿಮೆಗಾಗಿ ನಿಮ್ಮನ್ನು ಕರೆದಿರುವನು. ಆದ್ದರಿಂದ ಮಹಿಮೆಯ ಮೇಲೆ ಮಹಿಮೆ ಹೊಂದಲು ಪ್ರತಿದಿನವೂ ಪ್ರಯತ್ನಿಸಿ. ಕ್ರಿಸ್ತನಂತೆ ಮಾರ್ಪಡಬೇಕೆಂಬುದೇ ನಿಮ್ಮ ಕರೆ. ಆದಾಮ ಹವ್ವಳು ದೇವರ ಕರೆಯುವಿಕೆಯಲ್ಲಿ ನೆಲೆಯಾಗಿ ನಿಲ್ಲಲಿಲ್ಲ. ದೇವರಿಗೆ ಅವಿಧೇಯರಾಗಿ ದೇವಸಾರೂಪ್ಯವನ್ನು ಕಳೆದುಕೊಂಡರು. ಅವರು ಕಳೆದುಕೊಂಡದ್ದೆಲ್ಲವನ್ನೂ ನಿಮಗೆ ಹಿಂದಿರುಗಿಸಬೇಕೆಂದು ಕರ್ತನು ಬಯಸಿದನು. "ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ" (ಯೋಹಾ. 17:22) ಎಂದು ಕ್ರಿಸ್ತನು ಪ್ರಾರ್ಥಿಸಿದನು.

ದೇವಮಕ್ಕಳೇ, ನಿಮ್ಮನ್ನು ಕರ್ತನು ಮಹಿಮೆ ಪಡಿಸುವನು. ನಿಮ್ಮ ಆರಿಸಿಕೊಳ್ಳುವಿಕೆಯನ್ನು ನಿಮ್ಮ ಕರೆಯನ್ನು ದೃಢಪಡಿಸಿಕೊಂಡು ಅದರಲ್ಲಿ ನೆಲೆನಿಲ್ಲಿ.

*ನೆನಪಿಗೆ : ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು. ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದ್ದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ (ಯೋಹಾನ. 15:16).*

ಸೆಪ್ಟೆಂಬರ್ 28

# ನಿತ್ಯಪ್ರಭಾವಕ್ಕೆಂದು!

ಬೆಳಿಗ್ಗೆ : ಯೆಶಾಯ 5,6
ಸಂಜೆ : ಎಫೆಸ 1

ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು (1ಪೇತ್ರ.5:10).

ನಮ್ಮ ಕರ್ತನು ನಮ್ಮನ್ನು ಪರಿಶುದ್ಧತೆಗಾಗಿ ಕರೆದನು. ಸಮಾಧಾನದಿಂದ ಇರಲು ಕರೆದನು. ಮಾತ್ರವಲ್ಲ, ನಿತ್ಯಮಹಿಮೆಗಾಗಿ ಕರೆದಿರುವನು. ಕರೆದಂಥ ದೇವರು ಸತ್ಯವಂತನು! ನಿಮ್ಮ ಕರೆ, ಆರಿಸುವಿಕೆ ಎಷ್ಟು ದೊಡ್ಡದು! ಕರ್ತನು ಈ ಲೋಕದ ಆಶೀರ್ವಾದಗಳಿಗಾಗಿ ಮಾತ್ರವೇ ನಿಮ್ಮನ್ನು ಕರೆಯಲಿಲ್ಲ. ನಿಮ್ಮನ್ನು ನಿತ್ಯನಿತ್ಯವಾಗಿ ಮಹಿಮೆ ಪಡಿಸಬೇಕೆಂದು ಕರೆದಿರುವನು.

ಸ್ವಲ್ಪ ಚಿಂತಿಸಿನೋಡಿ, ಅನ್ಯರೂ ಪರದೇಶಿಗಳೂ ಆದ ನಿಮ್ಮನ್ನು, ಆತನು ತನ್ನ ಮಕ್ಕಳಾಗಿ ಕರೆದನು. ತನ್ನ ರಕ್ತದಿಂದ ತೊಳೆದು ಪರಿಶುದ್ಧರನ್ನಾಗಿ ಮಾರ್ಪಡಿಸಿದನು. ಆತನ ಕುಟುಂಬದಲ್ಲಿ ಒಬ್ಬರನ್ನಾಗಿ ಕಂಡನು. ಅಪ್ಪಾ ತಂದೆಯೇ ಎಂದು ಕರೆಯುವ ಪುತ್ರಸ್ವೀಕಾರದ ಆತ್ಮವನ್ನು ನೀಡಿರುವನು ಮಾತ್ರವಲ್ಲ, ನನ್ನ ಪ್ರಿಯಳೇ, ಮದುವಣಗಿತ್ತಿಯೇ ಎಂದು ಕರೆಯುವನು. ಆತನ ಕರೆ ಆಶ್ಚರ್ಯಕರವಾದದ್ದು. ನಿತ್ಯಮಹಿಮೆಗೆಂದು ನಿಮ್ಮನ್ನು ಕರೆದಾತನು. ನಿಮ್ಮ ಹೆಸರನ್ನು ಜೀವಬಾಧ್ಯರ ಪುಸ್ತಕದಲ್ಲಿ ಬರೆದಿರುವನು. ನಿಮಗಾಗಿ ನಿತ್ಯರಾಜ್ಯವನ್ನು ಉಂಟುಮಾಡಿರುವನು. ಆತನು ನಿಮ್ಮನ್ನು ತನ್ನ ಮಹಿಮಾಸ್ವರೂಪದಲ್ಲಿಯೇ ರೂಪಾಂತರಪಡಿಸುವನು. ಒಂದು ದಿನ ಮಣ್ಣಾದ ಈ ಶರೀರವು ಮಹಿಮಾಸ್ವರೂಪವನ್ನು ಧರಿಸಿಕೊಳ್ಳುವದು. ಎಂದೆಂದಿಗೂ ನೀವು ಮಹಿಮೆಯ ರಾಜನೊಂದಿಗೆ ಇರುವಿರಿ. "ಜ್ಞಾನಿಗಳು ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು. ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು" ಎಂದು ಸತ್ಯವೇದ ಹೇಳುತ್ತದೆ. (ದಾನಿ. 12:3). ಹೌದು, ನೀವು ಕರ್ತನೊಂದಿಗೆ ಎಂದೆಂದಿಗೂ ಮಹಿಮೆಯಾಗಿ ಪ್ರಕಾಶಿಸುವಿರಿ. ಇದುವೇ ನಿತ್ಯ ಮಹಿಮೆ! ಆ ಕರೆಯನ್ನೂ, ಆರಿಸಿಕೊಳ್ಳುವಿಕೆಯನ್ನೂ ಸ್ವಲ್ಪ ಚಿಂತಿಸಿ ನೋಡಿ, ಕರ್ತನನ್ನು ಕೃತಜ್ಞತೆಯಿಂದ ಸ್ತುತಿಸಿರಿ.

ದೇವಮಕ್ಕಳೇ, ನೀವು ಸತ್ಯವಂತರಾಗಿಯೂ, ಯೋಗ್ಯರಾಗಿಯೂ ನಡೆದುಕೊಳ್ಳಿರಿ. ನಿಮ್ಮನ್ನು ಕರೆದಾತನು ನಂಬಿಗಸ್ಥನಾಗಿರುವಂತೆ ನಿಮ್ಮ ಜೀವಮಾನದ ಕಾಲವೆಲ್ಲಾ ಕರ್ತನ ಮುಂದೆ ನಂಬಿಗಸ್ಥರಾಗಿರ್ರಿ. ತನ್ನ ರಾಜ್ಯ ಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನಡೆಯಬೇಕೆಂದು ಅಪೊ. ಪೌಲನು ಪ್ರಬೋಧಿಸುತ್ತಾನೆ. (1 ಥೆಸ. 2:13).

*ನೆನಪಿಗೆ : ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ..... ಪ್ರಬೋಧಿಸುತ್ತೇನೆ (ಎಫೆ. 4:1).*



ಸೆಪ್ಟೆಂಬರ್ 29

# ಪರಿಶುದ್ಧತೆಗೆ ಕರೆ!

ಬೆಳಿಗ್ಗೆ : ಯೆಶಾಯ 7,8
ಸಂಜೆ : ಎಫೆಸ 2

"ಕ್ರಿಸ್ತೇಸುವಿನಲ್ಲಿ ಪ್ರತಿಷ್ಠಿತರೂ, ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಬರೆಯುವದೇನೆಂದರೆ..." (1 ಕೊರಿಂ. 1:2).

ಕರ್ತನು ನಿಮ್ಮನ್ನು ತನ್ನ ಪರಿಶುದ್ಧತೆಗಾಗಿ ಕರೆದಿರುವನು. ನೀವು ಆತನ ಮುಂದೆ ಪರಿಶುದ್ಧ ಜನರಾಗಿ ಕಾಣಬೇಕೆಂದು ನಿಮ್ಮನ್ನು ಪ್ರತ್ಯೇಕಿಸಿರುವನು. "ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುವದಕ್ಕೆ ಕರೆದನು" ಎಂದು 1 ಥೆಸ. 4:7ರಲ್ಲಿ ಬರೆಯಲ್ಪಟ್ಟಿದೆ.

ಹೌದು, ದೇವರು ಪರಿಶುದ್ಧನಾಗಿರುವಂತೆ, ನೀವೂ ಪರಿಶುದ್ಧರಾಗಿರ್ರಿ. ಪರಿಶುದ್ಧತೆ ಇಲ್ಲದೆ ಯಾರೂ ದೇವರನ್ನು ನೋಡಲಾಗುವದಿಲ್ಲ. ಪರಿಶುದ್ಧತ್ವವೆಂಬ ಭೂಷಣದೊಡನೆ ದೇವರನ್ನು ಆರಾಧಿಸಿರಿ. ಪರಿಶುದ್ಧತೆಗೆಂದು ಕರೆದ ದೇವರು, ಸನ್ಮಾರ್ಗಿಗಳನ್ನೂ, ನೀತಿವಂತರನ್ನೂ ಕರೆಯುತ್ತಾನೆಂದು ಭಾವಿಸಬಾರದು. ಕರ್ತನು ಸಾಧಾರಣ ಮನುಷ್ಯರನ್ನು ಕರೆದು, ಅವರನ್ನು ನೀತಿವಂತರನ್ನಾಗಿಸುವನು. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು" (ಮತ್ತಾ. 9:13, ಮಾರ್ಕ. 2:17, ಲೂಕ. 5:32) ಎಂದು ಕರ್ತನಾದ ಯೇಸುಕ್ರಿಸ್ತನು ಹೇಳಿರುವನಲ್ಲವೇ! ನಾವು ಪಾಪಿಗಳಾಗಿದ್ದಾಗಲೂ ಕರ್ತನು ನಮಗಾಗಿ ಪ್ರಾಣವನ್ನು ಕೊಟ್ಟನು. ತನ್ನ ರಕ್ತದಿಂದ ನಮ್ಮನ್ನು ತೊಳೆದು ನೀತಿವಂತರನ್ನಾಗಿಸಲು ಚಿತ್ತೈಸಿದನು. ನೀವು ಆತನ ಬಳಿಗೆ ಬರುವಾಗ ನಿಮ್ಮ ಪಾಪಗಳನ್ನು ತೊಳೆದು ನೀತಿವಂತರನ್ನಾಗಿಸುವನು. ನೀವು ನೀತಿವಂತರಾಗುವದಕ್ಕೂ ಪರಿಶುದ್ಧರಾಗುವದಕ್ಕೂ ಕರೆಯಲ್ಪಟ್ಟಿದ್ದೀರಿ. ಆತನ ಅನಾದಿ ತೀರ್ಮಾನದಂತೆ ನೀವು ಕರೆಯಲ್ಪಟ್ಟವರು. ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ (ರೋಮಾ.8:28). ದೇವರು ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು. ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು; ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮೆಯ ಪದವಿಗೆ ಸೇರಿಸಿದನು (ರೋಮಾ. 8:30) ಎಂದು ಅಪೊ. ಪೌಲನು ಬರೆಯುತ್ತಾನೆ.

ದೇವಮಕ್ಕಳೇ, ನಿಮ್ಮನ್ನು ಕರೆದ ದೇವರು, ಪರಿಶುದ್ಧತೆಯಲ್ಲಿ ಪರಿಪೂರ್ಣನಾದಾತನು. ಆತನು ಸದ್ಗುಣ ಸಂಪನ್ನನಾಗಿರುವಂತೆ ನೀವೂ ಸದ್ಗುಣ ಸಂಪನ್ನರಾಗಿರಬೇಕೆಂದು ಬಯಸುತ್ತಾನೆ. ಹಾಗೆ ನಿಮ್ಮನ್ನು ನಿಲ್ಲಿಸಲು ಆತನು ಶಕ್ತನಾದಾತನಾಗಿದ್ದಾನೆ. ಇಂದೇ ನಿಮ್ಮ ಶರೀರ, ಆತ್ಮ ಪ್ರಾಣಗಳನ್ನು ಕರ್ತನಿಗೆಂದು ಪ್ರತಿಷ್ಠಿಸಿರಿ. ಆತನೇ ತನ್ನ ಮಾರ್ಗದಲ್ಲಿ ನಿಮ್ಮನ್ನು ನಡೆಸಿ, ಮಹಿಮಾ ಪದವಿಗೆ ಸೇರಿಸುವನು.

*ನೆನಪಿಗೆ : "ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ (ಮತ್ತಾ. 5:48).*

# ಪರಿಶುದ್ಧ ಕರೆ!

ಬೆಳಿಗ್ಗೆ : ಯೆಶಾಯ 9,10
ಸಂಜೆ : ಎಫೆಸ 3

ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು (2 ತಿಮೊ. 1:9).

ಪರಿಶುದ್ಧನಾದ ದೇವರು ನಿಮ್ಮನ್ನು ಪರಿಶುದ್ಧ ಜೀವಿತವನ್ನು ನಡೆಸುವಂತೆ ಕರೆದಿರುವನು. ಆತನು ಅನಾದಿಕಾಲದಲ್ಲಿ ಆ ಕೃಪೆಯನ್ನು ಕ್ರಿಸ್ತಯೇಸುವಿನಲ್ಲಿ ನಮಗೆ ಅನುಗ್ರಹಿಸಿ, ಈಗ ನಮ್ಮ ರಕ್ಷಕನಾದ ಕ್ರಿಸ್ತಯೇಸುವಿನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶ ಪಡಿಸಿದ್ದಾನೆ (2 ತಿಮೊ.1:10). ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುವದಕ್ಕಾಗಿ ಕರೆದಿರುವನು (1 ಥೆಸ.4:7). ಕರ್ತನು ನಿಮ್ಮನ್ನು ದೇವಜನರಾಗಿ ಪರಿಶುದ್ಧ ಜನಾಂಗವಾಗಿ ಪರಿಶುದ್ಧ ಯಾಜಕ ಕೂಟವಾಗಿ, ದೇವಸನ್ನಿಧಿಯಲ್ಲಿ ನಿರಂತರವೂ ನಿಲ್ಲುವದಕ್ಕಾಗಿ ಕರೆದಿರುವನು.

"ಪವಿತ್ರನು ತನ್ನನ್ನು ಇನ್ನೂ ಪವಿತ್ರ ಮಾಡಿಕೊಳ್ಳಲಿ, ಇಗೋ ಬೇಗ ಬರುತ್ತೇನೆ. ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಇದೆ" ಎಂದು ಕರ್ತನು ತಿಳಿಯಪಡಿಸುತ್ತಾನೆ (ಪ್ರಕ. 22:11–12). ಎಲ್ಲದಕ್ಕೂ ಒಂದು ಮಿತಿ ಉಂಟು. ಆದರೆ ಪರಿಶುದ್ಧತೆಗೋ ಮಿತಿ ಎನ್ನುವದೇ ಇಲ್ಲ. ಹಳೆಯ ಒಡಂಬಡಿಕೆಯಲ್ಲಿ ಯಾಜಕರನ್ನು "ಪರಿಶುದ್ಧ ಯಾಜಕ ಕೂಟ" ಎಂದು ಕರ್ತನು ಕರೆದನು. ಆದರೆ ಪರಿಶುದ್ಧತೆ ಎಂಬುದು ಯಾಜಕರಿಗೋ, ದೇವಸೇವಕರಿಗೋ ಮಾತ್ರ ಸೀಮಿತವಲ್ಲ, ಸೇರಿದ್ದಲ್ಲ, ಪ್ರತಿಯೊಬ್ಬ ವಿಶ್ವಾಸಿಗೂ ಪರಿಶುದ್ಧತೆಯ ಅಗತ್ಯತೆ ಉಂಟು. ಪರಿಶುದ್ಧತೆಯನ್ನು ಪ್ರೀತಿಸುವವರು, ಕರ್ತನಿಗೆ ಪ್ರಿಯವಲ್ಲದ ಎಲ್ಲಾ ಸಂಬಂಧಗಳನ್ನು, ಪ್ರಪಂಚದ ಸ್ನೇಹವನ್ನೂ, ತಮ್ಮ ಅಂತರ್ಯದಿಂದ ದೂರಮಾಡಬೇಕು. ಕ್ರಿಸ್ತನಿಗೂ ಪ್ರಾಪಂಚಿಕತೆಗೂ ಸಂಬಂಧವಿಲ್ಲ. ಇರುಳಿಗೂ, ಬೆಳಕಿಗೂ ಐಕ್ಯತೆ ಇಲ್ಲ. ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾದವರು, ಹಳೆಯದೆಲ್ಲವನ್ನು ಬಿಟ್ಟುಬಿಡಬೇಕು. ಎಲ್ಲವೂ ನೂತನವಾಗಬೇಕು.

ದೇವಮಕ್ಕಳೇ, ನಿಮ್ಮ ಕರೆಯನ್ನು ಮಾತ್ರವಲ್ಲ, ನಿಮ್ಮನ್ನು ಕರೆದಾತನನ್ನು ದೃಷ್ಟಿಸಿರಿ. ನಿಮ್ಮನ್ನು ಪರಿಶುದ್ಧ ಮಾರ್ಗದಲ್ಲಿ ನಡೆಸಲು ಆತನು ತನ್ನ ಪರಿಶುದ್ಧ ರಕ್ತವನ್ನು ಸುರಿಸಿರುವನು. ಪರಿಶುದ್ಧ ಸತ್ಯವೇದವನ್ನು ನೀಡಿರುವನು. ಪವಿತ್ರಾತ್ಮನು ಅಭಿಷೇಕಿಸಿರುವನು. ಆದ್ದರಿಂದ ನಿಮ್ಮನ್ನು ಕರೆದ ಪರಿಶುದ್ಧ ಕರೆಯಲ್ಲಿ ನೀವು ನಿಶ್ಚಯವಾಗಿ ಪೂರ್ಣರಾಗಲು ಸಾಧ್ಯ.

*ನೆನಪಿಗೆ : "ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ" (1 ಪೇತ್ರ. 1:15).*